# www.karunaduexams.com

ಪ್ರಚಲಿತ ವಿದ್ಯಮಾನ ಮತ್ತು ಸಾಮಾನ್ಯ ಜ್ಞಾನ ಕ್ವಿಜ್-ಅಕ್ಟೋಬರ್, 2016

www.karunaduexams.com

**ಹೆಚ್ಚಿನ ಮಾಹಿತಿಗಾಗಿ,**

ನೀಮಗೆ ಯಾವುದೇ ಸಹಾಯದ ಅಗತ್ಯವಿದ್ದರೆ, WhatsApp ಮತ್ತು ಸಂದೇಶವನ್ನು ಮಾಡಿ, ದಯವಿಟ್ಟು ಕರೆ ಮಾಡಬೇಡಿ

Mobile: +91- 98805 33259 (Content related queries)

Mobile: +91-9844915689 (Technical and Marketing related queries)

Mobile:+91-9972355744(Management related queries)

www.karunaduexams.com

1. ಈ ಕೆಳಗಿನ ಯಾವ ಧಾರ್ಮಿಕ ಕ್ಷೇತ್ರ ದೇಶದಲ್ಲಿಯೇ ಅತಿ ಸ್ವಚ್ಛ ಧಾರ್ಮಿಕ ಕ್ಷೇತ್ರ ಎಂಬ ಪ್ರಶಸ್ತಿಗೆ ಆಯ್ಕೆಯಾಗಿದೆ?
   ಅ) ತಿರುಪತಿ
   ಆ) ಧರ್ಮಸ್ಥಳ
   ಇ) ಶಿರಡಿ
   ಈ) ಕುಕ್ಕೆ ಸುಬ್ರಮಣ್ಯ
   ಧರ್ಮಸ್ಥಳ
   ಕರ್ನಾಟಕದ ಶ್ರೀ ಧರ್ಮಸ್ಥಳದ ಮಂಜುನಾಥ ಕ್ಷೇತ್ರ ದೇಶದಲ್ಲಿಯೇ ಅತಿ ಸ್ವಚ್ಛ ಧಾರ್ಮಿಕ ಕ್ಷೇತ್ರ ಎಂಬ ಪ್ರಶಸ್ತಿಗೆ ಆಯ್ಕೆಯಾಗಿದೆ. ಇಂಗ್ಲೀಷ್ ಪತ್ರಿಕೆ ಇಂಡಿಯಾ ಟುಡೇ ನಡೆಸಿದ ಸಮೀಕ್ಷೆಯಲ್ಲಿ ಧರ್ಮಸ್ಥಳ ಈ ಕೀರ್ತಿಗೆ ಪಾತ್ರವಾಗಿದೆ. ಇಂಡಿಯಾ ಟುಡೇ ಪತ್ರಿಕಾ ಬಳಗದವರು ನೀಡುತ್ತಿರುವ ಪ್ರಥಮ ರಾಷ್ಟ್ರೀಯ 'ಸಫಾಯಿಗಿರಿ ಪ್ರಶಸ್ತಿ'ಯನ್ನು ಶ್ರೀಕ್ಷೇತ್ರ ಧರ್ಮಸ್ಥಳ ದೇವಸ್ಥಾನಕ್ಕೆ ನೀಡಲಾಗಿದೆ. ಈ ಸಫಾಯಿಗಿರಿ ಪ್ರಶಸ್ತಿಯನ್ನು ಹೊಸದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಕೇಂದ್ರ ನಗರಾಭಿವೃದ್ಧಿ ಹಾಗೂ ವಸತಿ ಸಚಿವ ಎಂ. ವೆಂಕಯ್ಯನಾಯ್ಡುವರಿಂದ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಪರವಾಗಿ ಅವರ ಸಹೋದರ ಡಿ. ಹರ್ಷೇಂದ್ರ ಕುಮಾರ್ ಸ್ವೀಕರಿಸಿದರು.

2. 2016-ಮಲೇಷಿಯಾ ಫಾರ್ಮೂಲ ಓನ್ ಗ್ರಾಂಡ್ ಪ್ರಿಕ್ಸ್ ನಲ್ಲಿ ಪ್ರಶಸ್ತಿ ಗೆದ್ದವರು ಯಾರು?
   ಅ) ಡನಿಯಲ್ ರಿಕ್ಕಿಯಾರ್ಡೊ
   ಆ) ಸೆಬಾಸ್ಟಿಯನ್ ವೆಟ್ಟಲ್
   ಇ) ನಿಕೊ ರೋಸ್ಬರ್ಗ್
   ಈ) ಲೆವಿಸ್ ಹ್ಯಾಮಿಲ್ಟನ್
   ಡನಿಯಲ್ ರಿಕ್ಕಿಯಾರ್ಡೊ
   ರೆಡ್ ಬುಲ್ ಚಾಲಕ ಆಸ್ಟ್ರೇಲಿಯಾದ ಡನಿಯಲ್ ರಿಕ್ಕಿಯಾರ್ಡೊ 2016-ಮಲೇಷಿಯಾ ಫಾರ್ಮೂಲ ಓನ್ ಗ್ರಾಂಡ್ ಪ್ರಿಕ್ಸ್ ನಲ್ಲಿ ವಿಜೇತರಾದರು. ರಿಕ್ಕಿಯರ್ಡೊ ಅವರಿಗೆ ಇದು ನಾಲ್ಕನೇ ಫಾರ್ಮೂಲ ಓನ್ ಗ್ರಾಂಡ್ ಪ್ರಿಕ್ಸ್ ಪ್ರಶಸ್ತಿ.

3. 18 ವರ್ಷದೊಳಗಿನವರ ಏಷ್ಯಾಕಪ್ ಹಾಕಿ ಟೂರ್ನಿಯಲ್ಲಿ ಯಾವ ದೇಶವನ್ನು ಸೋಲಿಸಿ ಭಾರತ ಪ್ರಶಸ್ತಿಯನ್ನು ಗೆದ್ದುಕೊಂಡಿತು?

ಅ) ಪಾಕಿಸ್ತಾನ

ಆ) ಬಾಂಗ್ಲದೇಶ

ಇ) ಶ್ರೀಲಂಕಾ

ಈ) ಜಪಾನ್

ಬಾಂಗ್ಲದೇಶ

18 ವರ್ಷದೊಳಗಿನವರ ಏಷ್ಯಾಕಪ್ ಹಾಕಿ ಟೂರ್ನಿಯಲ್ಲಿ ಭಾರತ ತಂಡ ಬಾಂಗ್ಲದೇಶವನ್ನು ಸೋಲಿಸಿ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಭಾರತದ ಅಭಿಷೇಕ್ ಅವರ ಅಮೋಘ ಆಟದಿಂದಾಗಿ ಫೈನಲ್ ನಲ್ಲಿ ಭಾರತ 5-4 ಗೋಲುಗಳಿಂದ ಬಾಂಗ್ಲದೇಶವನ್ನು ಮಣಿಸಿತು.

4. "ದಿ ಮಿನಿಸ್ಟ್ರಿ ಆಫ್ ಅಟ್ಮೋಸ್ಟ್ ಹ್ಯಾಪಿನೆಸ್ (*The Ministry of Utmost Happiness*)" ಪುಸ್ತಕದ ಲೇಖಕರು ____?

ಅ) ಅರುಂಧತಿ ರಾಯ್

ಆ) ಕಿರಣ್ ದೇಸಾಯಿ

ಇ) ಶೋಭಾ ಡೆ

ಈ) ರವೀಂದ್ರ ಸಿಂಗ್

ಅರುಂಧತಿ ರಾಯ್

"ದಿ ಮಿನಿಸ್ಟ್ರಿ ಆಫ್ ಅಟ್ಮೋಸ್ಟ್ ಹ್ಯಾಪಿನೆಸ್" ಇದು ಲೇಖಕಿ ಅರುಂಧತಿ ರಾಯ್ ಅವರು ಮುಂದಿನ ಪುಸ್ತಕವಾಗಿದೆ. ಜೂನ್, 2017 ರಲ್ಲಿ ಈ ಪುಸ್ತಕ ಬಿಡುಗಡೆಗೊಳ್ಳಲಿರುವುದಾಗಿ ಅರುಂಧತಿ ಅವರು ತಿಳಿಸಿದ್ದಾರೆ. ಅರುಂಧತಿ ರವರು "ದಿ ಗಾಡ್ ಆಫ್ ಸ್ಮಾಲ್ ಥಿಂಗ್ಸ್" ಬಿಡುಗಡೆಗೊಂಡ 19 ವರ್ಷಗಳ ನಂತರ ಅವರ ಇನ್ನೊಂದು ಪುಸ್ತಕ ಬಿಡುಗಡೆಗೊಳ್ಳುತ್ತಿದೆ. ಹಮಿಶ್ ಹಮಿಲ್ಟನ್ ಮತ್ತು ಪೆಂಗ್ವಿನ್ ಇಂಡಿಯಾ ಈ ಪುಸ್ತಕವನ್ನು ಹೊರತರುತ್ತಿವೆ.

5. 2016 ಕೊರಿಯಾ ಗಾಲ್ಫ್ ಓಪನ್ ನಲ್ಲಿ ಪ್ರಶಸ್ತಿ ಗೆದ್ದ ಭಾರತದ ಗಾಲ್ಫ್ ಆಟಗಾರ ಯಾರು?

ಅ) ಚಿಕ್ಕರಂಗಪ್ಪ

ಆ) ಗಗನ್ ಜೀತ್ ಬುಲ್ಲರ್

ಇ) ಅರ್ಜುನ್ ಅತ್ವಲ್

ಈ) ಜ್ಯೋತಿ ರಾಂಧ್ವ

ಗಗನ್ ಜೀತ್ ಬುಲ್ಲರ್

ಐದು ಬಾರಿ ಏಷ್ಯನ್ ಟೂರ್ ಚಾಂಪಿಯನ್ ಆಗಿರುವ ಗಗನ್ ಜೀತ್ ಬುಲ್ಲರ್ ಅವರು 2016 ಕೊರಿಯಾ ಗಾಲ್ಫ್ ಓಪನ್ ನಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡರು. ಬುಲ್ಲರ್ ಅವರು ಒಟ್ಟು 269 ಅಂಕಗಳನ್ನು ಗಳಿಸುವ ಮೂಲಕ ಅಗ್ರಸ್ಥಾನವನ್ನು ಕಾಯ್ದುಕೊಂಡರು.

6. ಬಾಹ್ಯಕಾಶಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಸುದ್ದಿಯಲ್ಲಿದ್ದ 'ಎಲ್ಎಂಸಿ ಪಿ3" _______?

www.karunaduexams.com

ಅ) ಧೂಮಕೇತು

ಆ) ಕ್ಷುದ್ರಗ್ರಹ

ಇ) ಪ್ರಕಾಶಮಾನವಾದ ಅವಳಿ ನಕ್ಷತ್ರ

ಈ) ಅತಿ ದೊಡ್ಡ ಕಪ್ಪು ರಂಧ್ರ

ಪ್ರಕಾಶಮಾನವಾದ ಅವಳಿ ನಕ್ಷತ್ರ

'ಎಲ್‌ಎಂಸಿ ಪಿ3' ಪ್ರಕಾಶಮಾನವಾದ ಅವಳಿ ನಕ್ಷತ್ರ. 'ಎಲ್‌ಎಂಸಿ ಪಿ3' ಯನ್ನು ನಮ್ಮ ಆಕಾಶ ಗಂಗೆಗೆ (ಮಿಲ್ಕಿ ವೇ) ಸಮೀಪದ ನಕ್ಷತ್ರ ಪುಂಜದಲ್ಲಿ ಕಂಡುಹಿಡಿಯಲಾಗಿದೆ. ಗ್ಯಾಮಾ ಕಿರಣಗಳನ್ನು ಸೂಸುವ, ಅತ್ಯಂತ ಪ್ರಕಾಶಮಾನವಾದ ಅವಳಿ ನಕ್ಷತ್ರ ಇದಾಗಿದೆ. ಹತ್ತಿರದ ತಾರಾಪುಂಜವೊಂದರಲ್ಲಿ ಅವಳಿ ನಕ್ಷತ್ರಗಳು (ಬೈನರಿ) ಪತ್ತೆಯಾಗಿರುವುದು ಇದೇ ಮೊದಲು. ಜೊತೆಗೆ, ಇಷ್ಟು ಪ್ರಕಾಶಮಾನವಾಗಿ ಪ್ರಜ್ವಲಿಸುವ ಯುಗಳ ನಕ್ಷತ್ರಗಳು ಇದುವರೆಗೆ ಕಂಡುಬಂದಿರಲಿಲ್ಲ. 'ಎಲ್‌ಎಂಸಿ ಪಿ3' ಯಲ್ಲಿರುವ ಒಂದು ನಕ್ಷತ್ರ ದೊಡ್ಡದಾಗಿದ್ದರೆ, ಮತ್ತೊಂದು ತೀರಾ ಕುಗ್ಗಿರುವ ನಕ್ಷತ್ರ. ಇವೆರಡೂ ಪರಸ್ಪರ ಪ್ರಭಾವ ಬೀರುತ್ತಾ ಗ್ಯಾಮಾ ಕಿರಣಗಳ ಪ್ರವಾಹವನ್ನೇ ಹರಿಸುತ್ತಿವೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

7. ಇತ್ತೀಚೆಗೆ ಭಾರತ ಪ್ಯಾರಿಸ್ ಹವಾಮಾನ ಒಪ್ಪಂದವನ್ನು ಅನುಮೋದಿಸಿದೆ. ಈ ಒಪ್ಪಂದವನ್ನು ಅನುಮೋದಿಸಿದ ಎಷ್ಟನೇ ರಾಷ್ಟ್ರವಾಗಿದೆ?

ಅ) 59

ಆ) 62

ಇ) 43

ಈ) 66

62

ಮಹಾತ್ಮಗಾಂಧಿ ಅವರ 147ನೇ ಜನ್ಮದಿನದಂದು ಭಾರತ ಐತಿಹಾಸಿಕ ಪ್ಯಾರಿಸ್ ಹವಾಮಾನ ಒಪ್ಪಂದವನ್ನು ಅನುಮೋದಿಸಿತು. ಈ ಒಪ್ಪಂದವನ್ನು ಅನುಮೋದಿಸಿದ 62ನೇ ರಾಷ್ಟ್ರ ಭಾರತ ಆಗಿದೆ. ಇಂಗಾಲ ಹೊರಸೂಸುವಿಕೆಯ ಒಟ್ಟು ಪ್ರಮಾಣದಲ್ಲಿ ಭಾರತದ ಪಾಲು ಶೇ 4.1% ರಷ್ಟಿದೆ.

8. ಈ ಕೆಳಗಿನ ಯಾವ ವರ್ಷ “ಪ್ರಾಜೆಕ್ಟ್ ಟೈಗರ್ (Project Tiger)” ಅನ್ನು ಭಾರತದಲ್ಲಿ ಆರಂಭಿಸಲಾಗಿದೆ?

ಅ) 1963

ಆ) 1970

ಇ) 1973

ಈ) 1980

1973

ಏಪ್ರಿಲ್ 1, 1973 ರಂದು ಭಾರತದಲ್ಲಿ ಪ್ರಾಜೆಕ್ಟ್ ಟೈಗರ್ ಅನ್ನು ಆರಂಭಿಸಲಾಯಿತು.

9. ಸ್ವಚ್ಛ ಭಾರತ ಆಂದೋಲದ ಅಂಗವಾಗಿ ನಡೆದ ಕಿರು ಚಲನ ಚಿತ್ರೋತ್ಸವದಲ್ಲಿ ಪ್ರಥಮ ಬಹುಮಾನ ಪಡೆದುಕೊಂಡ ಚಲನಚಿತ್ರ ಯಾವುದು?

www.karunaduexams.com

ಅ) ಮುರ್ಗ
ಆ) ಸ್ವಚ್ಚತ್
ಇ) ಶ್ರಮದಾನ್
ಈ) ಮೇರ ಭಾರತ್
ಮುರ್ಗ

ಸ್ವಚ್ಛ ಭಾರತ ಆಂದೋಲದ ಅಂಗವಾಗಿ ನಡೆದ ಕಿರು ಚಲನ ಚಿತ್ರೋತ್ಸವದಲ್ಲಿ ಮಹಾರಾಷ್ಟ್ರ ಮೂಲದ ಯುವ ನಿರ್ದೇಶಕ ಕಾತ್ಯಾಯನ್ ಶಿವಪುರಿ ಅವರ ಚಿತ್ರ 'ಮುರ್ಗ' ಪ್ರಥಮ ಬಹುಮಾನ ಪಡೆದುಕೊಂಡಿದೆ. ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಎಂ.ವೆಂಕಯ್ಯ ನಾಯ್ಡು ಅವರು ದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಶಿವಪುರಿ ಅವರಿಗೆ ಪ್ರಮಾಣಪತ್ರ ಮತ್ತು ರೂ 10 ಲಕ್ಷ ನಗದು ಬಹುಮಾನ ನೀಡಿ ಗೌರವಿಸಿದರು. ನಾಗರಿಕರು ಮತ್ತು ಮಕ್ಕಳು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳದ ಕಾರಣ ಹೇಗೆ ಸಮಸ್ಯೆಗಳಿಗೆ ಗುರಿಯಾಗುತ್ತಾರೆ ಎಂಬ ವಸ್ತು ವಿಷಯ ಆಧರಿಸಿ 'ಮುರ್ಗ' ಚಲನಚಿತ್ರ ರೂಪುಗೊಂಡಿತ್ತು.

10. ಈ ಕೆಳಗಿನ ನದಿಗಳನ್ನು ಗಮನಿಸಿ:

I) ಗಂಗಾ
II) ಬ್ರಹ್ಮಪುತ್ರ
III) ಸಿಂಧೂ
IV) ಮಹಾನದಿ

ಈ ಮೇಲಿನ ಯಾವ ನದಿಗಳು ಹಿಮಾಲಯ ನದಿ ವ್ಯವಸ್ಥೆಗೆ ಸಂಬಂಧಿಸಿವೆ?

ಅ) I & III
ಆ) I, II & III
ಇ) II & III
ಈ) I, II, III & IV
I, II & III

ಹಿಮಾಲಯ ನದಿ ವ್ಯವಸ್ಥೆಯು ಗಂಗಾ, ಬ್ರಹ್ಮಪುತ್ರ, ಸಿಂಧೂ ಮತ್ತು ಇವುಗಳ ಉಪನದಿಗಳನ್ನು ಒಳಗೊಂಡಿದೆ.

11. ಅಮೆರಿಕನ್ ಅಕಾಡೆಮಿ ಆಫ್ ಆಡಿಯಾಲಜಿ ನೀಡುವ "2016 ಕ್ಲಾಸ್ ಆಫ್ ದಿ ಜೆರ್ಗರ್ ಫ್ಯೂಚರ್ ಲೀಡರ್ ಆಫ್ ಆಡಿಯೋಲಾಜಿ" ಗೌರವಕ್ಕೆ ಪಾತ್ರರಾದ ಭಾರತೀಯ-ಅಮೆರಿಕನ್ ಪ್ರಾಧ್ಯಪಕ ಯಾರು?

ಅ) ವಿನಯ ಮಂಚಯ್ಯ
ಆ) ಪ್ರೀತಂ ಕುಲಕರ್ಣಿ
ಇ) ರಾಜೀವ್ ಶೇಖರನ್
ಈ) ಚಂದನ್ ಮಿಶ್ರ

ವಿನಯ ಮಂಚಯ್ಯ

www.karunaduexams.com

ಟೆಕ್ಸಾಸ್ ನ ಲಾಮರ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಪಕರಾಗಿರುವ ಭಾರತೀಯ ಅಮೆರಿಕನ್ ಪ್ರಾಧ್ಯಪಕ ಡಾ. ವಿನಯ ಮಂಚಯ್ಯ ರವರನ್ನು ಅಮೆರಿಕನ್ ಅಕಾಡೆಮಿ ಆಫ್ ಆಡಿಯಾಲಜಿ ನೀಡುವ "2016 ಕ್ಲಾಸ್ ಆಫ್ ದಿ ಜೆರ್ಗರ್ ಫ್ಯೂಚರ್ ಲೀಡರ್ ಆಫ್ ಆಡಿಯೋಲಾಜಿ" ಗೌರವಕ್ಕೆ ಆಯ್ಕೆಮಾಡಲಾಗಿದೆ (2016 class of the Jerger Future Leaders of Audiology). ಆಡಿಯಾಲಜಿ ಶ್ರವಣ, ಸಮತೋಲನ ಮತ್ತು ಸಂಬಂಧಿತ ಕಾಯಿಲೆಗಳನ್ನು ಅಧ್ಯಯನ ಮಾಡುವ ವಿಜ್ಞಾನದ ಒಂದು ಭಾಗವಾಗಿದೆ.

12. ವಿಶ್ವಬ್ಯಾಂಕ್ ಮುನ್ನೋಟದ ಪ್ರಕಾರ 2017ರಲ್ಲಿ ಭಾರತದ ಒಟ್ಟು ಆಂತರಿಕ ಉತ್ಪಾದನೆ (ಜಿಡಿಪಿ) ಎಷ್ಟಿರಲಿದೆ?

    ಅ) ಶೇ 6.6%

    ಆ) ಶೇ 7.1%

    ಇ) ಶೇ 7.7%

    ಈ) ಶೇ 8.0%

    ಶೇ 7.7%

    ಚೀನಾದ ಮಂದ ಆರ್ಥಿಕ ಪ್ರಗತಿ, ಅಭಿವೃದ್ಧಿ ಹೊಂದಿದ ದೇಶಗಳ ಆರ್ಥಿಕ ಉತ್ತೇಜನ ನೀತಿಯ ಬಗೆಗಿನ ಅನಿಶ್ಚಿತತೆ ಹಾಗೂ ಹಣ ರವಾನೆ ತಗ್ಗಿರುವುದು ಸೇರಿದಂತೆ ಇನ್ನೂ ಹಲವು ಬಾಹ್ಯ ಅಡೆತಡೆಗಳ ಹೊರತಾಗಿಯೂ ಭಾರತದ ಒಟ್ಟು ಆಂತರಿಕ ಉತ್ಪಾದನೆ (ಜಿಡಿಪಿ) 2016ರಲ್ಲಿ ಶೇ 7.6ರಷ್ಟು ಮತ್ತು 2017ರಲ್ಲಿ ಶೇ 7.7ರಷ್ಟು ಇರುವ ನಿರೀಕ್ಷೆ ಇದೆ ಎಂದು ವಿಶ್ವಬ್ಯಾಂಕ್ ತಿಳಿಸಿದೆ. ಕೃಷಿ ವಲಯದ ಚೇತರಿಕೆ, ಏಳನೇ ವೇತನ ಆಗೋಗ ಜಾರಿಯಿಂದ ಖರೀದಿ ಸಾಮರ್ಥ್ಯ ಹೆಚ್ಚಾಗಿರುವುದು, ಅಲ್ಪಾವಧಿಗೆ ಖಾಸಗಿ ಹೂಡಿಕೆ ಪ್ರಮಾಣದಲ್ಲಿ ಏರಿಕೆಯಾಗಿರುವುದು ಇದಕ್ಕೆ ಪ್ರಮುಖ ಕಾರಣವಾಗಿದೆ. ಜಾಗತಿಕ ಆರ್ಥಿಕ ಪ್ರಗತಿಯಲ್ಲಿ ದಕ್ಷಿಣ ಏಷ್ಯಾ ಪ್ರದೇಶವು ಪ್ರಮುಖ ಸ್ಥಾನ ಪಡೆದುಕೊಂಡಿದೆ. ಬಡತನ ನಿರ್ಮೂಲನೆ, ಆರೋಗ್ಯ, ಪೌಷ್ಟಿಕ ಆಹಾರ, ಶಿಕ್ಷಣ ಮತ್ತು ಲಿಂಗ ತಾರತಮ್ಯಗಳು ಭಾರತದ ಬೆಳವಣಿಗೆಗೆ ಎದುರಾಗಿರುವ ಸವಾಲುಗಳಾಗಿವೆ ಎಂದು 'ಸೌತ್ ಏಷ್ಯಾ ಇಕನಾಮಿಕ್ ಫೋಕಸ್' ವರದಿಯಲ್ಲಿ ತಿಳಿಸಲಾಗಿದೆ.

13. ಭಾರತ ಕಾನೂನು ಆಯೋಗದ ಪೂರ್ಣವಾಧಿ ಸದಸ್ಯರಾಗಿ ಇತ್ತೀಚೆಗೆ ಯಾರು ನೇಮಕಗೊಂಡರು?

    ಅ) ಬಾಲಾಜಿ ಶರವಣನ್

    ಆ) ಎಸ್ ಸಿವಕುಮಾರ್

    ಇ) ಗೌರವ್ ಕುಮಾರ್

    ಈ) ಪ್ರಶಾಂತ್ ಭೂಷಣ್

www.karunaduexams.com

ಎಸ್ ಸಿವಕುಮಾರ್

21ನೇ ಭಾರತ ಕಾನೂನು ಆಯೋಗದ ಪೂರ್ಣಾವಧಿ ಸದಸ್ಯರಾಗಿ ಎಸ್ ಶಿವಕುಮಾರ್ ಅವರನ್ನು ಕೇಂದ್ರ ಸರ್ಕಾರ ನೇಮಕ ಮಾಡಿದೆ. ಕೇರಳ ಮೂಲದವರಾದ ಎಸ್ ಸಿವಕುಮಾರ್ ಅವರು ಇಂಡಿಯನ್ ಲಾ ಇನ್ಸ್ ಟಿಟ್ಯೂಟ್, ದೆಹಲಿಯಲ್ಲಿ ಪ್ರಾಧ್ಯಪಕರಾಗಿದ್ದಾರೆ. ಕಾನೂನು ಕುರಿತಾದ ಹಲವಾರು ಪುಸ್ತಕಗಳನ್ನು ಇವರು ಬರೆದಿರುವರು. ಆಡಳಿತಾತ್ಮಕ ಕಾನೂನು ಮತ್ತು ಮಾಧ್ಯಮ ಕಾನೂನಿನಲ್ಲಿ ಪರಿಣಿತಿ ಹೊಂದಿರುವ ಇವರಿಗೆ 2008ರಲ್ಲಿ ರಾಷ್ಟ್ರೀಯ ಕಾನೂನು ಪ್ರಶಸ್ತಿ ಸಂದಿದೆ. ಸುಪ್ರೀಂಕೋರ್ಟ್ನ ನಿವೃತ್ತ ನ್ಯಾಯಾಧೀಶರಾದ ಬಲ್ಬೀರ್ ಸಿಂಗ್ ಚೌಹಣ್ ರವರು 21ನೇ ಕಾನೂನು ಆಯೋಗದ ಅಧ್ಯಕ್ಷರಾಗಿದ್ದಾರೆ.

14. ಈ ಕೆಳಗಿನ ರಾಷ್ಟ್ರಗಳನ್ನು ಗಮನಿಸಿ:

I) ಭಾರತ

II) ಜರ್ಮನಿ

III) ಜಪಾನ್

IV) ಬ್ರೆಜಿಲ್

ಮೇಲಿನ ಯಾವ ರಾಷ್ಟ್ರಗಳು ಜಿ-4 ಸದಸ್ಯ ರಾಷ್ಟ್ರಗಳಾಗಿವೆ?

ಅ) I, II & III

ಆ) II, III & IV

ಇ) I, III & IV

ಈ) I, II, III & IV

I, II, III & IV

ಭಾರತ, ಜರ್ಮನಿ, ಜಪಾನ್ ಮತ್ತು ಬ್ರೆಜಿಲ್ ಜಿ-4 ಸದಸ್ಯ ರಾಷ್ಟ್ರಗಳಾಗಿವೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಖಾಯಂ ಸದಸ್ಯ ಸ್ಥಾನವನ್ನು ಪಡೆದುಕೊಳ್ಳಲು ಪರಸ್ಪರ ಸಹಕರಿಸುವುದು ಜಿ-4 ರಾಷ್ಟ್ರಗಳ ಗುರಿಯಾಗಿದೆ.

15. 68ನೇ ಗಣರಾಜ್ಯೋತ್ಸವ ದಿನದ ಮುಖ್ಯ ಅತಿಥಿಯಾಗಿ ಯಾರು ಭಾಗವಹಿಸಲಿದ್ದಾರೆ?

ಅ) ವ್ಲಾದಿಮಿರ್ ಪುಟಿನ್

ಆ) ಶೇಕ್ ಮೊಹಮದ್ ಬಿನ್ ಜಾಯೆದ್ ಅಲ್ ನಹ್ಯಾನ್

ಇ) ಶೇಕ್ ಅಬ್ದುಲ್ಲಾ ಹುಸೇಲ್ ಖಾನ್

ಈ) ಮ್ಯಾಕ್ಲಂ ಟರ್ನ್ ಬುಲ್

ಶೇಕ್ ಮೊಹಮದ್ ಬಿನ್ ಜಾಯೆದ್ ಅಲ್ ನಹ್ಯಾನ್

www.karunaduexams.com

ಅಬುಧಾಬಿಯ ಯುವರಾಜ ಶೇಕ್ ಮೊಹಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರು ಜನವರಿ 26, 2017 ರಂದು ನಡೆಯಲಿರುವ 68ನೇ ಗಣರಾಜ್ಯೋತ್ಸವದ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಭಾರತದ ಆಹ್ವಾನವನ್ನು ಅಬುಧಾನಿ ಯುವರಾಜ ಒಪ್ಪಿರುವುದಾಗಿ ವಿದೇಶಾಂಗ ಇಲಾಖೆ ವಕ್ತಾರ ವಿಕಾಸ್ ಸ್ವರೂಪ್ ರವರು ತಿಳಿಸಿದ್ದಾರೆ.

16. ಇತ್ತೀಚೆಗೆ ನಿಧನರಾದ "ಯೂಸಫ್ ಅರಕ್ಕಲ್" ರವರು ಯಾವ ಕ್ಷೇತ್ರಕ್ಕೆ ಸಂಬಂಧಿಸಿದ್ದಾರೆ?

ಅ) ಚಿತ್ರಕಲೆ

ಆ) ಸಾಹಿತ್ಯ

ಇ) ಸಿನಿಮಾ

ಈ) ಪರಿಸರ ಸಂರಕ್ಷಣೆ

ಚಿತ್ರಕಲೆ

ಹಿರಿಯ ಚಿತ್ರ ಕಲಾವಿದ ಯೂಸುಫ್ ಅರಕ್ಕಲ್ ಬೆಂಗಳೂರಿನ ತಮ್ಮ ನಿವಾಸದಲ್ಲಿ ನಿಧನರಾದರು. ಅವರಿಗೆ 71 ವರ್ಷ ವಯಸ್ಸಾಗಿತ್ತು. ಕೇರಳದ ಚವಕ್ಕಾಡ್ ಮೂಲದವರಾದರೂ ಯೂಸುಫ್ ಅವರು ಬೆಂಗಳೂರಿನ ಚಿತ್ರಕಲಾ ಪರಿಷತ್ ನಲ್ಲಿ ವಿದ್ಯಾಭ್ಯಾಸ ಮಾಡಿ, ಬೆಂಗಳೂರಿನಲ್ಲೇ ತಮ್ಮ ವೃತ್ತಿ ಬದುಕು ಕಂಡುಕೊಂಡು ಅಂತಾರಾಷ್ಟ್ರೀಯ ಮಟ್ಟಕ್ಕೇರಿದರು. ದೇಶದ ನವ್ಯ ಕಲಾವಿದರ ಸಾಲಿನಲ್ಲಿ ಅಗ್ರಪಂಕ್ತಿಯ ಕಲಾವಿದರಾಗಿದ್ದರು. ಫ್ಲಾರೆನ್ಸ್ ಬಿಯನ್ನಾಲೆಯ ಪ್ರತಿಷ್ಠಿತ ಲಾರೆನ್ಜೋ ಡೆ ಮೆಡಿಸಿ ಸ್ವರ್ಣ ಪದಕ ಗೌರವ ಪಡೆದರು. ರೇಖಾಚಿತ್ರ, ವರ್ಣಚಿತ್ರ, ಶಿಲ್ಪ, ಮ್ಯೂರಲ್, ಮುದ್ರಣ ಕಲೆ ಮತ್ತು ತಮ್ಮದೇ ಶೈಲಿಯ ಛಾಪು ಮೂಡಿಸಿದ್ದರು. ಯೂಸುಫ್ ಅವರಿಗೆ ಎರಡು ಬಾರಿ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ, 1983ರಲ್ಲಿ ರಾಷ್ಟ್ರೀಯ ಪ್ರಶಸ್ತಿ, 1986ರಲ್ಲಿ ಢಾಕಾದಲ್ಲಿ ನಡೆದ ಬಿಯೆನ್ನಾಲೆ ಪ್ರದರ್ಶನದಲ್ಲಿ ವಿಶೇಷ ಪ್ರಶಸ್ತಿ ಲಭಿಸಿತ್ತು.

17. ಅಂತಾರಾಷ್ಟ್ರೀಯ ಹಿರಿಯ ನಾಗರೀಕರ ದಿನವನ್ನು ____ ರಂದು ಆಚರಿಸಲಾಗುತ್ತದೆ. ಬಿಟ್ಟ ಜಾಗವನ್ನು ಕೆಳಗೆ ನೀಡಿರುವ ಸರಿಯಾದ ಉತ್ತರದಿಂದ ತುಂಬಿ.

ಅ) ಸೆಪ್ಟೆಂಬರ್ 30

ಆ) ಅಕ್ಟೋಬರ್ 1

ಇ) ಅಕ್ಟೋಬರ್ 2

ಈ) ಅಕ್ಟೋಬರ್ 3

ಅಕ್ಟೋಬರ್ 1

ವಿಶ್ವ ಹಿರಿಯ ನಾಗರೀಕರ ದಿನವನ್ನು ಪ್ರತಿ ವರ್ಷ ಅಕ್ಟೋಬರ್ 1 ರಂದು ಆಚರಿಸಲಾಗುತ್ತದೆ. ಡಿಸೆಂಬರ್ 14, 1990 ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ 1ನೇ ಅಕ್ಟೋಬರ್ ಅನ್ನು ಅಂತಾರಾಷ್ಟ್ರೀಯ ಹಿರಿಯ ನಾಗರೀಕರ ದಿನವನ್ನಾಗಿ ಆಚರಲಿಸಲು ನಿರ್ಣಯ ಕೈಗೊಳ್ಳಲಾಯಿತು. 60 ವರ್ಷ ದಾಟಿದ ವ್ಯಕ್ತಿಗಳನ್ನು ಹಿರಿಯ ನಾಗರಿಕರೆಂದು



www.karunaduexams.com

ಪರಿಗಣಿಸಲಾಗುತ್ತಿದೆ. ಇತ್ತೀಚಿನ ಜನಗಣತಿ ವರದಿ ಪ್ರಕಾರ ಭಾರತದ ಒಟ್ಟು ಜನಸಂಖ್ಯೆಯಲ್ಲಿ 63 ಕೋಟಿ ಪುರುಷರು, ಹಾಗೂ 58 ಕೋಟಿ ಮಹಿಳೆಯರಿದ್ದಾರೆ. ಅವರಲ್ಲಿ 15 ಕೋಟಿ ಹಿರಿಯ ನಾಗರಿಕರು. Take A Stand Against Ageism ಈ ವರ್ಷದ ಹಿರಿಯರ ದಿನದ ಧ್ಯೇಯವಾಕ್ಯ.

18. ಈ ಕೆಳಗಿನ ಯಾವುದು ದಕ್ಷಿಣ ಅಮೆರಿಕಾ ಖಂಡದಲ್ಲಿ ಅತ್ಯಂತ ಚಿಕ್ಕ ದೇಶ ಎನಿಸಿದೆ?

ಅ) ಸುರಿನಾಮ್

ಆ) ಪೆರು

ಇ) ಕೊಲಂಬಿಯ

ಈ) ಅರ್ಜೆಂಟಿನಾ

ಸುರಿನಾಮ್ ದಕ್ಷಿಣ ಅಮೆರಿಕ ಖಂಡದ ಅತಿ ಚಿಕ್ಕ ದೇಶ. ದಕ್ಷಿಣ ಅಮೆರಿಕಾ ಖಂಡದ ಉತ್ತರ ಭಾಗದಲ್ಲಿರುವ ಸುರಿನಾಮ್ ವಿಸ್ತೀರ್ಣ 63,000 ಚದರ ಕಿ.ಮೀಗಳಷ್ಟಿದ್ದು, ಅಮೆರಿಕಾದ ಜಾರ್ಜಿಯ ರಾಜ್ಯಕ್ಕಿಂತ ಸ್ವಲ್ಪ ದೊಡ್ಡದಿದೆ.

19. ಇತ್ತೀಚೆಗೆ ಯಾವ ದೇಶದ ಕರೆನ್ಸಿ ಅಂತಾರಾಷ್ಟ್ರೀಯ ಹಣಕಾಸು ನಿಧಿಯ (IMF) ಮೀಸಲು ಕರೆನ್ಸಿ ಗುಂಪಿಗೆ ಸೇರ್ಪಡೆಗೊಂಡಿದೆ?

ಅ) ಭಾರತದ ರೂಪಾಯಿ

ಆ) ಚೀನಾದ ಯುವಾನ್

ಇ) ಕುವೈತಿ ದಿನಾರ್

ಈ) ರಷ್ಯಾದ ರುಬಲ್

ಚೀನಾದ ಯುವಾನ್

ಅಂತಾರಾಷ್ಟ್ರೀಯ ಹಣಕಾಸು ನಿಧಿಯ ಮೀಸಲು ಕರೆನ್ಸಿ ಗುಂಪಿಗೆ ಚೀನಾದ ಯುವಾನ್ ಕರೆನ್ಸಿ ಅಧಿಕೃತವಾಗಿ ಸೇರ್ಪಡೆಗೊಂಡಿತು. ಅಮೆರಿಕದ ಡಾಲರ್, ಯುರೋಪಿಯನ್ ಒಕ್ಕೂಟದ ಯುರೋ, ಬ್ರಿಟನ್‌ನ ಪೌಂಡ್, ಜಪಾನ್‌ನ ಯೆನ್ ನಂತರ ಈಗ ಚೀನಾದ ಯುವಾನ್ ಅಂತಾರಾಷ್ಟ್ರೀಯ ಕರೆನ್ಸಿ ಸ್ಥಾನ ಪಡೆದಂತಾಗಿದೆ. ಸ್ಥಿರ ಹಣಕಾಸು ಪರಿಸ್ಥಿತಿ ಹೊಂದಿರುವ ಹಾಗೂ ವ್ಯಾಪಕ ವಿದೇಶಿ ವಹಿವಾಟು ನಡೆಸುವ ದೇಶಗಳ ಕರೆನ್ಸಿಯನ್ನು ಐಎಂಎಫ್ ಮೀಸಲು ಕರೆನ್ಸಿಯಾಗಿ ಪರಿಗಣಿಸುತ್ತದೆ. ಈ ಸ್ಥಾನಮಾನ ಪಡೆದ ದೇಶದ ಕೇಂದ್ರ ಬ್ಯಾಂಕ್, ಪ್ರಮುಖ ಹಣಕಾಸು ಸಂಸ್ಥೆಗಳು ನಿಗದಿತ ಮೊತ್ತದ ಅಂತಾರಾಷ್ಟ್ರೀಯ ಕರೆನ್ಸಿಯನ್ನು ಮೀಸಲಾಗಿ ಇಡಬೇಕಾಗುತ್ತದೆ. ಇದರ ಆಧಾರದ ಮೇಲೆ ಮೀಸಲು ಕರೆನ್ಸಿಯ ಮೌಲ್ಯ ನಿಗದಿಯಾಗುತ್ತದೆ. ಪ್ರಮುಖವಾಗಿ ಚಿನ್ನ, ತೈಲೋತ್ಪನ್ನಗಳ ಬೆಲೆ ನಿಗದಿಪಡಿಸುವಾಗ, ಮೀಸಲಿಟ್ಟ ಅಂತಾರಾಷ್ಟ್ರೀಯ ಕರೆನ್ಸಿಯ ಪ್ರಮಾಣವನ್ನು ಪರಿಗಣಿಸಲಾಗುವುದು.

20. ಈ ಕೆಳಗಿನ ಯಾರು ಇತ್ತೀಚೆಗೆ ರಚಿಸಲಾದ “ಹಣಕಾಸು ನೀತಿ ಸಮಿತಿ (ಎಂಪಿಸಿ)”ಯ ಅಧ್ಯಕ್ಷರಾಗಿರುತ್ತಾರೆ?

www.karunaduexams.com

ಅ) ಹಣಕಾಸು ಸಚಿವರು

ಆ) ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್

ಇ) ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರರು

ಈ) ಪ್ರಧಾನ ಮಂತ್ರಿ

ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್

ಆರು ಜನ ಸದಸ್ಯರನ್ನು ಒಳಗೊಂಡಿರುವ ಹಣಕಾಸು ನೀತಿ ಸಮಿತಿಯನ್ನು ರಚಿಸಿ ಕೇಂದ್ರ ಸರ್ಕಾರ ಅಧಿಕೃತ ಸೂಚನೆಯನ್ನು ಹೊರಡಿಸಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಕಾಯಿದೆ-1934ರ 45ZB ಪ್ರಕರಣದಡಿ ಗೊತ್ತುಪಡಿಸಲಾದ ಅಧಿಕಾರವನ್ನು ಬಳಸಿ ಕೇಂದ್ರ ಹಣಕಾಸು ಸಚಿವರು ಈ ಅಧಿಸೂಚನೆಯನ್ನು ಹೊರಡಿಸಿದ್ದಾರೆ. ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ಈ ಸಮಿತಿಯ ಅಧ್ಯಕ್ಷರಾಗಿದ್ದಾರೆ.

21. ಕೇರಳ ಸರ್ಕಾರದ "ಹರಿಥ ಕೇರಳಂ (ಹಸಿರು ಕೇರಳ)" ಯೋಜನೆಯ ರಾಯಭಾರಿಯಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಸಚಿನ್ ತೆಂಡೂಲ್ಕರ್

ಆ) ಕೆ ಜೆ ಜೇಸುದಾಸ್

ಇ) ಅನಿಲ್ ಕುಂಬ್ಳೆ

ಈ) ಎ ಆರ್ ರೆಹಮಾನ್

ಕೆ ಜೆ ಜೇಸುದಾಸ್

ಖ್ಯಾತ ಹಿನ್ನಲೆ ಗಾಯಕ ಕೆ ಜೆ ಜೇಸುದಾಸ್ ಅವರನ್ನು ಕೇರಳ ಸರ್ಕಾರದ "ಹಸಿರು ಕೇರಳ" ಯೋಜನೆಯ ರಾಯಭಾರಿಯನ್ನಾಗಿ ನೇಮಕ ಮಾಡಲಾಗಿದೆ. ಈ ಯೋಜನೆಯಡಿ ಕೇರಳದ ನಗರಗಳನ್ನು ಕಸ ಮುಕ್ತ ಮತ್ತು ಸ್ವಚ್ಚ ನಗರವನ್ನಾಗಿ ಮಾಡಲು ಪಣ ತೊಡಲಾಗಿದೆ.

22. ಇತ್ತೀಚೆಗೆ ಯಾವ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶೀಥಲೀಕರಣ ಘಟಕವನ್ನು ಪ್ರಾಯೋಗಿಕವಾಗಿ ಆರಂಭಿಸುವ ಮೂಲಕ, ಶೀಥಲೀಕರಣ ಘಟಕ ಹೊಂದಿರುವ ದೇಶದ ಮೊದಲ ವಿಮಾನಿಲ್ದಾಣ ಎನಿಸಿದೆ?

ಅ) ಇಂದಿರಾ ಗಾಂಧಿ ವಿಮಾನ ನಿಲ್ದಾಣ

ಆ) ಕೆಂಪೇಗೌಡ ವಿಮಾನ ನಿಲ್ದಾಣ

ಇ) ರಾಜೀವ್ ಗಾಂಧಿ ವಿಮಾನ ನಿಲ್ದಾಣ

ಈ) ಜವಹರಲಾಲ್ ನೆಹರು ವಿಮಾನ ನಿಲ್ದಾಣ

ಕೆಂಪೇಗೌಡ ವಿಮಾನ ನಿಲ್ದಾಣ

ಶೀಘ್ರವಾಗಿ ಕೊಳೆಯಬಲ್ಲ ಪದಾರ್ಥಗಳ ಸಂರಕ್ಷಣೆ ಮತ್ತು ನಿರ್ವಹಣೆಗೆ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶೀಥಲೀಕರಣ ಘಟಕವನ್ನು ಪ್ರಾಯೋಗಿಕವಾಗಿ ಆರಂಭಿಸಲಾಗಿದೆ. ಎಐಸ್ಯಾಟ್ಸ್ ಕೂಲ್ ಪೋರ್ಟ್

www.karunaduexams.com

(AISATS COOLPORT) ಹೆಸರನ ಘಟಕವನ್ನು ಏರ್ ಇಂಡಿಯಾ ಸ್ಯಾಟ್ಸ್ ಏರ್ ಪೋರ್ಟ್ ಸರ್ವೀಸ್ ಕಂಪನಿ ನಿರ್ವಹಿಸುತ್ತಿದ್ದು, ಇಂತಹ ಘಟಕ ಏರ್ ಪೋರ್ಟ್ ನಲ್ಲಿ ನಿರ್ಮಾಣಗೊಂಡಿರುವುದು ದೇಶದಲ್ಲೇ ಮೊದಲು. ವಾರ್ಷಿಕವಾಗಿ 40,000 ಟನ್ ಉತ್ಪನ್ನಗಳ ನಿರ್ವಹಣೆ ಈ ಘಟಕದಿಂದ ಸಾಧ್ಯವಾಗಲಿದೆ. ಹಣ್ಣು, ತರಕಾರಿ, ಹೂವು, ಫೌಲ್ಟ್ರಿ, ಸಾಗರ ಆಹಾರ ಉತ್ಪನ್ನಗಳು ಇದರಲ್ಲಿ ಶೇಖರಿಸಿಡಬಹುದು.

23. "ಸಾಡೇಲ್ ಪೀಕ್ (Saddle Peak)" ಈ ಕೆಳಗಿನ ಯಾವ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಎತ್ತರದ ಶಿಖರ?

ಅ) ಕೇರಳ

ಆ) ಅಂಡಮಾನ್ ನಿಕೋಬರ್

ಇ) ಲಕ್ಷದ್ವೀಪ

ಈ) ಪಶ್ಚಿಮ ಬಂಗಾಳ

ಅಂಡಮಾನ್ ನಿಕೋಬರ್

ಸಾಡೇಲ್ ಪೀಕ್ ಶಿಖರ ಅಂಡಮಾನ್ ಮತ್ತು ನಿಕೋಬರ್ ದ್ವೀಪ ಪ್ರದೇಶದಲ್ಲಿದೆ. 732 ಮೀ ಎತ್ತರವಿರುವ ಸಾಡೇಲ್ ಪೀಕ್ ಶಿಖರ ಬಂಗಾಳ ಕೊಲ್ಲಿಯ ಅತ್ಯಂತ ಎತ್ತರದ ದ್ವೀಪ ಪ್ರದೇಶ ಹಾಗೂ ಅಂಡಮಾನ್ ನಿಕೋಬರ್ ನ ಎತ್ತರದ ಪ್ರದೇಶ. ಈ ಶಿಖರವು ಸಾಡೇಲ್ ಪೀಕ್ ರಾಷ್ಟ್ರೀಯ ಉದ್ಯಾನವನದಿಂದ ಸುತ್ತುವರೆದಿದೆ.

24. ಪ್ರಪ್ರಥಮ "ಬ್ರಿಕ್ಸ್-ವ್ಯಾಪಾರ ಮೇಳ ಮತ್ತು ಪ್ರದರ್ಶನ (first-ever BRICS trade fair & exhibition)" ಯಾವ ನಗರದಲ್ಲಿ ನಡೆಯಲಿದೆ?

ಅ) ಕೊಲ್ಕತ್ತ

ಆ) ಭೂಪಾಲ್

ಇ) ನವದೆಹಲಿ

ಈ) ಪುಣೆ

ನವದೆಹಲಿ

ಪ್ರಥಮ ಬ್ರಿಕ್ಸ್-ವ್ಯಾಪಾರ ಮೇಳ ಮತ್ತು ಪ್ರದರ್ಶನ ನವದೆಹಲಿಯ ಪ್ರಗತಿ ಮೈದಾನದಲ್ಲಿ ಅಕ್ಟೋಬರ್ 12-14ವರೆಗೆ ನಡೆಯಲಿದೆ. ಬ್ರಿಕ್ಸ್ ರಾಷ್ಟ್ರಗಳ ನಡುವೆ ವ್ಯಾಪಾರ ವ್ಯವಹಾರ ವೃದ್ದಿಸಲು ಇದು ವೇದಿಕೆ ಆಗಲಿದೆ. "ಬಿಲ್ಡಿಂಗ್ ಬ್ರಿಕ್ಸ್-ಇನೋವೇಶನ್ ಫಾರ್ ಕೊಲಬ್ರೇಷನ್ (Building BRICS – Innovation for Collaboration)" ಈ ಮೇಳದ ಥೀಮ್. ಏರೋಸ್ಪೇಸ್, ಕೃಷಿ ಸಂಸ್ಕರಣೆ, ಜವಳಿ, ರೈಲ್ವೆ, ಆರೋಗ್ಯ ಸೇವೆ, ಮೂಲಭೂತ ಸೌಕರ್ಯ, ಐಟಿ, ಪ್ರವಾಸೋದ್ಯಮ, ಆಭರಣ ಸೇರಿದಂತೆ ಸುಮಾರು 20ಕ್ಕೂ ಹೆಚ್ಚು ವಲಯಗಳಿಗೆ ಸಂಬಂಧಿಸಿದ ಪ್ರದರ್ಶನವಿರಲಿದೆ.

25. ಸಾಗರೋತ್ತರ ಭಾರತೀಯರಿಗೆ ಮೀಸಲಾದ "ಪ್ರವಾಸಿ ಭಾರತೀಯ ಕೇಂದ್ರ"ವನ್ನು ಎಲ್ಲಿ ಉದ್ಘಾಟಿಸಲಾಯಿತು?

www.karunaduexams.com

ಅ) ಮುಂಬೈ

ಆ) ನವದೆಹಲಿ

ಇ) ಹೈದ್ರಾಬಾದ್

ಈ) ಬೆಂಗಳೂರು

ನೂತನವಾಗಿ ನಿರ್ಮಿಸಿರುವ "ಪ್ರವಾಸಿ ಭಾರತೀಯ ಕೇಂದ್ರ"ವನ್ನು ಪ್ರಧಾನಿ ಮೋದಿರವರು ನವದೆಹಲಿಯಲ್ಲಿ ಉದ್ಘಾಟಿಸಿದರು.

26. "2016 ವಿಶ್ವ ಆವಾಸ ದಿನ (World Habitat Day)"ದ ಧ್ಯೇಯವಾಕ್ಯ ______?

ಅ) ಹೌಸಿಂಗ್ ಫಾರ್ ಆಲ್

ಆ) ಹೌಸಿಂಗ್ ಅಟ್ ದಿ ಸೆಂಟರ್

ಇ) ನ್ಯೂ ಸ್ಪೇಸ್, ನ್ಯೂ ಹೋಪ್

ಈ) ವರ್ಲ್ಡ್ ವಿತ್ ನೊ ಹೌಸ್ ಲೆಸ್

ಹೌಸಿಂಗ್ ಅಟ್ ದಿ ಸೆಂಟರ್

ವಿಶ್ವ ಆವಾಸ ದಿನವನ್ನು ಪ್ರತಿ ವರ್ಷ ಅಕ್ಟೋಬರ್ ತಿಂಗಳ ಮೊದಲ ಸೋಮವಾರದಂದು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ಈ ವರ್ಷ ಅಕ್ಟೋಬರ್ 3 ರಂದು ವಿಶ್ವ ಆವಾಸ ದಿನವನ್ನು ಆಚರಿಸಲಾಯಿತು. ನಗರ ಪ್ರದೇಶಗಳು, ನಗರ ಮತ್ತು ಪಟ್ಟಣಗಳಲ್ಲಿ ಕೈಗೆಟುವ ವಸತಿ ಅಗತ್ಯದ ಬಗ್ಗೆ ಅರಿವು ಮೂಡಿಸುವುದು ವಿಶ್ವ ಆವಾಸ ದಿನದ ಉದ್ದೇಶ. "ಹೌಸಿಂಗ್ ಅಟ್ ದಿ ಸೆಂಟರ್ (Housing at the Cetre)" ಇದು ಈ ವರ್ಷದ ವಿಶ್ವ ಆವಾಸ ದಿನದ ಥೀಮ್.

27. "ಭಾರತೀಯ ದ್ವಿದಳ ಧಾನ್ಯ ಸಂಶೋಧನಾ ಸಂಸ್ಥೆ (Indian Institute of Pulses Research)" ಎಲ್ಲಿದೆ?

ಅ) ಹೈದ್ರಾಬಾದ್, ತೆಲಂಗಣ

ಆ) ಕಾನ್ಪುರ, ಉತ್ತರ ಪ್ರದೇಶ

ಇ) ಭೂಪಾಲ್, ಮಧ್ಯ ಪ್ರದೇಶ

ಈ) ಗುಂಟೂರು, ಆಂಧ್ರ ಪ್ರದೇಶ

ಕಾನ್ಪುರ, ಉತ್ತರ ಪ್ರದೇಶ

www.karunaduexams.com

ಭಾರತೀಯ ದ್ವಿದಳ ಧಾನ್ಯ ಸಂಶೋಧನಾ ಸಂಸ್ಥೆ ಉತ್ತರ ಪ್ರದೇಶದ ಕಾನ್ಪುರದಲ್ಲಿದೆ. ಭಾರತೀಯ ಕೃಷಿ ಸಂಶೋಧನಾ ಮಂಡಳಿ ಈ ಸಂಸ್ಥೆಯನ್ನು 1983ರಲ್ಲಿ ಸ್ಥಾಪಿಸಿದ್ದು, ದ್ವಿದಳ ಧಾನ್ಯಗಳಿಗೆ ಸಂಬಂಧಿಸಿದಂತೆ ಸಂಶೋಧನೆಯನ್ನು ಇಲ್ಲಿ ನಡೆಸಲಾಗುತ್ತಿದೆ.

28. ರಫೆಲ್ ಜೆಟ್ ತಯಾರಿಕೆ ಸಂಬಂಧ ಫ್ರಾನ್ಸ್ ನ ಡಸಾಲ್ಟ್ ಏವಿಯೇಷನ್ ಸಂಸ್ಥೆ ಭಾರತದ ಯಾವ ಸಂಸ್ಥೆಯೊಂದಿಗೆ ಇತ್ತೀಚೆಗೆ ಒಪ್ಪಂದ ಮಾಡಿಕೊಂಡಿದೆ?

ಅ) ರಿಲಯನ್ಸ್

ಆ) ಟಾಟಾ

ಇ) ಮಹೀಂದ್ರ

ಈ) ಎಲ್ & ಟಿ

ರಿಲಯನ್ಸ್

ಅನಿಲ್ ಅಂಬಾನಿ ನೇತೃತ್ವದ ರಿಲಯನ್ಸ್ ಮತ್ತು ಫ್ರಾನ್ಸ್ ನ ಡಸಾಲ್ಟ್ ಏವೀಯೇಷನ್ ನಡುವೆ ರಫೆಲ್ ಯುದ್ಧ ವಿಮಾನ ತಯಾರಿಕೆ ಸಂಬಂಧ ಒಪ್ಪಂದ ಏರ್ಪಟ್ಟಿದೆ. ಈ ಜಂಟಿ ಉದ್ದಿಮೆಯನ್ನು ಇನ್ನು ಮುಂದೆ ಡಸಾಲ್ಟ್ ರಿಲಯನ್ಸ್ ಏರೋಸ್ಪೇಸ್ ಎನ್ನಲಾಗುವುದು. ಫ್ರಾನ್ಸ್ ನಿಂದ ಭಾರತ ಖರೀದಿಸಲಿರುವ 36 ರಫೆಲ್ ಜೆಟ್ಗಳ ತಯಾರಿಕೆಗೆ ಡಸಾಲ್ಟ್ ರಿಲಯನ್ಸ್ ಏರೋಸ್ಪೇಸ್ ಅಗತ್ಯ ಸೇವೆಯನ್ನು ಒದಗಿಸಲಿದೆ. ಸುಮಾರು ರೂ 30,000 ಕೋಟಿ ಒಪ್ಪಂದ ಇದಾಗಿದ್ದು, ಭಾರತದ ರಕ್ಷಣಾ ತಯಾರಿಕ ಸಂಸ್ಥೆಯೊಂದು ಇಷ್ಟು ದೊಡ್ಡ ಮೊತ್ತದ ಒಪ್ಪಂದಕ್ಕೆ ಸಹಿಹಾಕಿರುವುದು ಇದೇ ಮೊದಲು.

29. ಪನಾಮ ಕಾಲುವೆಯು ಈ ಕೆಳಗಿನ ಯಾವ ಎರಡು ಸಾಗರಗಳನ್ನು ಸಂಪರ್ಕಿಸುತ್ತದೆ?

ಅ) ಅಟ್ಲಾಂಟಿಕ್ ಮತ್ತು ಫೆಸಿಫಿಕ್

ಆ) ಫೆಸಿಫಿಕ್ ಮತ್ತು ಅರ್ಕಟಿಕ್

ಇ) ಅಟ್ಲಾಂಟಿಕ್ ಮತ್ತು ಮೆಡಿಟೇರಿಯನ್

ಈ) ಮೆಡಿಟೇರಿಯನ್ ಮತ್ತು ಕೆಂಪು ಸಮುದ್ರ

ಅಟ್ಲಾಂಟಿಕ್ ಮತ್ತು ಫೆಸಿಫಿಕ್

ಪನಾಮ ಕಾಲುವೆ ಮಾನವ ನಿರ್ಮಿತ ಕಾಲುವೆಯಾಗಿದ್ದು, ಅಟ್ಲಾಂಟಿಕ್ ಮತ್ತು ಫೆಸಿಫಿಕ್ ಸಂಧಿಸುತ್ತದೆ. ಈ ಕಾಲುವೆಯು 77 ಕಿ.ಮೀ ಉದ್ದವಿದೆ.

30. ಇತ್ತೀಚೆಗೆ ಬಿಡುಗಡೆಗೊಂಡ "Modi's Midas Touch in Foreign Policy" ಪುಸ್ತಕದ ಲೇಖಕರು ______?

ಅ) ಸುರೇಂದ್ರ ಕುಮಾರ್

ಆ) ವಿಕಾಸ್ ಸ್ವರೂಪ್

ಇ) ವಿಶಾಲ್ ಭಟ್

ಈ) ಸುಷ್ಮಾ ಸ್ವರಾಜ್

ಸುರೇಂದ್ರ ಕುಮಾರ್

ಮಾಜಿ ರಾಯಭಾರಿ ಸುರೇಂದ್ರ ಕುಮಾರ್ "Modi's Midas Touch in Foreign Policy" ಪುಸ್ತಕದ ಲೇಖಕರು. ಕೇಂದ್ರ ನಗರಾಭಿವೃದ್ದಿ ಸಚಿವ ವೆಂಕಯ್ಯನಾಯ್ಡು ರವರು ಈ ಪುಸ್ತಕವನ್ನು ಬಿಡುಗಡೆಗೊಳಿಸಿದರು. ಪ್ರಧಾನಿ ನರೇಂದ್ರ ಮೋದಿರವರ ಎರಡುವರೆ ವರ್ಷ ಆಡಳಿತದಲ್ಲಿ ಆಗಿರುವ ಪ್ರಗತಿ ಮತ್ತು ಅಳವಡಿಸಿಕೊಂಡಿರಲಾಗಿರುವ ವಿದೇಶಾಂಗ ನೀತಿಗಳ ಬಗ್ಗೆ ಪುಸ್ತಕದಲ್ಲಿ ಹೇಳಲಾಗಿದೆ.

31. ಇತ್ತೀಚೆಗೆ ಮ್ಯಾನ್ಮಾರ್ ನ ಯಾಂಗೋನ್ ನಲ್ಲಿ ಬ್ಯಾಂಕ್ ಶಾಖೆ ತೆರೆದ ಭಾರತದ ಮೊದಲ ದೇಶಿಯ ಬ್ಯಾಂಕ್ ಯಾವುದು?

ಅ) ಭಾರತೀಯ ಸ್ಟೇಟ್ ಬ್ಯಾಂಕ್

ಆ) ಕೆನರ ಬ್ಯಾಂಕ್

ಇ) ಸಿಂಡಿಕೇಟ್ ಬ್ಯಾಂಕ್

ಈ) ವಿಜಯಾ ಬ್ಯಾಂಕ್

ಭಾರತೀಯ ಸ್ಟೇಟ್ ಬ್ಯಾಂಕ್

ಸಾರ್ವಜನಿಕ ವಲಯದ ಅತಿ ದೊಡ್ಡ ಬ್ಯಾಂಕ್ ಆಗಿರುವ ಭಾರತೀಯ ರಿಸರ್ವ್ ಬ್ಯಾಂಕ್ ಮ್ಯಾನ್ಮಾರ್ ರಾಜಧಾನಿ ಯಾಂಗೋನ್ ನಲ್ಲಿ ಬ್ಯಾಂಕ್ ಶಾಖೆಯನ್ನು ತೆರೆದಿದ್ದು, ಇಲ್ಲಿ ಬ್ಯಾಂಕ್ ಶಾಖೆ ತೆರೆದ ಮೊದಲ ದೇಶಿಯ ಬ್ಯಾಂಕ್ ಎನಿಸಿದೆ. ಜ್ಞಾನಶ್ಯಾಮ್ ಶ್ರೀವತ್ಸವ ಅವರನ್ನು ಯಾಂಗೋನ್ ಶಾಖೆಯ ಸಿಇಓ ಆಗಿ ನೇಮಿಸಲಾಗಿದೆ. ವಿದೇಶಗಳಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ ತೆರೆಯುತ್ತಿರುವ 54ನೇ ಶಾಖೆ ಇದಾಗಿದೆ. ಭಾರತೀಯ ಸ್ಟೇಟ್ ಬ್ಯಾಂಕ್ 37 ದೇಶಗಳಲ್ಲಿ ತನ್ನ ಶಾಖೆಗಳನ್ನು ಹೊಂದಿದೆ.

32. "ಕೆರ್ಸ್ಟಿ ಕಜುಲೈದ್" ಯಾವ ದೇಶದ ಮೊದಲ ಮಹಿಳಾ ರಾಷ್ಟ್ರಾಧ್ಯಕ್ಷರಾಗಿ ಇತ್ತೀಚೆಗೆ ಆಯ್ಕೆಯಾಗಿದ್ದಾರೆ?

ಅ) ಉಗಾಂಡ

ಆ) ಬ್ರೆಜಿಲ್

ಇ) ಇಸ್ಟೋನಿಯಾ

ಈ) ಅಲ್ಜೀರಿಯಾ

ಇಸ್ಟೋನಿಯಾ

www.karunaduexams.com

ಇಸ್ಟೋನಿಯಾದ ಸಂಸತ್ತು ಕೆರ್ಸ್ಟಿ ಕಜುಲೈದ್ (Kersti Kaljulaid) ಅವರನ್ನು ಇಸ್ಟೋನಿಯಾದ ಅಧ್ಯಕ್ಷರನ್ನಾಗಿ ಆಯ್ಕೆಮಾಡಿದೆ. ಕೆರ್ಸ್ಟಿ ಕಜುಲೈದ್ ಅವರು ಇಸ್ಟೋನಿಯಾದ ಮೊದಲ ಮಹಿಳಾ ಅಧ್ಯಕ್ಷರಾಗಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 20 ಸದಸ್ಯರ ಗೈರು ಹಾಜರಿ ಹೊರತಾಗಿಯೂ ಕೆರ್ಸ್ಟಿ ಅವರ ಪರವಾಗಿ 81-0 ಮತಗಳು ದಾಖಲಾದವು. ಕೆರ್ಸ್ಟಿ ಕಜುಲೈದ್ ಇಸ್ಟೋನಿಯಾದ ಐದನೇ ರಾಷ್ಟ್ರಧ್ಯಕ್ಷರಾಗಿದ್ದು, ಅಕ್ಟೋಬರ್ 10, 2016 ರಂದು ಅಧಿಕಾರವಹಿಸಿಕೊಳ್ಳಲಿದ್ದಾರೆ. ಕೆರ್ಸ್ಟಿ ಅವರು ಇಸ್ಟೋನಿಯಾದ ರಾಷ್ಟ್ರಧ್ಯಕ್ಷ ಹುದ್ದೆಯನ್ನು ಅಲಂಕರಿಸಿದ ಕಿರಿಯ ವ್ಯಕ್ತಿ ಸಹ ಆಗಿದ್ದಾರೆ.

33. ______ ರಂದು ವಿಶ್ವ ಶಿಕ್ಷಕರ ದಿನವನ್ನು ಆಚರಿಸಲಾಗುತ್ತದೆ?

ಅ) ಅಕ್ಟೋಬರ್ 3

ಆ) ಅಕ್ಟೋಬರ್ 4

ಇ) ಅಕ್ಟೋಬರ್ 5

ಈ) ಅಕ್ಟೋಬರ್ 6

ಅಕ್ಟೋಬರ್ 5

ವಿಶ್ವ ಶಿಕ್ಷಕರ ದಿನವನ್ನು ಪ್ರತಿ ವರ್ಷ ಅಕ್ಟೋಬರ್ 5 ರಂದು ಆಚರಿಸಲಾಗುತ್ತದೆ. ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳಲ್ಲಿ ಪ್ರತಿ ವರ್ಷ ಅಕ್ಟೋಬರ್ 5 ರಂದು "ವಿಶ್ವ ಶಿಕ್ಷಕರ ದಿನ" ವನ್ನು ಆಚರಿಸಬೇಕೆಂದು "ಯುನೆಸ್ಕೋ " ಕರೆ ನೀಡಿದೆ. 1966 ರರ ಅಕ್ಟೋಬರ್ 5 ರಂದು ಯುನೆಸ್ಕೋ ಮತ್ತು ವಿಶ್ವ ಕಾರ್ಮಿಕ ಸಂಸ್ಥೆಯ ನಡುವಿನ ಒಪ್ಪಂದದ ಪ್ರಕಾರ 1994 ರ ಅಕ್ಟೋಬರ್ 5ರಿಂದ "ವಿಶ್ವ ಶಿಕ್ಷಕರ ದಿನ"ವನ್ನಾಚರಿಸಲಾಗುತ್ತದೆ. Valuing Teachers, Improving their Status ಈ ವರ್ಷದ ವಿಶ್ವ ಶಿಕ್ಷಕರ ದಿನದ ಥೀಮ್.

34. ಇತ್ತೀಚೆಗೆ “ಮೌಂಟ್ ಚೊ ಒಯು (Mount Cho Oyu)” ಪರ್ವತವನ್ನು ಹತ್ತುವ ಮೂಲಕ ಈ ಸಾಧನೆ ಮಾಡಿದೆ ವಿಶ್ವದ ಕಿರಿಯ ಎನಿಸಿದ ಭಾರತದ ಪರ್ವತರೋಹಿ ಯಾರು?

ಅ) ಮಸ್ತನ್ ಬಾಬು ಮಲ್ಲಿ

ಆ) ಅರ್ಜುನ್ ವಾಜಪೇಯಿ

ಇ) ಬೈಚುಂಗ್ ವಾಗ

ಈ) ಸುಬ್ರಮಣ್ಯಂ ರಾವ್

ಅರ್ಜುನ್ ವಾಜಪೇಯಿ

www.karunaduexams.com

ಭಾರತ ವೃತ್ತಿಪರ ಪರ್ವತರೋಹಿ ಅರ್ಜುನ್ ವಾಜಪೇಯಿ ಅವರು ವಿಶ್ವದ 6ನೇ ಅತಿದೊಡ್ಡ ಪರ್ವತ ಎನಿಸಿರುವ "ಮೌಂಟ್ ಚೊ ಒಯು" ಯಶಸ್ವಿಯಾಗಿ ಹತ್ತಿದ್ದರು. ಮೌಂಟ್ ಚೊ ಒಯು ಪರ್ವತ ಚೀನಾ ಮತ್ತು ಟಿಬೆಟ್ ನಡುವೆ, ಮೌಂಟ್ ಎವರೆಸ್ಟ್ ನಿಂದ ಪಶ್ಚಿಮಕ್ಕೆ 20 ಕಿ.ಮೀ ದೂರದಲ್ಲಿದೆ. ಅಜುರ್ನ್ ಅವರು ಈ ಪರ್ವತವನ್ನು ಹತ್ತುವ ಮೂಲಕ ಈ ಸಾಧನೆ ಮಾಡಿದ ವಿಶ್ವದ ಕಿರಿಯ ಪರ್ವತರೋಹಿ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ವಿಶ್ವದ ಅತಿ ಎತ್ತರದ 14 ಪರ್ವತಗಳ ಪೈಕಿ ಈಗಾಗಲೇ ಐದು ಪರ್ವತಗಳನ್ನು ಅರ್ಜುನ್ ಅವರು ಯಶಸ್ವಿಯಾಗಿ ಹತ್ತಿದ್ದಾರೆ.

35. ಈ ಕೆಳಗಿನ ದೇಶಗಳನ್ನು ಗಮನಿಸಿ:

I) ತಾಂಜಾನಿಯಾ

II) ಕೀನ್ಯಾ

III) ಉಗಾಂಡ

ಪ್ರಸಿದ್ಧ ವಿಕ್ಟೋರಿಯಾ ಸರೋವರ ಅನ್ನು ಹಂಚಿಕೊಂಡಿರುವ ರಾಷ್ಟ್ರಗಳು ಯಾವುವು?

ಅ) I & II

ಆ) II & III

ಇ) I & III

ಈ) I, II & III

I, II & III

ಲೇಕ್ ವಿಕ್ಟೋರಿಯಾ ಆಫ್ರಿಕಾದ ಪ್ರಸಿದ್ಧ ಸರೋವರ. ವಿಕ್ಟೋರಿಯಾ ಸರೋವರವು ಕೀನ್ಯಾ, ತಾಂಜಾನಿಯಾ ಮತ್ತು ಉಗಾಂಡ ರಾಷ್ಟ್ರಗಳು ಹಂಚಿಕೊಂಡಿವೆ. ಸರೋವರದ ಒಟ್ಟು ಭಾಗದಲ್ಲಿ ತಂಜಾನಿಯಾ ಶೇ 49%, ಉಗಾಂಡ ಶೇ 45% ಹಾಗೂ ಕೀನ್ಯಾ ಶೇ 6% ಹೊಂದಿವೆ.

36. "2016 ಕಾಮನ್ ವೆಲ್ತ್ ಹಣಕಾಸು ಸಚಿವರ ಸಭೆ" ಯಾವ ನಗರದಲ್ಲಿ ಆಯೋಜಿಸಲಾಗಿತ್ತು?

ಅ) ನವದೆಹಲಿ

ಆ) ವಾಷಿಂಗ್ ಟನ್

ಇ) ನ್ಯೂಯಾರ್ಕ್

ಈ) ಬ್ರಸೆಲ್

www.karunaduexams.com

ವಾಷಿಂಗ್ ಟನ್

2016 ಕಾಮನ್ ವೆಲ್ತ್ ಹಣಕಾಸು ಸಚಿವರ ಸಭೆಯನ್ನು ಅಮೆರಿಕಾದ ವಾಷಿಂಗ್ ಟನ್ ನಲ್ಲಿ ಆಯೋಜಿಸಲಾಗಿತ್ತು. ಭಾರತದ ಹಣಕಾಸು ಸಚಿವ ಅರುಣ್ ಜೇಟ್ಲಿ ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಹವಾಮಾನ ಬದಲಾವಣೆ ಮತ್ತು ಹಣಕಾಸು ಹವಾಮಾನಕ್ಕೆ ಹೊಂದಿಕೊಳ್ಳುವಿಕೆ ಹಾಗೂ ಅಂತಾರಾಷ್ಟ್ರೀಯ ತೆರಿಗೆ ಪನಾಮ ಪೇಪರ್ ಕುರಿತಾದ ಎರಡು ಅಂಶಗಳ ಮೇಲೆ ಸಭೆಯಲ್ಲಿ ಚರ್ಚಿಸಲಾಯಿತು.

37. ಕಾವೇರಿ ಕೊಳ್ಳದ ಜಲಾಶಯಗಳ ನೀರಿನ ಸಂಗ್ರಹ, ಸದ್ಯದ ಪರಿಸ್ಥಿತಿ ಅಧ್ಯಯನ ಮಾಡಲು ರಚಿಸಲಾಗಿರುವ ಉನ್ನತ ತಾಂತ್ರಿಕ ಸಮಿತಿಯ ಅಧ್ಯಕ್ಷರು ಯಾರು?

ಅ) ಜಿ. ಎಸ್. ಝಾ

ಆ) ರಾಕೇಶ್ ಸಿಂಗ್

ಇ) ಮಸೂದ್ ಹುಸೇನ್

ಈ) ಆರ್.ಕೆ. ಗುಪ್ತಾ

ಜಿ. ಎಸ್. ಝಾ

ಕಾವೇರಿ ಕೊಳ್ಳದ ಜಲಾಶಯಗಳ ನೀರಿನ ಸಂಗ್ರಹ, ಸದ್ಯದ ಪರಿಸ್ಥಿತಿ ಅಧ್ಯಯನ ಮಾಡಲು ಕೇಂದ್ರ ಜಲ ಆಯೋಗದ ಅಧ್ಯಕ್ಷರಾದ ಜಿ.ಎಸ್ ಝಾ ಅವರ ನೇತೃತ್ವದಲ್ಲಿ ಉನ್ನತ ತಾಂತ್ರಿಕ ಸಮಿತಿಯನ್ನು ರಚಿಸಲಾಗಿದೆ. ಸುಪ್ರೀಂ ಕೋರ್ಟ್ ಸೂಚನೆ ಮೇರೆಗೆ ಕೇಂದ್ರ ಜಲಸಂಪನ್ಮೂಲ ಸಚಿವಾಲಯ ಈ ಸಮಿತಿಯನ್ನು ರಚಿಸಿದೆ. ಕೇಂದ್ರ ಜಲ ಆಯೋಗದ ಅಧ್ಯಕ್ಷ ಸಿ.ಎಸ್. ಝಾ ನೇತೃತ್ವದ ಸಮಿತಿಯಲ್ಲಿ ಆಯೋಗದ ಸದಸ್ಯ ಎಸ್. ಮಸೂದ್ ಹುಸೇನ್, ಗೋಧಾವರಿ ಮತ್ತು ಕೃಷ್ಣ ಕೊಳ್ಳದ ಸಂಘಟನೆಯ ಮುಖ್ಯ ಎಂಜಿನಿಯರ್ ಆರ್.ಕೆ. ಗುಪ್ತ, ಕರ್ನಾಟಕ ಮತ್ತು ತಮಿಳುನಾಡಿನ ಮುಖ್ಯ ಕಾರ್ಯದರ್ಶಿ ಅಥವಾ ಅವರಿಂದ ನಿಯೋಜಿತರಾದ ಹಿರಿಯ ಅಧಿಕಾರಿ, ಕಾವೇರಿಕೊಳ್ಳದ ನಾಲ್ಕು ರಾಜ್ಯಗಳ ಜಲಸಂಪನ್ಮೂಲ ಇಲಾಖೆಯ ಮುಖ್ಯ ಎಂಜಿನಿಯರ್‌ಗಳು ಸದಸ್ಯರಾಗಿರಲಿದ್ದಾರೆ.

38. ಈ ಕೆಳಗಿನ ಯಾರು ಕೇಂದ್ರ ನೇರ ತೆರಿಗೆ ಮಂಡಳಿ (CBDT)ಯ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ?

ಅ) ಸುಶೀಲ್ ಚಂದ್ರ

ಆ) ಕಿರಣ್ ರಾಜ್

ಇ) ಅನಿಲ್ ಗೋಸ್ವಾಮಿ

ಈ) ನವೀನ್ ಚಂದ್ರಪಾಲ್

www.karunaduexams.com

ಸುಶೀಲ್ ಚಂದ್ರ

ಹಿರಿಯ IRS ಅಧಿಕಾರಿ ಸುಶೀಲ್ ಚಂದ್ರ ಅವರು ಕೇಂದ್ರ ನೇರ ತೆರಿಗೆ ಮಂಡಳಿಯ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ರಾಣಿ ಸಿಂಗ್ ನಾಯರ್ ಅವರು ಅಕ್ಟೋಬರ್ 31, 2016 ರಂದು ನಿವೃತ್ತಿ ಹೊಂದಿದ್ದ ಕಾರಣ ಈ ಸ್ಥಾನ ತೆರವಾಗಿತ್ತು. ನೇಮಕಾತಿಗೆ ಮುಂಚೆ ಸುಶೀಲ್ ಚಂದ್ರ ಅವರು ಕೇಂದ್ರ ನೇರ ತೆರಿಗೆ ಮಂಡಳಿಯ ಸದಸ್ಯರಾಗಿದ್ದರು.

39. ಐಎಸ್ಎಸ್ಎಫ್ ವಿಶ್ವಕಪ್ ಶೂಟಿಂಗ್ ನ 50ಮೀ ಪಿಸ್ತೂಲ್ ವಿಭಾಗದಲ್ಲಿ ಬೆಳ್ಳಿ ಗೆದ್ದ ಭಾರತದ ಶೂಟರ್ ಯಾರು?

ಅ) ರಂಜನ್ ಸೋದಿ

ಆ) ಗಗನ್ ನಾರಂಗ್

ಇ) ಜಿತು ರಾಯ್

ಈ) ಅಶೋಕ್ ವಾದ್ರ

ಜಿತು ರಾಯ್

ಭಾರತದ ಶೂಟರ್ ಜಿತು ರಾಯ್ ಅವರು ಐಎಸ್ಎಸ್ಎಫ್ ವಿಶ್ವಕಪ್‌ನಲ್ಲಿ ಬೆಳ್ಳಿಯ ಸಾಧನೆ ಮಾಡಿದ್ದಾರೆ. 50 ಮೀಟರ್ ಪಿಸ್ತೂಲ್ ವಿಭಾಗದಲ್ಲಿ ಜಿತು 188.8 ಸ್ಕೋರ್ ಕಲೆಹಾಕಿ ಎರಡನೇ ಸ್ಥಾನ ತಮ್ಮದಾಗಿಸಿಕೊಂಡರು. 190.6 ಸ್ಕೋರ್ ಸಂಗ್ರಹಿಸಿದ ಚೀನಾದ ವೀ ಪಾಂಗ್ ಚಿನ್ನಕ್ಕೆ ಕೊರಳೊಡ್ಡಿದರೆ, ಈ ವಿಭಾಗದ ಕಂಚು ಇಟಲಿಯ ಜಿಯುಸೆಪ್ಪೆ ಜಿಯಾರ್ಡನೊ (170.3) ಅವರ ಪಾಲಾಯಿತು.

40. ಭಾರತದ ಮೊದಲ ಎಲೆಕ್ಟ್ರಿಕ್ ಬೈಕ್ “T6X” ಅನ್ನು ಹೊರತಂದಿರುವ ಸಂಸ್ಥೆ ಯಾವುದು?

ಅ) ಬಜಾಜ್

ಆ) ಟಿವಿಎಸ್

ಇ) ಟೋರ್ಕ್ ಮೋಟಾರ್

ಈ) ಮಹೀಂದ್ರ

ಟೋರ್ಕ್ ಮೋಟಾರ್

ಭಾರತದ ಮೊದಲ ಎಲೆಕ್ಟ್ರಿಕ್ ಬೈಕ್ “T6X” ಅನ್ನು ಪುಣೆ ಮೂಲಕ ಟೋರ್ಕ್ ಮೋಟಾರ್ ಹೊರತಂದಿದೆ. ಟೋರ್ಕ್ ಮೋಟಾರ್ ಸ್ವದೇಶಿ ಸ್ಟಾರ್ಟ್ ಆಫ್ ಆಗಿದೆ. ಮೊದಲ ಹಂತದಲ್ಲಿ ಈ ಬೈಕ್ ಗಳು ಬೆಂಗಳೂರು, ಪುಣೆ ಮತ್ತು ದೆಹಲಿಯಲ್ಲಿ ಲಭ್ಯವಿರಲಿವೆ.

www.karunaduexams.com

41. 2016 ವಿಶ್ವ ಸುಸ್ಥಿರ ಅಭಿವೃದ್ಧಿ ಶೃಂಗಸಭೆ (World Sustainable Development Summit) ಯಾವ ದೇಶದಲ್ಲಿ ಇತ್ತೀಚೆಗೆ ಆರಂಭಗೊಂಡಿತು?

ಅ) ಭಾರತ

ಆ) ಚೀನಾ

ಇ) ಜಪಾನ್

ಈ) ದಕ್ಷಿಣ ಕೊರಿಯ

ಭಾರತ

ವಿಶ್ವ ಸುಸ್ಥಿರ ಅಭಿವೃದ್ಧಿ ಶೃಂಗಸಭೆ ನವದೆಹಲಿಯಲ್ಲಿ ಅಕ್ಟೋಬರ್ 5 ರಂದು ಆರಂಭಗೊಂಡಿದೆ. ರಾಷ್ಟ್ರಪತಿ ಪ್ರಣಭ್ ಮುಖರ್ಜಿ ಅವರು ಈ ಶೃಂಗಸಭೆಗೆ ಚಾಲನೆ ನೀಡಿದರು. ನಾಲ್ಕು ದಿನಗಳ ಕಾಲ ನಡೆಯಲಿರುವ ಈ ಶೃಂಗಸಭೆಯನ್ನು "ದಿ ಎನರ್ಜಿ ಅಂಡ್ ರಿಸೋರ್ಸ್ ಇನ್ಸ್ಟಿಟ್ಯೂಟ್ (TERI) ಆಯೋಜಿಸುತ್ತಿದೆ. ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಅಳವಡಿಸಿಕೊಳ್ಳಲು ಮತ್ತು ಪ್ಯಾರಿಸ್ ಹವಾಮಾನ ಒಪ್ಪಂದಕ್ಕೆ ಸಹಿ ಹಾಕಲು ಈ ಶೃಂಗಸಭೆ ಜಾಗತಿಕ ಮಟ್ಟದಲ್ಲಿ ವೇದಿಕೆಯಾಗಲಿದೆ. Beyond 2015: People, Planet and Progress" ಈ ಶೃಂಗಸಭೆಯ ಥೀಮ್ ಆಗಿದೆ.

42. ಈ ಕೆಳಗಿನ ಯಾವ ರಾಷ್ಟ್ರಗಳೊಂದಿಗೆ ಭಾರತ ನಾಗರೀಕ ಪರಮಾಣು ಸಹಕಾರ ಒಪ್ಪಂದಕ್ಕೆ ಸಹಿ ಹಾಕಿದೆ?

I) ಅಮೆರಿಕ

II) ಕೆನಡ

III) ದಕ್ಷಿಣ ಕೊರಿಯ

IV) ಜಪಾನ್

ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಗುರುತಿಸಿ:

ಅ) I, II & III

ಆ) II, III & IV

ಇ) I, III & IV

ಈ) I, II, III & IV

I, II & III

ಭಾರತ ಇದುವರೆಗೆ ಒಟ್ಟು 11 ರಾಷ್ಟ್ರಗಳೊಂದಿಗೆ ನಾಗರೀಕ ಪರಮಾಣು ಸಹಕಾರ ಒಪ್ಪಂದಕ್ಕೆ ಸಹಿಹಾಕಿದೆ. ವಿಶ್ವದ ಪ್ರಮುಖ ರಾಷ್ಟ್ರಗಳಾದ ಅಮೆರಿಕ, ರಷ್ಯಾ, ಕೆನಡ, ಆಸ್ಟ್ರೇಲಿಯಾ ಮತ್ತು ದಕ್ಷಿಣ ಕೊರಿಯಾ ಜೊತೆ ಭಾರತ ಈ

www.karunaduexams.com

ಒಪ್ಪಂದಕ್ಕೆ ಸಹಿ ಹಾಕಿದೆ. ಸದ್ಯ ಜಪಾನ್ ಜೊತೆ ನಾಗರೀಕ ಪರಮಾಣು ಒಪ್ಪಂದಕ್ಕೆ ಸಹಿ ಹಾಕುವ ಕುರಿತ ಮಾತುಕತೆ ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಜಪಾನ್ ಜೊತೆ ಈ ಒಪ್ಪಂದಕ್ಕೆ ಸಹಿ ಹಾಕುವ ವಿಶ್ವಾಸವನ್ನು ಭಾರತ ಹೊಂದಿದೆ.

43. ಆನೆಗಳ ಸಂಶೋಧನೆಗಾಗಿ ಫ್ರಾನ್ಸ್ ಸರ್ಕಾರದಿಂದ "ನೈಟ್ ಇನ್ ದಿ ನ್ಯಾಷನಲ್ ಆರ್ಡರ್ ಆಫ್ ಮೆರಿಟ್" ಗೌರವ ಪಡೆದಿಕೊಂಡಿರುವ ಭಾರತೀಯ ಮಹಿಳೆ ಯಾರು?

ಅ) ಶರ್ಮಿಳ ಠಾಗೋರ್

ಆ) ಪ್ರಜ್ಞಾ ಚೌತ

ಇ) ರಾಧ ಬಿನು

ಈ) ರೂಪ ಐಯಂಗರ್

ಪ್ರಜ್ಞಾ ಚೌತ

ಸಿನಿಮಾ ನಿರ್ಮಾಪಕಿ ಮತ್ತು ಆನೆಗಳ ಸಂಶೋಧಕಿ ಪ್ರಜ್ಞಾ ಚೌತಗೆ ಫ್ರಾನ್ಸ್ ಸರ್ಕಾರದ ಅತ್ಯುತ್ತಮ ನಾಗರೀಕ ಪ್ರಶಸ್ತಿಗಳಲ್ಲಿ ಒಂದಾದ "ನೈಟ್ ಇನ್ ದಿ ನ್ಯಾಷನಲ್ ಆರ್ಡರ್ ಆಫ್ ಮೆರಿಟ್" ಗೌರವ ಸಂದಿದೆ. ಏಷ್ಯಾ ಆನೆಗಳ ಕುರಿತಾಗಿ ಇವರು ನಡೆಸುತ್ತಿರುವ ಸಂಶೋಧನೆಗಾಗಿ ಈ ಗೌರವಕ್ಕೆ ಆಯ್ಕೆಮಾಡಲಾಗಿದೆ. ಇತ್ತೀಚೆಗಷ್ಟೇ ಫ್ರಾನ್ಸ್ ಸರ್ಕಾರ ನೈಟ್ ಹುಡ್ ಗೌರವವನ್ನು ಕಿರಣ್ ಮಜುಂಧರ್ ಷಾ ಮತ್ತು ತಮಿಳು ನಟ ಕಮಲ್ ಹಾಸನ್ ಅವರಿಗೆ ನೀಡಿತ್ತು. ಈ ಸಾಲಿಗೆ ಈಗ ಚೌತ ರವರು ಸೇರ್ಪಡೆಗೊಂಡಿದ್ದಾರೆ. ಪ್ರಜ್ಞಾ ಅವರು ಆನೆ ಮನೆ ಫೌಂಡೇಷನ್ ಸಂಸ್ಥಾಪಕಿ. ಸುಮಾರು 16 ವರ್ಷಗಳಿಂದ ಈ ಫೌಂಡೇಷನ್ ಆನೆಗಳ ಕುರಿತಾಗಿ ಸಂರಕ್ಷಣೆ ಮತ್ತು ಸಂಶೋಧನೆ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿದೆ.

44. ಈ ಕೆಳಗಿನ ಯಾವ ದೇಶ 2016-ವಿಪತ್ತು ಅಪಾಯ ತಗ್ಗಿಸುವ ಕುರಿತಾದ ಏಷ್ಯಾ ಸಚಿವರುಗಳ ಸಮ್ಮೇಳನ (Asian Ministerial Conference on Disaster Risk Reduction (AMCDRR)ದ ಅತಿಥ್ಯವಹಿಸಲಿದೆ?

ಅ) ಭಾರತ

ಆ) ಪಾಕಿಸ್ತಾನ

ಇ) ಶ್ರೀಲಂಕಾ

ಈ) ಬಾಂಗ್ಲದೇಶ

ಭಾರತ

2016-ವಿಪತ್ತು ಅಪಾಯ ತಗ್ಗಿಸುವ ಕುರಿತಾದ ಏಷ್ಯಾ ಸಚಿವರುಗಳ ಸಮ್ಮೇಳನವನ್ನು ಭಾರತ ಸರ್ಕಾರ ಆಯೋಜಿಸುತ್ತಿದ್ದು, ನವದೆಹಲಿಯಲ್ಲಿ ನವೆಂಬರ್ 2-3 ರಂದು ನಡೆಯಲಿದೆ. ಪ್ರಧಾನಿ ಮೋದಿ ಅವರು ಈ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ವಿಪತ್ತು ಅಪಾಯ ತಗ್ಗಿಸುವ ವಿಶ್ವಸಂಸ್ಥೆ ಕಚೇರಿಯ ಸಹಯೋಜನೆಯೊಂದಿಗೆ ಕೇಂದ್ರ ಸರ್ಕಾರ ಈ ಸಮ್ಮೇಳನವನ್ನು ಹಮ್ಮಿಕೊಳ್ಳುತ್ತಿದೆ.

www.karunaduexams.com

45. ಈ ಕೆಳಗಿನ ಯಾವ ಮರುಭೂಮಿ "ನೈಟ್ರೈಟ್ (Nitrate)" ಲಭ್ಯತೆಗೆ ಹೆಸರು ವಾಸಿಯಾಗಿದೆ?

ಅ) ಅಟಕಾಮಾ

ಆ) ಗೋಬಿ

ಇ) ಸಹರ

ಈ) ಥಾರ್

ಅಟಕಾಮಾ ಮರುಭೂಮಿ 1940ರ ಅವಧಿಯ ವರೆಗೆ ವಿಶ್ವದ ಅತಿದೊಡ್ಡ ಸೋಡಿಯಂ ನೈಟ್ರೈಟ್ ಅಗರವೆಂದು ಪ್ರಸಿದ್ದಿ ಹೊಂದಿತ್ತು. ನೈಟ್ರೈಟ್ ಅಲ್ಲದೇ ತಾಮ್ರ ಮತ್ತು ಇತರೆ ಖನಿಜಗಳು ಸಹ ಅಟಕಾಮಾದಲ್ಲಿ ಹೇರಳವಾಗಿ ದೊರೆಯುತ್ತವೆ. ಅಟಕಾಮಾ ಮರಭೂಮಿ ದಕ್ಷಿಣ ಅಮೆರಿಕಾದಲ್ಲಿದೆ. ಇದು ವಿಶ್ವದ ಅತ್ಯಂತ ಒಣ ಮರುಭೂಮಿಯಾಗಿದೆ.

46. ಸೀಮೆಎಣ್ಣೆ ವಿತರಣೆಯಡಿ ನೇರ ನಗದು ವರ್ಗಾವಣೆ ಯೋಜನೆ ಜಾರಿಗೆ ತಂದ ಮೊದಲ ರಾಜ್ಯ ಯಾವುದು?

ಅ) ಗುಜರಾತ್

ಆ) ರಾಜಸ್ತಾನ

ಇ) ಜಾರ್ಖಂಡ್

ಈ) ಕೇರಳ

ಜಾರ್ಖಂಡ್

ಸೀಮೆಎಣ್ಣೆ ವಿತರಣೆಯಡಿ ನೇರ ನಗದು ವರ್ಗಾವಣೆಯನ್ನು ಜಾರಿಗೆ ತಂದ ದೇಶದ ಮೊದಲ ರಾಜ್ಯವೆಂಬ ಖ್ಯಾತಿಗೆ ಜಾರ್ಖಂಡ್ ಪಾತ್ರವಾಗಿದೆ. ಜಾರ್ಖಂಡ್ ನ ಛತ್ರ, ಹಜಾರಿಬಾಗ್, ಖುಂತಿ ಮತ್ತು ಜಮ್ತರ ನಾಲ್ಕು ಜಿಲ್ಲೆಗಳಲ್ಲಿ ನೇರ ನಗದು ವರ್ಗಾವಣೆ ಯೋಜನೆಯನ್ನು ಅಕ್ಟೋಬರ್1, 2017 ರಿಂದ ಜಾರಿಗೊಳಿಸಲಾಗಿದೆ. ಈ ಯೋಜನೆಯಡಿ ಸೀಮೆಎಣ್ಣೆಯನ್ನು ಸಬ್ಸಿಡಿ ರಹಿತ ದರದಲ್ಲಿ ಮಾರಲಾಗುವುದು. ಸಬ್ಸಿಡಿ ಹಣವನ್ನು ನೇರವಾಗಿ ಗ್ರಾಹಕರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು.

47. 2016 ಗೂಗಲ್ ಸೈನ್ಸ್ ಫೇರ್ ನಲ್ಲಿ ಪ್ರಶಸ್ತಿ ಗೆದ್ದ ಭಾರತೀಯ ಮೂಲದ ವಿದ್ಯಾರ್ಥಿ ಯಾರು?

ಅ) ಸ್ಮಿತ ಚಂದ್ರನ್

ಆ) ಕೈರಾ ನಿರ್ಗಿನ್

ಇ) ಮಧುರ ಕಮರ್ಕರ್

ಈ) ಸ್ವರ್ಣ ಮಧುಕರ್

ಕೈರಾ ನಿರ್ಗಿನ್

www.karunaduexams.com

ಭಾರತೀಯ ಮೂಲದ ದಕ್ಷಿಣ ಆಫ್ರಿಕಾದ ಕೈರಾ ನಿರ್ಗಿನ್ ಅವರು ಅಮೆರಿಕಾದಲ್ಲಿ ನಡೆದ ಗೂಗಲ್ ಸೈನ್ಸ್ ಫೇರ್ ನಲ್ಲಿ $50,000 ವಿದ್ಯಾರ್ಥಿ ವೇತನವನ್ನು ಗೆದ್ದಿದ್ದಾರೆ. ಕಿತ್ತಳೆ ಸಿಪ್ಪೆಯನ್ನು ಬಳಸಿ ಮಣ್ಣಿನ ತೇವಾಂಶವನ್ನು ಹಿಡಿದಿಡುವ ಅಗ್ಗದ ಪದಾರ್ಥವನ್ನು ಅನ್ವೇಷಣೆ ಮಾಡಿರುವುದಕ್ಕಾಗಿ ಕೈರಾ ಅವರಿಗೆ ಪ್ರಶಸ್ತಿಯನ್ನು ನೀಡಲಾಗಿದೆ. ಕೈರಾ ಅವರು ಸೇಂಟ್ ಮಾರ್ಟಿನ್ ಖಾಸಗಿ ಶಾಲೆಯಲ್ಲಿ 11ನೇ ತರಗತಿಯ ವಿದ್ಯಾರ್ಥಿ.

48. ಆಲ್ಪ್ಸ್ ಪರ್ವತವು ಈ ರಾಷ್ಟ್ರಗಳಲ್ಲಿ ಹರಡಿಕೊಂಡಿದೆ _______?

ಅ) ಫ್ರಾನ್ಸ್, ಸ್ವಿಟ್ಜರ್ಲ್ಯಾಂಡ್, ಇಟಲಿ, ರೊಮನಿಯ

ಆ) ಫ್ರಾನ್ಸ್, ಸ್ವಿಟ್ಜರ್ಲ್ಯಾಂಡ್, ಇಟಲಿ, ಆಸ್ಟ್ರೀಯಾ

ಇ) ಫ್ರಾನ್ಸ್, ಸ್ವಿಟ್ಜರ್ಲ್ಯಾಂಡ್, ಇಟಲಿ, ಸ್ಪೇನ್

ಈ) ಫ್ರಾನ್ಸ್, ಸ್ವಿಟ್ಜರ್ಲ್ಯಾಂಡ್, ಇಟಲಿ, ಬೆಲ್ಜಿಯಂ

ಫ್ರಾನ್ಸ್, ಸ್ವಿಟ್ಜರ್ಲ್ಯಾಂಡ್, ಇಟಲಿ, ಆಸ್ಟ್ರೀಯಾ

ಆಲ್ಪ್ಸ್ ಪರ್ವತ ಯುರೋಪ್ ನ ಅತಿ ಎತ್ತರದ ಮತ್ತು ವ್ಯಾಪಕವಾಗಿ ಹರಡಿಕೊಂಡಿರುವ ಪರ್ವತ ಶ್ರೇಣಿ. ಸರಿಸುಮಾರು 1200 ಕಿ.ಮೀ ಉದ್ದವಿರುವ ಈ ಪರ್ವತ ಶ್ರೇಣಿಯು ಯುರೋಪ್ನ ಎಂಟು ರಾಷ್ಟ್ರಗಳಾದ ಫ್ರಾನ್ಸ್, ಸ್ವಿಟ್ಜರ್ಲ್ಯಾಂಡ್, ಇಟಲಿ, ಆಸ್ಟ್ರೀಯಾ, ಜರ್ಮನಿ, ಇಟಲಿ, ಮೊನಕೊ ಮತ್ತು ಸ್ಲೊವೆನಿಯ ಹರಡಿಕೊಂಡಿದೆ.

49. ರಸಾಯನಶಾಸ್ತ್ರ ವಿಭಾಗದಲ್ಲಿ 2016 ನೊಬೆಲ್ ಪ್ರಶಸ್ತಿಯನ್ನು ಮೂವರು ವಿಜ್ಞಾನಿಗಳಿಗೆ ನೀಡಲಾಗಿದೆ. ಈ ಕೆಳಗಿನವರುಗಳಲ್ಲಿ ಪ್ರಶಸ್ತಿ ಪಡೆದಿಲ್ಲದವರನ್ನು ಗುರುತಿಸಿ?

ಅ) ಜೀನ್ -ಪಿಯರ್ರೆ ಸೌವಾಜ್

ಆ) ಜೆ. ಫ್ರೇಸರ್ ಸೊಡ್ಡಾರ್ಟ್

ಇ) ಮ್ಯಾಥ್ಯು ಮೇವಿಸ್

ಈ) ಬರ್ನಾಡ್ ಫೆರಿಂಗ

ಮ್ಯಾಥ್ಯು ಮೇವಿಸ್

ರಸಾಯನಶಾಸ್ತ್ರಕ್ಕೆ ನೀಡಲಾಗುವ 2016ರ ನೊಬೆಲ್ ಪ್ರಶಸ್ತಿ ಜೀನ್ -ಪಿಯರ್ರೆ ಸೌವಾಜ್, ಜೆ. ಫ್ರೇಸರ್ ಸೊಡ್ಡಾರ್ಟ್ ಮತ್ತು ಬರ್ನಾಡ್ ಫೆರಿಂಗ ಅವರಿಗೆ ಲಭಿಸಿದೆ. ಮೊಲ್ಯಾಕ್ಯುಲರ್(ಅಣುಗಳ) ಮೆಶಿನ್ ಗಳನ್ನು ಅಭಿವೃದ್ಧಿ ಪಡಿಸಿದಕ್ಕಾಗಿ ಈ ಮೂವರನ್ನು ರಸಾಯನಶಾಸ್ತ್ರಕ್ಕೆ ನೀಡಲಾಗುವ 2016ರ ನೊಬೆಲ್ ಪುರಸ್ಕಾರಕ್ಕೆ ಪರಿಗಣಿಸಲಾಗಿದೆ. ಎಂಟು ದಶಲಕ್ಷ ಸ್ವೀಡಿಶ್ ಕ್ರೌನ್ (9,31,000 ಡಾಲರ್) ಪ್ರಶಸ್ತಿಯನ್ನು ಈ ಮೂವರು ವಿಜ್ಞಾನಿಗಳು ಹಂಚಿಕೊಂಡಿದ್ದಾರೆ.

50. 2016 ಸುಸ್ಥಿರ ಅಭಿವೃದ್ಧಿ ನಾಯಕತ್ವ ಪ್ರಶಸ್ತಿಯನ್ನು ಯಾರಿಗೆ ನೀಡಲಾಗಿದೆ?

ಅ) ಮಮತಾ ಬ್ಯಾನರ್ಜಿ

www.karunaduexams.com

ಆ) ಚಂದ್ರಬಾಬು ನಾಯ್ಡು

ಇ) ಪವನ್ ಚಾಮ್ಲಿಂಗ್

ಈ) ವಿಜಯ್ ರೂಪಾಣಿ

ಪವನ್ ಚಾಮ್ಲಿಂಗ್

ಪ್ರತಿಷ್ಠಿತ ಸುಸ್ಥಿರ ಅಭಿವೃದ್ಧಿ ನಾಯಕತ್ವ ಪ್ರಶಸ್ತಿಯನ್ನು ಸಿಕ್ಕಿಂ ಮುಖ್ಯಮಂತ್ರಿ ಪವನ್ ಚಾಮ್ಲಿಂಗ್ ಅವರಿಗೆ ನೀಡಿ ಗೌರವಿಸಲಾಗಿದೆ. ದಿ ಎನರ್ಜಿ ಅಂಡ್ ರಿಸೋರ್ಸ್ ಇನ್ಸ್ಟಿಟ್ಯೂಟ್ ಈ ಪ್ರಶಸ್ತಿಯನ್ನು ನೀಡುತ್ತಿದೆ. ವಿಶ್ವ ಸುಸ್ಥಿರ ಅಭಿವೃದ್ಧಿ ಶೃಂಗಸಭೆಯಲ್ಲಿ ರಾಷ್ಟ್ರಪತಿ ಪ್ರಣಭ್ ಮುಖರ್ಜಿ ಅವರು ಚಾಮ್ಲಿಂಗ್ ಅವರಿಗೆ ಪ್ರಶಸ್ತಿಯನ್ನು ನೀಡಿದರು. ಪರಿಸರ ಮತ್ತು ಸುಸ್ಥಿರ ಅಭಿವೃದ್ಧಿಗೆ ಚಾಮ್ಲಿಂಗ್ ಅವರು ನೀಡಿರುವ ಕೊಡುಗೆ ಗುರುತಿಸಿ ಪ್ರಶಸ್ತಿಯನ್ನು ನೀಡಲಾಗಿದೆ. ಚಾಮ್ಲಿಂಗ್ ಅವರ ದೂರದೃಷ್ಟಿಯಿಂದ ಸಿಕ್ಕಿಂ ದೇಶದ ಮೊದಲ ಸಾವಯವ ರಾಜ್ಯ ಎನಿಸಿದೆ.

51. 2016 ವಿಶ್ವ ಆರ್ಥಿಕ ವೇದಿಕೆ ಭಾರತ ಆರ್ಥಿಕ ಶೃಂಗಸಭೆ (World Economic Forum (WEF) India Economic Summit) ಯಾವ ನಗರದಲ್ಲಿ ನಡೆಯಲಿದೆ?

ಅ) ಹೈದ್ರಾಬಾದ್

ಆ) ಚೆನ್ನೈ

ಇ) ನವ ದೆಹಲಿ

ಈ) ಬೆಂಗಳೂರು

ನವ ದೆಹಲಿ

2016 ವಿಶ್ವ ಆರ್ಥಿಕ ವೇದಿಕೆ ಭಾರತ ಆರ್ಥಿಕ ಶೃಂಗಸಭೆ ನವದೆಹಲಿಯಲ್ಲಿ ಅಕ್ಟೋಬರ್ 6 ರಂದು ಆರಂಭಗೊಂಡಿತು. ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕ ಸಚಿವೆ ನಿರ್ಮಲ ಸೀತಾರಾಮನ್ ಅವರು ಈ ಶೃಂಗಸಭೆಗೆ ಚಾಲನೆ ನೀಡಿದರು. ಎರಡು ದಿನದ ಶೃಂಗಸಭೆಯಲ್ಲಿ ಡಿಜಿಟಲ್ ಟ್ರಾನ್ಸಫರ್ ಮತ್ತು ಪ್ರಾದೇಶಿಕ ಆರ್ಥಿಕ ಏಕೀಕರಣದ ಬಗ್ಗೆ ಶೃಂಗಸಭೆಯಲ್ಲಿ ಚರ್ಚಿಸಲಾಗುವುದು. 30 ದೇಶಗಳಿಂದ ಸುಮಾರು 600 ಪ್ರತಿನಿಧಿಗಳು ಈ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ.

52. ಯುರೋಪ್ ನ ಪ್ರಮುಖ ಮೀನುಗಾರಿಕೆ ತಾಣವಾಗಿರುವ “ಡಾಗರ್ ಬ್ಯಾಂಕ್ (Dogger Bank)” ಯಾವ ಸಮುದ್ರದಲ್ಲಿದೆ?

ಅ) ಬಾಲ್ಟಿಕ್ ಸಮುದ್ರ

ಆ) ನಾರ್ವಿಯನ್ ಸಮುದ್ರ

ಇ) ನಾರ್ಥ್ ಸಮುದ್ರ

ಈ) ಮೆಡಿಟೇರಿಯನ್ ಸಮುದ್ರ

ನಾರ್ಥ್ ಸಮುದ್ರ

ಡಾಗರ್ ಬ್ಯಾಂಕ್ ನಾರ್ಥ್ ಸಮುದ್ರ (North Sea)ದಲ್ಲಿದೆ. ಇದು ಯುರೋಪ್ ನ ಪ್ರಮುಖ ಮೀನುಗಾರಿಕೆ ಪ್ರಮುಖ ತಾಣ.

53. ಔಟ್‌ಲುಕ್ ಸಂಸ್ಥೆ ನೀಡುವ 'ಔಟ್‌ಸ್ಟ್ಯಾಂಡಿಂಗ್ ಸೆಲೆಬ್ರಿಟಿ ವುಮನ್ ಆಫ್ ದ ಈಯರ್' ಪ್ರಶಸ್ತಿಗೆ ಭಾಜನರಾಗಿರುವ ಬಾಲಿವುಡ್ ನಟಿ ಯಾರು?

ಅ) ವಿದ್ಯಾ ಬಾಲನ್

ಆ) ಸೋನಾಕ್ಷಿ ಸಿನ್ಹಾ

ಇ) ಶಿಲ್ಪಾ ಶೆಟ್ಟಿ

ಈ) ಐಶ್ವರ್ಯಾ ರೈ

ಐಶ್ವರ್ಯಾ ರೈ

ನಟಿ ಐಶ್ವರ್ಯಾ ರೈ ಅವರು ಔಟ್‌ಲುಕ್ ಸಂಸ್ಥೆ ನೀಡುವ 'ಔಟ್‌ಸ್ಟ್ಯಾಂಡಿಂಗ್ ಸೆಲೆಬ್ರಿಟಿ ವುಮನ್ ಆಫ್ ದ ಈಯರ್' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಔಟ್‌ಲುಕ್ ಬಿಜಿನೆಸ್ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 19 ಮಹಿಳಾ ಉದ್ಯಮಿಗಳು ತಮ್ಮ ಔದ್ಯಮಿಕ ಜೀವನ ಹಾಗೂ ಯಶಸ್ಸಿನ ಪ್ರಯಾಣದ ಕುರಿತು ವಿಚಾರಗಳನ್ನು ಮಂಡಿಸಿದರು. ಆ ಪೈಕಿ ಬಾಲಿವುಡ್ ಬೆಡಗಿ ಐಶ್‌ಗೆ ಈ ಪ್ರಶಸ್ತಿ ಒಲಿದಿದೆ.

54. ಯಾವ ಕೇಂದ್ರ ಸಚಿವಾಲಯ ಇತ್ತೀಚೆಗೆ "ಸಾರ್ವಜನಿಕ ಸಾಲ ನಿರ್ವಹಣೆ ಕೋಶ (Public Debt Management Cell (PDMC)" ಸ್ಥಾಪಿಸಿದೆ?

ಅ) ಹಣಕಾಸು ಸಚಿವಾಲಯ

ಆ) ಗೃಹ ಸಚಿವಾಲಯ

ಇ) ವಿದೇಶಾಂಗ ವ್ಯವಹಾರ ಸಚಿವಾಲಯ

ಈ) ಕೃಷಿ ಸಚಿವಾಲಯ

ಕೇಂದ್ರ ಹಣಕಾಸು ಸಚಿವಾಲಯ ಸಾರ್ವಜನಿಕ ಸಾಲ ನಿರ್ವಹಣೆ ಕೋಶವನ್ನು ಆರಂಭಿಸಿದೆ. ಸರ್ಕಾರಿ ಸಾಲಗಳು ಮತ್ತು ಉತ್ತಮ ನಗದು ನಿರ್ವಹಣೆ ಸುಗಮಗೊಳಿಸಲು ಹಾಗೂ ಒಟ್ಟಾರೆಯಾಗಿ ಬಾಂಡ್ ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ಈ ಕೋಶವನ್ನು ಸ್ಥಾಪಿಸಲಾಗಿದೆ. ಸದ್ಯ ಇದನ್ನು ದೆಹಲಿಯ ಆರ್‌ಬಿಐ ಕಚೇರಿಯಲ್ಲಿ ಸ್ಥಾಪಿಸಲಾಗಿದ್ದು, ಮುಂದಿನ ಎರಡು ವರ್ಷಗಳಲ್ಲಿ ಶಾಸನಬದ್ಧ ಸ್ಥಾನಮಾನ ನೀಡುವ ಮೂಲಕ ಸಾರ್ವಜನಿಕ ಸಾಲ ನಿರ್ವಹಣೆ ಪ್ರಾಧಿಕಾರವನ್ನಾಗಿ ಉನ್ನತೀಕರಿಸಲಾಗುವುದು. ಬಂಡವಾಳ, ಬಂಡವಾಳ ಮಾರುಕಟ್ಟೆ ಕಾರ್ಯಾಚರಣೆ ಹಾಗೂ ಸಣ್ಣ ಉಳಿತಾಯ ಮೇಲಿನ ಬಡ್ಡಿದರವನ್ನು ನಿರ್ಧರಿಸುವಲ್ಲಿ ಸರ್ಕಾರಕ್ಕೆ ಸಲಹೆ ನೀಡುವ ಕಾರ್ಯವನ್ನು ಈ ಕೋಶ ಮಾಡಲಿದೆ.

55. ಇತ್ತೀಚೆಗೆ ಸ್ಪೇನಿನ "ಲಾ ಲೀಗ ಫುಟ್ಬಾಲ್ ಕ್ಲಬ್" ಸೇರಿದ ಮೊಟ್ಟ ಮೊದಲ ಭಾರತೀಯ ಯಾರು?

ಅ) ಇಷಾನ್ ಪಂಡಿತ

ಆ) ರವೀಂದ್ರ ಚೇತನ್

ಇ) ನವೀನ್ ಸಿಂಗ್

ಈ) ಶರತ್ ರಾಮನ್

ಇಷಾನ್ ಪಂಡಿತ

ಬೆಂಗಳೂರಿನ ಯುವಕ ಇಷಾನ್ ಪಂಡಿತ ಭಾರತೀಯ ಫುಟ್ಬಾಲ್ ನಲ್ಲಿ ಹೊಸ ಇತಿಹಾಸ ಬರೆದಿದ್ದಾರೆ. ಸ್ಪೇನಿನ ಲಾ ಲೀಗಾ ಸೇರಿದ ಮೊಟ್ಟ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಬೆಂಗಳೂರು ಮೂಲದ 18 ವರ್ಷ ವಯಸ್ಸಿನ ಯುವಕ ಇಷಾನ್ ಅವರು ಒಂದು ವರ್ಷದ ಒಪ್ಪಂದಕ್ಕೆ ಸಿಡಿ ಲಾಗೆನಸ್ ತಂಡದೊಡನೆ ಸಹಿ ಮಾಡಿದ್ದಾನೆ. ಪಂಡಿತಗೆ 50ನೇ ನಂಬರಿನ ನೀಲಿ ಹಾಗೂ ಬಿಳಿ ಪಟ್ಟಿಯ ಜರ್ಸಿ ನೀಡಲಾಗಿದೆ. ಕ್ಲಬಿನ ಉಪಾಧ್ಯಕ್ಷ ಹಾಗೂ ಮಾಲಕ ಫಿಲಿಫ್ ಮೊರೇನೊ, ಈಸ್ಟಾಡಿಯೊ ಮುನ್ಸಿಪಲ್ ಡೆ ಬುಟ್ರಕ್ ಸ್ಟೇಡಿಯಂನಲ್ಲಿ ನಡೆದ ಸಮಾರಂಭದಲ್ಲಿ ಜರ್ಸಿ ಪ್ರದಾನ ಮಾಡಿ, ತಂಡಕ್ಕೆ ಸ್ವಾಗತಿಸಿದರು. ಪಂಡಿತ ಈಗ ಮುಖ್ಯ ಕ್ಲಬ್ಗೆ ಸಹಿ ಮಾಡಿದ್ದರೂ, ಅಂಡರ್ 19 ತಂಡಕ್ಕಾಗಿ ಆಡಲಿದ್ದಾರೆ.

56. ಯುವ ಮತದಾರರನ್ನು ನೋಂದಾಯಿಸಲು ಭಾರತ ಚುನಾವಣಾ ಆಯೋಗವು ಯಾವ ಸಾಮಾಜಿಕ ತಾಣದೊಂದಿಗೆ ಕೈಜೋಡಿಸಿದೆ?

ಅ) ಫೇಸ್ ಬುಕ್

ಆ) ಟ್ವಿಟರ್

ಇ) ವಾಟ್ಸ್ ಆಪ್

ಈ) ಯೂಟ್ಯೂಬ್

ಫೇಸ್ ಬುಕ್

ಯುವ ಮತದಾರರನ್ನು ಮತದಾನಕ್ಕೆ ನೋಂದಾಯಿಸುವ ಸಲುವಾಗಿ ಭಾರತ ಚುನಾವಣಾ ಆಯೋಗವು ಸಾಮಾಜಿಕ ತಾಣ ಫೇಸ್ ಬುಕ್ ನೊಂದಿಗೆ ಕೈಜೋಡಿಸಿದೆ. 2017 ರಲ್ಲಿ ಐದು ರಾಜ್ಯಗಳಲ್ಲಿ ವಿಧಾನ ಸಭಾ ಚುನಾವಣೆ ನಡೆಯಲ್ಲಿದ್ದು, ಈ ಐದು ರಾಜ್ಯಗಳ ಯುವ ಮತದಾರರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲು ಚುನಾವಣಾ ಆಯೋಗ ಫೇಸ್ ಬುಕ್ ಮೊರೆ ಹೋಗಿದೆ. ಉತ್ತರ ಪ್ರದೇಶ, ಪಂಜಾಬ್, ಗೋವಾ, ಮಣಿಪುರ ಮತ್ತು ಉತ್ತರಖಂಡ್ ನಲ್ಲಿ ವಿಧಾನ ಸಭಾ ಚುನಾವಣೆ 2017 ರಲ್ಲಿ ನಡೆಯಲಿದೆ. ಈ ವಿನೂತನ ಕಾರ್ಯಕ್ರಮದ ಮೂಲಕ ಯುವಕರಲ್ಲಿ ಮತದಾನದ ಹಕ್ಕನ್ನು ಚಲಾಯಿಸಿ ಪ್ರಜಾಪ್ರಭುತ್ವ ಸರ್ಕಾರದಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೇರೆಪಿಸಲಾಗುವುದು.

57. ವಿಶ್ವದಲ್ಲೇ ಅತಿ ಹೆಚ್ಚು ಉದ್ದದ ಕರಾವಳಿ ತೀರಾವನ್ನು ಹೊಂದಿರುವ ರಾಷ್ಟ್ರ _____?

ಅ) ಆಸ್ಟ್ರೇಲಿಯಾ

ಆ) ಕೆನಡಾ

ಇ) ನ್ಯೂಜಿಲ್ಯಾಂಡ್

ಈ) ಭಾರತ

ಕೆನಡಾ

ಕೆನಡಾ ವಿಶ್ವದಲ್ಲೇ ಅತಿ ಹೆಚ್ಚು ಉದ್ದದ ಕರಾವಳಿ ತೀರಾವನ್ನು ಹೊಂದಿರುವ ರಾಷ್ಟ್ರ. ಕೆನಡಾ 1,25,560 ಮೈಲಿ ಉದ್ದದ ಕರಾವಳಿ ತೀರಾವನ್ನು ಹೊಂದಿದೆ. ಕೆನಡಾ ನಂತರ ಅತಿ ಹೆಚ್ಚು ಉದ್ದದ ಕರಾವಳಿ ತೀರಾವನ್ನು ಹೊಂದಿರುವ ರಾಷ್ಟ್ರಗಳ ಪೈಕಿ ಇಂಡೋನೇಷಿಯ ಮತ್ತು ರಷ್ಯಾ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.

58. ಇತ್ತೀಚೆಗೆ ನಿಧನರಾದ "ಹಿಸ್ನಮ್ ಕನ್ಹೈಲಾಲ್ (Heisnam Kanhailal)" ಯಾವ ಕ್ಷೇತ್ರಕ್ಕೆ ಸಂಬಂಧಿಸಿದ್ದಾರೆ?

ಅ) ರಂಗಭೂಮಿ

ಆ) ಸಿನಿಮಾ

ಇ) ಸಂಗೀತ

ಈ) ಕ್ರೀಡೆ

ರಂಗಭೂಮಿ

ಮಣಿಪುರಿ ರಂಗಭೂಮಿ ಕಲಾವಿದ ಹಿಸ್ನಮ್ ಕನ್ಹೈಲಾಲ್ ನಿಧನರಾದರು. ಅವರಿಗೆ 75 ವರ್ಷ ವಯಸ್ಸಾಗಿತ್ತು. ನಾಟಕ ಬರಹಗಾರರಾಗಿ, ನಿರ್ದೇಶಕರಾಗಿ ಮತ್ತು ನಟನಾಗಿ ಸುಮಾರು 40 ವರ್ಷಗಳ ಕಾಲ ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಕನ್ಹೈಲಾಲ್ ಮಣಿಪುರದ ರಂಗಭೂಮಿ ಪ್ರಯೋಗಾಲಯ "ಕಲಾಕ್ಷೇತ್ರ"ದ ಸಂಸ್ಥಾಪಕ ನಿರ್ದೇಶಕರು. ಮಣಿಪುರಿ ಜಾನಪದ ಶೈಲಿಯಲ್ಲಿನ ಅವರ ರಾಜಕೀಯ ನಾಟಕ "ಪೆಬೆಟ್" ಅವರಿಗೆ ಸಾಕಷ್ಟು ಮನ್ನಣೆ ತಂದುಕೊಟ್ಟಿತ್ತು.

59. ಇಸ್ರೋ ಇತ್ತೀಚೆಗೆ ಸುಧಾರಿತ ಸಂವಹನ ಉಪಗ್ರಹ ಜಿಸ್ಯಾಟ್-18ನ್ನು ಯಾವ ರಾಕೆಟ್ ಬಳಸಿ ಯಶಸ್ವಿಯಾಗಿ ಉಡಾಯಿಸಿತು?

ಅ) GSLV-18

ಆ) PSLV-34

ಇ) Ariane-5 VA-231

ಈ) Ariane-8 VA-231

Ariane-5 VA-231

ಭಾರತದ ಅತ್ಯಾಧುನಿಕ ಸುಧಾರಿತ ಸಂವಹನ ಉಪಗ್ರಹ ಜಿಸ್ಯಾಟ್-18ನ್ನು ಫ್ರೆಂಚ್ ಗಯಾನಾದ ಕೊವುರುನಲ್ಲಿರುವ ಉಡಾವಣಾ ಕೇಂದ್ರದಿಂದ ಯಶಸ್ವಿಯಾಗಿ ಉಡಾವಣೆ ಮಾಡಲಾಗಿದೆ. ಏರಿಯಾನ್-5 ವಿಎ-231 (Ariane-5 VA-231) ರಾಕೆಟ್ ಬಳಸಿ ಈ ಉಪಗ್ರಹವನ್ನು ಕಕ್ಷೆಗೆ ಯಶಸ್ವಿಯಾಗಿ ರವಾನಿಸಲಾಯಿತು. ಭೂಸ್ಥಾಯಿ ವರ್ಗಾವಣೆ ಕಕ್ಷೆಗೆ ಜಿಸ್ಯಾಟ್-18 ಅನ್ನು ಸೇರಿಸಲಾಗಿದೆ. ಯುರೋಪ್ ಬಾಹ್ಯಕಾಶ ಸಂಸ್ಥೆಯಿಂದ ಇಸ್ರೋ ಯಶಸ್ವಿಯಾಗಿ ಉಡಾಯಿಸಿದ 20ನೇ ಉಪಗ್ರಹವಾಗಿದೆ.

60. ಈ ಕೆಳಗಿನ ಯಾವ ಎರಡು ರಾಜ್ಯಗಳ ನಗರ ಪ್ರದೇಶಗಳನ್ನು ಬಯಲು ಬಹಿರ್ದೆಸೆ ಮುಕ್ತವೆಂದು ಘೋಷಿಸಲಾಗಿದೆ?

ಅ) ಗುಜರಾತ್, ಕೇರಳ

ಆ) ಕೇರಳ, ಆಂಧ್ರ ಪ್ರದೇಶ

ಇ) ಗುಜರಾತ್, ಆಂಧ್ರ ಪ್ರದೇಶ

ಈ) ಪಂಜಾಬ್, ಹರಿಯಾಣ

ಗುಜರಾತ್, ಆಂಧ್ರ ಪ್ರದೇಶ

ಆಂಧ್ರಪ್ರದೇಶ ಮತ್ತು ಗುಜರಾತಿನ ನಗರ ಪ್ರದೇಶಗಳು ಬಯಲು ಬಹಿರ್ದೆಸೆ ಮುಕ್ತವೆಂದು ಕೇಂದ್ರ ನಗರಾಭಿವೃದ್ಧಿ ಸಚಿವಾಲಯ ಘೋಷಿಸಿದೆ. ಸ್ವಚ್ಚ ಭಾರತ ಅಭಿಯಾನಕ್ಕೆ ಎರಡು ವರ್ಷ ಪೂರೈಸಿದ ಹಿನ್ನಲೆಯಲ್ಲಿ ಹಾಗೂ ಗಾಂಧಿ ಜಯಂತಿ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಘೋಷಿಸಲಾಯಿತು. ಆಂಧ್ರಪ್ರದೇಶ ಮತ್ತು ಗುಜರಾತ್ ರಾಜ್ಯಗಳು ನಗರ ಪ್ರದೇಶಗಳನ್ನು ಬಯಲು ಬಹಿರ್ದೆಸೆಯಿಂದ ಮುಕ್ತ ಮಾಡಿದ ದೇಶದ ಮೊದಲ ರಾಜ್ಯಗಳೆನಿಸಿವೆ. ಎರಡು ರಾಜ್ಯಗಳ 180 ನಗರಗಳು ಮತ್ತು 110 ಪಟ್ಟಣಗಳನ್ನು ಬಯಲು ಬಹಿರ್ದೆಸೆ ಮುಕ್ತ ಪ್ರದೇಶಗಳೆಂದು ಎರಡು ರಾಜ್ಯಗಳ ಮುಖ್ಯಮಂತ್ರಿಗಳು ಘೋಷಿಸಿದ್ದಾರೆ. ಇವರಗೆ ದೇಶದ 4041 ನಗರ ಪ್ರದೇಶಗಳ ಪೈಕಿ 405 ಪ್ರದೇಶಗಳನ್ನು ಬಯಲು ಬಹಿರ್ದೆಸೆ ಮುಕ್ತ ಪ್ರದೇಶಗಳೆಂದು ಘೋಷಿಸಲಾಗಿದೆ.

61. ಭಾರತದ ಮೊಟ್ಟ ಮೊದಲ "ಅಂತಾರಾಷ್ಟ್ರೀಯ ಮಧ್ಯಸ್ಥಿಕೆ ಕೇಂದ್ರ (International Arbitration Centre)" ಯಾವ ನಗರದಲ್ಲಿ ಸ್ಥಾಪಿಸಲಾಗಿದೆ?

ಅ) ನವ ದೆಹಲಿ

ಆ) ಬೆಂಗಳೂರು

ಇ) ಮುಂಬೈ

ಈ) ಪುಣೆ

ಮುಂಬೈ

ದೇಶದ ಮೊಟ್ಟ ಮೊದಲ "ಅಂತಾರಾಷ್ಟ್ರೀಯ ಮಧ್ಯಸ್ಥಿಕೆ ಕೇಂದ್ರ"ವನ್ನು ಮುಂಬೈನಲ್ಲಿ ಸ್ಥಾಪಿಸಲಾಗಿದೆ. ಮುಂಬೈ ಅಂತಾರಾಷ್ಟ್ರೀಯ ಮಧ್ಯಸ್ಥಿಕೆ ಕೇಂದ್ರವನ್ನು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನಾವೀಸ್ ಅವರು ಉದ್ಘಾಟಿಸಿದರು. ವಿಶ್ವದಾದ್ಯಂತ ವಿವಿಧ ಕಂಪನಿಗಳು ಮತ್ತು ವ್ಯಕ್ತಿಗಳ ನಡುವೆ ವಿವಾದಗಳನ್ನು ಬಗೆಹರಿಸಲು ಈ ಕೇಂದ್ರ ಸಹಾಯ ಮಾಡಲಿದೆ.

62. ಭಾರತ ಮತ್ತು ಸಿಂಗಾಪುರ ಇತ್ತೀಚೆಗೆ ಈ ಕೆಳಗಿನ ಯಾವ ಕ್ಷೇತ್ರಗಳಲ್ಲಿ ಒಪ್ಪಂದಕ್ಕೆ ಸಹಿ ಹಾಕಿವೆ?

I) ಪ್ರವಾಸೋದ್ಯಮ

II) ಕೌಶಲ್ಯ ಅಭಿವೃದ್ಧಿ

III) ಕೈಗಾರಿಕಾ ಆಸ್ತಿ ಸಹಕಾರ

ಈ ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಗುರುತಿಸಿ:



www.karunaduexams.com

ಅ) I & II

ಆ) II & III

ಇ) I & III

ಈ) I, II & III

II & III

ಭಾರತ ಮತ್ತು ಸಿಂಗಾಪುರ ನಡುವೆ ಮೂರು ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಕೌಶಲ್ಯ ಅಭಿವೃದ್ಧಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಎರಡು ಒಪ್ಪಂದಗಳು ಸೇರಿದಂತೆ ಒಟ್ಟು ಮೂರು ಒಪ್ಪಂದಗಳಿಗೆ ಸಹಿ ಹಾಕಲಾಯಿತು. ಪ್ರಧಾನಿ ನರೇಂದ್ರ ಮೋದಿ ಹಾಗೂ ದಿಲ್ಲಿಗೆ ಭೇಟಿ ನೀಡಿರುವ ಸಿಂಗಾಪುರದ ಪ್ರಧಾನಿ ಲೀ ಹ್ಸೀನ್ ಲೂಂಗ್ ನೇತೃತ್ವದ ನಿಯೋಗಗಳ ಮಟ್ಟದ ಮಾತುಕತೆಯ ಬಳಿಕ, ಉಭಯ ದೇಶಗಳು ನವದೆಹಲಿಯಲ್ಲಿ ಮೂರು ಒಪ್ಪಂದಗಳಿಗೆ ಸಹಿ ಹಾಕಿವೆ. ಕೈಗಾರಿಕಾ ಆಸ್ತಿ ಸಹಕಾರ ಒಪ್ಪಂದ: ಕೈಗಾರಿಕ ನೀತಿ ಮತ್ತು ಪ್ರಚಾರ ಇಲಾಖೆ ಹಾಗೂ ಬೌದ್ಧಿಕ ಆಸ್ತಿ ಕಚೇರಿ, ಸಿಂಗಾಪುರ ನಡುವೆ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು. ತಾಂತ್ರಿಕ, ವೃತ್ತಿ ಶಿಕ್ಷಣ ಮತ್ತು ತರಬೇತಿ ಕ್ಷೇತ್ರದಲ್ಲಿ ಒಪ್ಪಂದ: ಸಿಂಗಾಪುರದ ತಾಂತ್ರಿಕ ಶಿಕ್ಷಣ ಸಂಸ್ಥೆ(ಐಟಿಇ) ಶಿಕ್ಷಣ ಸೇವೆಗಳು(ಐಟಿಇಇಎಸ್) ಹಾಗೂ ಭಾರತದ ಕೌಶಲಾಭಿವೃದ್ಧಿ ನಿಗಮಗಳು ತಾಂತ್ರಿಕ ಹಾಗೂ ವೃತ್ತಿ ಶಿಕ್ಷಣ ಮತ್ತು ತರಬೇತಿಯ ಸಂಬಂಧ ತಿಳುವಳಿಕೆ ಪತ್ರವೊಂದಕ್ಕೆ ಸಹಿ ಹಾಕಿವೆ.

63. ದೇಶದ “ಅತಿ ಸ್ವಚ್ಚ ಸಾಂಪ್ರದಾಯಿಕ ಸ್ಥಳ (Cleanest Iconic Place)” ಪ್ರಶಸ್ತಿಯನ್ನು ಪಡೆದುಕೊಂಡ ವಿಶ್ವ ಪರಂಪರಿಕ ತಾಣ ಯಾವುದು?

ಅ) ರಾಣಿ-ಕಿ-ವಾವ್

ಆ) ತಾಜ್ ಮಹಲ್

ಇ) ಖುಜರಾಹೋ ದೇವಸ್ಥಾನ

ಈ) ಕೆಂಪು ಕೋಟೆ

ರಾಣಿ-ಕಿ-ವಾವ್

**900 ವರ್ಷ ಇತಿಹಾಸ ಹೊಂದಿರುವ ವಿಶ್ವ ಪರಂಪರಿಕ ತಾಣವಾದ ಗುಜರಾತಿನ “ರಾಣಿ-ಕಿ-ವಾವ್” ಅನ್ನು ದೇಶದ 25 ಆದರ್ಶ ಸ್ಮಾರಕಗಳ ಪೈಕಿ ಅತಿ ಸ್ವಚ್ಚ ಸಾಂಪ್ರದಾಯಿಕ ಸ್ಥಳ (**Cleanest Iconic Place**)ವೆಂದು ಕೇಂದ್ರ ಸಂಸ್ಕೃತಿ ಸಚಿವಾಲಯ ಘೋಷಿಸಿದೆ. ಇತ್ತೀಚೆಗೆ ಮುಕ್ತಾಯಗೊಂಡ ಭಾರತ ನೈರ್ಮಲ್ಯ ಸಮ್ಮೇಳನ (ಇಂಡೋಸಾನ್)ದಲ್ಲಿ ಈ ಪ್ರಶಸ್ತಿಯನ್ನು ನೀಡಲಾಯಿತು. ರಾಣಿ-ಕಿ-ವಾವ್ ಅನ್ನು 11ನೇ ಶತಮಾನದಲ್ಲಿ ರಾಣಿ ಉದಯಮತಿ ರವರು ರಾಜನ ನೆನಪಿಗಾಗಿ ನಿರ್ಮಿಸಿದ್ದಾರೆ. 2014 ರಲ್ಲಿ ಇದನ್ನು ವಿಶ್ವ ಪರಂಪರಿಕ ತಾಣ ಪಟ್ಟಿಗೆ ಸೇರ್ಪಡೆಗೊಳಿಸಲಾಗಿದೆ. ಇದು ಉತ್ತರ ಗುಜರಾತ್ ನ ಪಠಾಣ್ ಜಿಲ್ಲೆಯಲ್ಲಿದೆ.**

www.karunaduexams.com

64. ದೇಶದ ಮೊದಲ ಮೆಡಿಕಲ್ ಪಾರ್ಕ್ ಯಾವ ರಾಜ್ಯದಲ್ಲಿ ಸ್ಥಾಪನೆಯಾಗಲಿದೆ?

ಅ) ಆಂಧ್ರ ಪ್ರದೇಶ

ಆ) ತೆಲಂಗಣ

ಇ) ತಮಿಳುನಾಡು

ಈ) ಮಹಾರಾಷ್ಟ್ರ

ತಮಿಳುನಾಡು

ದೇಶದ ಮೊದಲ ವೈದ್ಯಕೀಯ ಉಪಕರಣಗಳ ತಯಾರಿಕೆ ಪಾರ್ಕ್ ಚೆನ್ನೈ ಸಮೀಪದ ಚೆಂಗಲ್ಪಟ್ಟು ಎಂಬಲ್ಲಿ ಸ್ಥಾಪನೆ ಆಗಲಿದೆ. ಇದಕ್ಕಾಗಿ 330.10 ಎಕರೆ ಭೂಮಿಯನ್ನು ಉಪಗುತ್ತಿಗೆ ಆಧಾರದಲ್ಲಿ ನೀಡಲು ಆರೋಗ್ಯ ಸಚಿವಾಲಯದ ಅಧೀನದಲ್ಲಿರುವ ಸಾರ್ವಜನಿಕ ಕ್ಷೇತ್ರದ ಉದ್ಯಮ ಎಚ್‌ಎಲ್‌ಎಲ್ ಲೈಫ್‌ಕೇರ್‌ಗೆ ಸರಕಾರವು ಬುಧವಾರ ಹಸಿರು ನಿಶಾನೆಯನ್ನು ತೋರಿಸಿದೆ. ಎಚ್‌ಎಲ್‌ಎಲ್ ಶೇ.50ರಷ್ಟು ಪಾಲು ಬಂಡವಾಳದೊಂದಿಗೆ ಅಸ್ತಿತ್ವಕ್ಕೆ ಬರಲಿರುವ ಹೊಸ ಕಂಪನಿಯೊಂದರ ಮೂಲಕ ಮೆಡಿಕಲ್ ಪಾರ್ಕ್ ತಲೆಯೆತ್ತಲಿದೆ. ಮೆಡಿಪಾರ್ಕ್ ಯೋಜನೆಯು ದೇಶದ ವೈದ್ಯಕೀಯ ತಂತ್ರಜ್ಞಾನ ಕ್ಷೇತ್ರದಲ್ಲಿ ಮೊದಲ ತಯಾರಿಕಾ ಘಟಕಗಳ ಸಮೂಹವಾಗಲಿದೆ.

65. ಈ ಕೆಳಗಿನ ನದಿಗಳನ್ನು ಗಮನಿಸಿ:

I) ತಪತಿ ನದಿ

II) ನರ್ಮದಾ ನದಿ

III) ಮಾಹಿ

IV) ಸಬರಮತಿ

ಮೇಲಿನ ಯಾವ ನದಿಗಳು “ಗಲ್ಫ್ ಆಫ್ ಖಂಬತ್ (Gulf of Khambat)”ಗೆ ಹರಿಯುತ್ತವೆ?

ಅ) I & II

ಆ) I, II & III

ಇ) II, III & IV

ಈ) I, II, III & IV

I, II, III & IV

66. “2016 ಚೀನಾ ಓಪನ್ ಮಹಿಳೆಯರ ಸಿಂಗಲ್ಸ್” ವಿಭಾಗದಲ್ಲಿ ಪ್ರಶಸ್ತಿ ಗೆದ್ದವರು ಯಾರು?

ಅ) ಅಗ್ನೆಸ್ಕಾ ರಾಂಡ್ವಾಂಸ್ಕಾ

ಆ) ಜೊಹನ್ನಾ ಕಾಂಟಾ

ಇ) ವಿಕ್ಟೋರಿಯಾ ಅಜೆರೆಂಕ

ಈ) ಮಾರ್ಟೀನ ಹಿಂಗೀಸ್

ಅಗ್ನೆಸ್ಕಾ ರಾಂಡ್ವಾಂಸ್ಕಾ

ಪೋಲೆಂಡ್ನ ಅಗ್ನೆಸ್ಕಾ ರಾಂಡ್ವಾಂಸ್ಕಾ ಚೀನಾ ಓಪನ್ನಲ್ಲಿ ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡಿದ್ದಾರೆ. ಫೈನಲ್ ಪಂದ್ಯದಲ್ಲಿ ರಾಂಡ್ವಾಂಸ್ಕಾ ಅವರು ಅಮೆರಿಕದ ಜೊಹನ್ನಾ ಕಾಂಟಾರನ್ನು 6-4, 6-2 ನೇರ ಸೆಟ್ಗಳಿಂದ ಮಣಿಸಿದರು. ಈ ಮೂಲಕ ವೃತ್ತಿಜೀವನದಲ್ಲಿ 20ನೇ ಹಾಗೂ ಬೀಜಿಂಗ್ನಲ್ಲಿ 2ನೇ ಪ್ರಶಸ್ತಿ ಮುಡಿಗೇರಿಸಿಕೊಂಡರು.

67. ಇತ್ತೀಚೆಗೆ "ವಿಶಾಖಪಟ್ಟಣ ಸ್ಟೀಲ್ (Vizag Steel)"ನ ಬ್ರಾಂಡ್ ರಾಯಭಾರಿಯಾಗಿ ಯಾರು ನೇಮಕಗೊಂಡಿದ್ದಾರೆ?

ಅ) ವಿ ವಿ ಎಸ್ ಲಕ್ಷ್ಮಣ್

ಆ) ಪಿ ವಿ ಸಿಂಧು

ಇ) ಪ್ರಕಾಶ್ ರಾಜ್

ಈ) ಮಹೇಶ್ ಬಾಬು

ರಿಯೋ ಒಲಂಪಿಕ್ಸ್ ನಲ್ಲಿ ಬೆಳ್ಳಿ ಗೆದ್ದ ಬ್ಯಾಡ್ಮಿಂಟನ್ ತಾರೆ ಪಿ ವಿ ಸಿಂಧು ರವರನ್ನು ವಿಝಾಗ್ ಸ್ಟೀಲ್ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ. ರಾಷ್ಟ್ರೀಯ ಇಸ್ಪತ್ ನಿಗಮ ಲಿಮಿಟೆಡ್ ಚೇರಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ಪಿ ಮಧುಸೂದನ್ ಅವರು ಈ ವಿಷಯವನ್ನು ಖಚಿತಪಡಿಸಿದ್ದಾರೆ.

68. ಯುರೋಪ್ ನ ಅತಿ ದೊಡ್ಡ ಬಂದರು ______?

ಅ) ರಾಟರ್ಡಾಮ್ ಬಂದರು

ಆ) ಆಂಟ್ವರ್ಪ್ ಬಂದರು

ಇ) ಹಂಬರ್ಗ್ ಬಂದರು

ಈ) ಅಮ್ಸ್ಟರ್ಡ್ಯಾಮ್ ಬಂದರು

ರಾಟರ್ಡಾಮ್ ಬಂದರು

ರಾಟರ್ಡಾಮ್ ಬಂದರು ಯುರೋಪ್ನ ಅತಿ ದೊಡ್ಡ ಬಂದರು. ನೆದರ್ಲ್ಯಾಂಡ್ ನ ರಾಟರ್ಡಾಮ್ ನಗರದಲ್ಲಿರುವ ಈ ಬಂದರು 1962 ರಿಂದ 2004 ರವರೆಗೆ ವಿಶ್ವದ ಹೆಚ್ಚು ದಟ್ಟಣೆ ಇರುವ ಬಂದರು ಎನಿಸಿತ್ತು.

69. ಈ ಕೆಳಗಿನ ಸಂಸ್ಥೆಗಳನ್ನು ಗಮನಿಸಿ:

I) WHO

II) OPEC

III) IMF

IV) FAO

ಈ ಮೇಲಿನವುಗಳಲ್ಲಿ ವಿಶ್ವಸಂಸ್ಥೆಯ ವಿಶೇಷ ಸಂಸ್ಥೆಗಳು ಯಾವುವು?

ಅ) I, II & IV

ಆ) I, III & IV

ಇ) I, II & III

ಈ) I, II, III & IV

I, III & IV

ವಿಶ್ವ ಆರೋಗ್ಯ ಸಂಸ್ಥೆ (WHO), ಅಂತಾರಾಷ್ಟ್ರೀಯ ಹಣಕಾಸು ನಿಧಿ (IMF) ಮತ್ತು ಆಹಾರ ಮತ್ತು ಕೃಷಿ ಸಂಸ್ಥೆ (FAO) ವಿಶ್ವಸಂಸ್ಥೆಯ ವಿಶೇಷ ಸಂಸ್ಥೆ (Specialized Agencies)ಗಳಾಗಿವೆ.

70. ಪ್ರತಿಷ್ಠಿತ "ಐಎಎಫ್ ಹಾಲ್ ಆಫ್ ಫೇಮ್" ಗೌರವಕ್ಕೆ ಸೇರ್ಪಡೆಗೊಂಡ ಭಾರತದ ಮೊಟ್ಟ ಮೊದಲ ವಿಜ್ಞಾನಿ ಯಾರು?

ಅ) ಮಾಧವನ್ ನಾಯರ್

ಆ) ರಾಧಕೃಷ್ಣನ್

ಇ) ಯು. ಆರ್. ರಾವ್

ಈ) ಸತೀಶ್ ಚಂದ್ರ

ಯು. ಆರ್. ರಾವ್

ಇಸ್ರೋದ ಮಾಜಿ ಅಧ್ಯಕ್ಷ ಹಾಗೂ ಖ್ಯಾತ ಬಾಹ್ಯಾಕಾಶ ವಿಜ್ಞಾನಿ ಪ್ರೊ.ಯು.ಆರ್.ರಾವ್ ಅವರು ಪ್ರತಿಷ್ಠಿತ 'ಐಎಎಫ್ ಹಾಲ್ ಆಫ್ ಫೇಮ್' ಸೇರ್ಪಡೆ ಗೌರವಕ್ಕೆ ಪಾತ್ರರಾಗಿದ್ದಾರೆ. ಆ ಮೂಲಕ ಈ ಗೌರವಕ್ಕೆ ಪಾತ್ರರಾದ ಭಾರತದ ಮೊದಲಿಗರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಸೆ. 30 ರಂದು ಮೆಕ್ಸಿಕೊದಲ್ಲಿ ನಡೆದ 67ನೇ ಇಂಟರ್ ನ್ಯಾಷನಲ್ ಏರೋನಾಟಿಕಲ್ ಕಾಂಗ್ರೆಸ್ ಸಮಾವೇಶದಲ್ಲಿ ರಾವ್ ಅವರ ಹೆಸರನ್ನು ಹಾಲ್ ಆಫ್ ಫೇಮ್ ಗೆ ಸೇರ್ಪಡೆ ಮಾಡಲಾಯಿತು. ಇಂಟರ್‌ನ್ಯಾಷನಲ್ ಏರೋನಾಟಿಕಲ್ ಫೆಡರೇಷನ್ (ಐಎಎಫ್) ನೀಡುವ ಈ ಗೌರವ ಅಂತರಿಕ್ಷ ವಿಜ್ಞಾನಿಗಳ ಪಾಲಿಗೆ ಅತ್ಯುನ್ನತವಾದುದು.

71. ಜೈವಿಕ ಔಷಧೀಯ ಸ್ಪರ್ಧಾತ್ಮಕತೆ ಮತ್ತು ಬಂಡವಾಳ ಸಮೀಕ್ಷೆ (Biopharmaceutical Competitiveness & Investment (BCI) ಯಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) 28

ಆ) 33

ಇ) 19

ಈ) 20

19

ಜೈವಿಕ ಔಷಧೀಯ ಸ್ಪರ್ಧಾತ್ಮಕತೆ ಮತ್ತು ಬಂಡವಾಳ ಸಮೀಕ್ಷೆಯಲ್ಲಿ 28 ರಾಷ್ಟ್ರಗಳ ಪೈಕಿ ಭಾರತ 19ನೇ ಸ್ಥಾನವನ್ನು ಪಡೆದುಕೊಂಡಿದೆ. ಸಮೀಕ್ಷೆಯಲ್ಲಿ 100 ಅಂಕಗಳಿಗೆ ಭಾರತ 59 ಅಂಕಗಳನ್ನು ಪಡೆದುಕೊಂಡಿದೆ. ವೈಜ್ಞಾನಿಕ

www.karunaduexams.com

ಸಾಮರ್ಥ್ಯಗಳು ಮತ್ತು ಮೂಲಭೂತ ಸೌಕರ್ಯಗಳು ಹಾಗೂ ವೈದ್ಯಕೀಯ ಸಂಶೋಧನಾ ಪರಿಸ್ಥಿತಿಗಳು ಮತ್ತು ಚೌಕಟ್ಟು ಹೊರತುಪಡಿಸಿ ಉಳಿದ ಎಲ್ಲಾ ಅಂಶಗಳಲ್ಲಿ ಭಾರತ ಕಳಪೆ ಸಾಧನೆ ಮಾಡಿದೆ. ಸಮೀಕ್ಷೆಯಲ್ಲಿ ಅಮೆರಿಕ ಮೊದಲ ಸ್ಥಾನದಲ್ಲಿದ್ದರೆ, ಯು.ಕೆ ಮತ್ತು ಸ್ವಿಟ್ಜರ್ಲ್ಯಾಂಡ್ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.

72. ಭಾರತ ಮತ್ತು ಬಾಂಗ್ಲದೇಶ ನಡುವೆ ಗಡಿ ನಿರ್ವಹಣೆಯಲ್ಲಿ ನ್ಯೂನತೆ ಬಗ್ಗೆ ಅಧ್ಯಯನ ನಡೆಸಲು ಕೇಂದ್ರ ಗೃಹ ಸಚಿವಾಲಯ ಯಾವ ಸಮಿತಿಯನ್ನು ಇತ್ತೀಚಗೆ ನೇಮಿಸಿದೆ?

ಅ) ಮಧುಕರ್ ಗುಪ್ತ ಸಮಿತಿ

ಆ) ಸುರೇಶ್ ಬನ್ಸಾಲ್ ಸಮಿತಿ

ಇ) ರಾಜೀವ್ ಘೋರ್ಪಡೆ ಸಮಿತಿ

ಈ) ರಮೇಶ್ ಮುಖರ್ಜಿ ಸಮಿತಿ

ಮಧುಕರ್ ಗುಪ್ತ ಸಮಿತಿ

ಭಾರತ ಮತ್ತು ಬಾಂಗ್ಲದೇಶದ ನಡುವೆ ಗಡಿ ನಿರ್ವಹಣೆಯಲ್ಲಿನ ಲೋಪಗಳನ್ನು ಗುರುತಿಸಿ, ಈ ಲೋಪಗಳನ್ನು ಸರಿಪಡಿಸಲು ಶಿಫಾರಸ್ಸು ಮಾಡುವ ಸಲುವಾಗಿ ಮಾಜಿ ಗೃಹ ಕಾರ್ಯದರ್ಶಿ ಮಧುಕರ್ ಗುಪ್ತ ರವರ ನೇತೃತ್ವದ ಸಮಿತಿಯನ್ನು ಕೇಂದ್ರ ಗೃಹ ಸಚಿವಾಲಯ ರಚಿಸಿದೆ. ಸಮಿತಿಯು ಮುಂದಿನ ಮೂರು ಅಥವಾ ನಾಲ್ಕು ತಿಂಗಳೊಳಗೆ ವರದಿಯನ್ನು ಸಲ್ಲಿಸಲಿದೆ. ಗಡಿ ಬೇಲಿ ನಿರ್ಮಾಣ ಪ್ರಗತಿ, ಸಮಸ್ಯಾತ್ಮಕ ಪ್ರದೇಶಗಳನ್ನು ಗುರುತಿಸುವುದು, ಸುಧಾರಿತ ಕಣ್ಗಾವಲು ವ್ಯವಸ್ಥೆ ನಿರ್ಮಾಣ ಸೇರಿದಂತೆ ವಿವಿಧ ಆಯಾಮಗಳನ್ನು ಸಮಿತಿ ಅಧ್ಯಯನ ನಡೆಸಲಿದೆ. ಭಾರತ ಮತ್ತು ಪಾಕಿಸ್ತಾನ ನಡುವೆ ಗಡಿ ಭದ್ರತೆಯನ್ನು ಹೆಚ್ಚಿಸಲು ಇದೇ ಸಮಿತಿ ಈ ಹಿಂದೆ ಶಿಫಾರಸ್ಸು ಮಾಡಿತ್ತು.

73. ಈ ಕೆಳಗಿನ ಯಾವ ದೇಶಗಳು "ಗಲ್ಫ್ ಸಹಕಾರ ಮಂಡಳಿ (Gulf Cooperation Council)" ಸದಸ್ಯ ರಾಷ್ಟ್ರಗಳಾಗಿವೆ?

I) ಸೌದಿ ಅರೇಬಿಯಾ

II) ಕುವೈತ್

III) ಬಹ್ರೇನ್

IV) ಒಮನ್

ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಗುರುತಿಸಿ:

ಅ) I, II & III

ಆ) II, III & IV

ಇ) I, III & IV

ಈ) I, II, III & IV

I, II, III & IV

ಗಲ್ಫ್ ಸಹಕಾರ ಮಂಡಳಿಯು ಆರು ಮಧ್ಯಪ್ರಾಚ್ಯ ರಾಷ್ಟ್ರಗಳ ರಾಜಕೀಯ ಮತ್ತು ಆರ್ಥಿಕ ಮೈತ್ರಿಕೂಟವಾಗಿದೆ. ಸೌದಿ ಅರೇಬಿಯಾ, ಕುವೈತ್, ಬಹ್ರೇನ್, ಒಮನ್, ಖತರ್ ಮತ್ತು ಯುಎಇ ಇದರ ಸದಸ್ಯ ರಾಷ್ಟ್ರಗಳು. ಈ ಮಂಡಳಿಯ ಕೇಂದ್ರಕಚೇರಿಯು ಸೌದಿ ಅರೇಬಿಯಾದ ರಿಯದ್ ನಲ್ಲಿದೆ. ಜೊರ್ಡನ್, ಯೆಮನ್ ಮತ್ತು ಮೊರೊಕ್ಕೊ ರಾಷ್ಟ್ರಗಳಿಗೆ ಸದಸ್ಯ ಸ್ಥಾನಮಾನ ನೀಡುವ ಸಲುವಾಗಿ ಮಾತುಕತೆ ನಡೆಯುತ್ತಿದೆ.

74. "ಭಾರತೀಯ ವಾಯುಪಡೆ ದಿನ (Indian Air Force Day)" ವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಅಕ್ಟೋಬರ್ 6

ಆ) ಅಕ್ಟೋಬರ್ 7

ಇ) ಅಕ್ಟೋಬರ್ 8

ಈ) ಅಕ್ಟೋಬರ್ 9

ಅಕ್ಟೋಬರ್ 8

ಭಾರತೀಯ ವಾಯುಪಡೆ ದಿನವನ್ನು ಅಕ್ಟೋಬರ್ 8 ರಂದು ಆಚರಿಸಲಾಗುತ್ತದೆ. ಈ ವರ್ಷ ವಾಯುಪಡೆಯ 84ನೇ ದಿನವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಭಾರತೀಯ ವಾಯುಪಡೆಯನ್ನು ಅಕ್ಟೋಬರ್ 8, 1932 ರಲ್ಲಿ ಸ್ಥಾಪಿಸಲಾಗಿದೆ. ಪ್ರಸ್ತುತ ಭಾರತೀಯ ವಾಯುಪಡೆ ವಿಶ್ವದ ನಾಲ್ಕನೇ ಅತಿ ದೊಡ್ಡ ವಾಯು ಪಡೆ ಆಗಿದೆ.

75. "2016 ಚೀನಾ ಓಪನ್ ಪುರುಷರ ಸಿಂಗಲ್ಸ್" ವಿಭಾಗದಲ್ಲಿ ಪ್ರಶಸ್ತಿ ಗೆದ್ದ ಆಟಗಾರ ಯಾರು?

ಅ) ಆಯಂಡಿ ಮರ್ರೆ

ಆ) ಗ್ರಿಗೊರ್ ಡಿಮಿಟ್ರಿ

ಇ) ರಫೆಲ್ ನಾಡಲ್

ಈ) ರೋಜರ್ ಫೆಡರರ್

ಆಯಂಡಿ ಮರ್ರೆ

ಬ್ರಿಟನ್ನ ಆಯಂಡಿ ಮರ್ರೆ ಚೀನಾ ಓಪನ್ ಪುರುಷರ ಸಿಂಗಲ್ಸ್ ಪ್ರಶಸ್ತಿ ಜಯಿಸಿದರು. ಫೈನಲ್ನಲ್ಲಿ ಅವರು ಗ್ರಿಗೊರ್ ಡಿಮಿಟ್ರಿ ಅವರನ್ನು 6-4, 7-6(7-2) ನೇರ ಸೆಟ್ಗಳ ಅಂತರದಿಂದ ಮಣಿಸಿದರು.

76. ಇತ್ತೀಚೆಗೆ "ಹೈಟಿ ಮತ್ತು ಫ್ಲೋರಿಡ" ಭಾಗಗಳಲ್ಲಿ ಅಪಾರ ಸಾವುನೋವಿಗೆ ಕಾರಣವಾದ ಚಂಡಮಾರುತದ ಹೆಸರು ______?

ಅ) ಸಿರಸ್

ಆ) ಮ್ಯಾಥ್ಯು

ಇ) ಚಾಡ್

www.karunaduexams.com

ಈ) ಮೆಗಿ

ಮ್ಯಾಥ್ಯು

ಮ್ಯಾಥ್ಯು ಚಂಡಮಾರುತ ಹೈಟಿ ಮತ್ತು ಫ್ಲೋರಿಡಾದ ಕರಾವಳಿ ಭಾಗದಲ್ಲಿ ಭೀಕರ ಮಳೆ ಸೃಷ್ಟಿಸಿದ್ದು ಅಪಾರ ನಷ್ಟ ಉಂಟುಮಾಡಿದೆ. ಅಟ್ಲಾಂಟಿಕ್ ಕರಾವಳಿಯಲ್ಲಿ ಈ ದಶಕದಲ್ಲಿ ಬಂದ ಅತ್ಯಂತ ಶಕ್ತಿಶಾಲಿ, ಅಪಾಯಕಾರಿ ಚಂಡಮಾರುತ ಇದಾಗಿದ್ದು, ಇದುವರೆಗೆ ಹೈಟಿಯಲ್ಲಿ ಮೃತಪಟ್ಟವರ ಸಂಖ್ಯೆ 842ಕ್ಕೆ ಏರಿದೆ. ಸುಮಾರು 3 ದಶಲಕ್ಷ ಮನೆಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಈ ಚಂಡಮಾರುತವನ್ನು 2ನೇ ಶ್ರೇಣಿಯ ಚಂಡಮಾರುತ ಎಂದು ಗುರುತಿಸಲಾಗಿದ್ದು, ಗಂಟೆಗೆ 110 ಮೈಲಿ ವೇಗವಾಗಿ ಗಾಳಿ ಬೀಸುತ್ತಿದೆ.

77. ದೇಶದ ನದಿಗಳನ್ನು ಸ್ವಚ್ಛಗೊಳಿಸುವುದಕ್ಕಾಗಿ ಭಾರತ ಇತ್ತೀಚೆಗೆ ಈ ಕೆಳಗಿನ ಯಾವುದರ ಜೊತೆ ಒಪ್ಪಂದಕ್ಕೆ ಸಹಿ ಹಾಕಿದೆ?

ಅ) ವಿಶ್ವ ಬ್ಯಾಂಕ್

ಆ) ಯುರೋಪ್ ಒಕ್ಕೂಟ

ಇ) ಅಂತಾರಾಷ್ಟ್ರೀಯ ಹಣಕಾಸು ನಿಧಿ

ಈ) ಅಸಿಯಾನ್

ಯುರೋಪ್ ಒಕ್ಕೂಟ

ಭಾರತ ಮತ್ತು ಯುರೋಪ್ ಒಕ್ಕೂಟ ಜಲ ಸಹಭಾಗಿತ್ವ ಒಪ್ಪಂದಕ್ಕೆ ಸಹಿ ಹಾಕಿದ್ದು, ಆ ಮೂಲಕ ಯುರೋಪ್ ನೆರವಿನೊಂದಿಗೆ ಭಾರತದ ನದಿಗಳನ್ನು ಸ್ವಚ್ಛಗೊಳಿಸಲಾಗುವುದು. ಕೇಂದ್ರ ಸಚಿವೆ ಉಮಾ ಭಾರತಿ ಮತ್ತು ಯುರೋಪಿಯನ್ ಕಮೀಷನ್ ನ ಪರಿಸರ, ಸಾಗರೋತ್ತರ ವ್ಯವಹಾರ ಮತ್ತು ಮೀನುಗಾರಿಕೆ ಕಮೀಷನರ್ ಕರ್ಮೆನು ವೆಲ್ಲ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಯಿತು.

78. ಭಾಸ್ಕರಚಾರ್ಯರ "ಲೀಲಾವತಿ" ಪುಸ್ತಕವನ್ನು ಪರ್ಷಿಯನ್ ಭಾಷೆಗೆ ಭಾಷಾಂತರಗೊಳಿಸಿದವರು ____?

ಅ) ಅಲ್ಬೆರುನಿ

ಆ) ದಾರ್ ಷಿಕೋಹ್

ಇ) ಅಬ್ದುಲ್ ಫಜಲ್

ಈ) ಅಬ್ದುಲ್ ಫೈಜಿ

ಅಬ್ದುಲ್ ಫೈಜಿ

ಅಬುಲ್ ಫೈಜಿ ಅಕ್ಬರನ ಆಸ್ಥಾನದಲ್ಲಿದ್ದ ಪ್ರಸಿದ್ಧ ಪರ್ಷಿಯನ್ ಕವಿ. ಫೈಜಿಗೆ ಕವಿಚಕ್ರವರ್ತಿ ಎಂಬ ಬಿರುದು ಇತ್ತು. ಅರಬ್ಬೀ ಸಾಹಿತ್ಯದಲ್ಲೂ ಈತನಿಗೆ ಆಳವಾದ ಅಭ್ಯಾಸವಿತ್ತು. ಭಾಸ್ಕರಾಚಾರ್ಯ ಬರೆದ ಲೀಲಾವತಿ ಎಂಬ ಸಂಸ್ಕೃತ ಗಣಿತಗ್ರಂಥವನ್ನೂ ಭಗವದ್ ಗೀತೆಯನ್ನೂ ಪರ್ಷಿಯನ್ ಭಾಷೆಗೆ ಈತ ಪರಿವರ್ತಿಸಿದ.

www.karunaduexams.com

79. ಚೀನಾ ಮತ್ತು ಭಾರತ ನಡುವೆ "ಹ್ಯಾಂಡ್-ಇನ್-ಹ್ಯಾಂಡ್ (Hand-in-Hand)" ಸಮರಭ್ಯಾಸವು ನವೆಂಬರ್-2016 ರಲ್ಲಿ ಎಲ್ಲಿ ನಡೆಯಲಿದೆ?

ಅ) ಪುಣೆ

ಆ) ಜೈಪುರ

ಇ) ಬೆಳಗಾವಿ

ಈ) ಡಾರ್ಜಲಿಂಗ್

ಪುಣೆ

ಚೀನಾ ಮತ್ತು ಭಾರತ ನಡುವೆ ಪ್ರತಿ ವರ್ಷ ನಡೆಯುವ "ಹ್ಯಾಂಡ್-ಇನ್-ಹ್ಯಾಂಡ್" ಸಮರಭ್ಯಾಸವು ನವೆಂಬರ್ 15-27ರವರೆಗೆ ಮಹಾರಾಷ್ಟ್ರದ ಪುಣೆ ಬಳಿ ಇರುವ ಔಂದ್ ನಲ್ಲಿ ನಡೆಯಲಿದೆ. "ಹ್ಯಾಂಡ್-ಇನ್-ಹ್ಯಾಂಡ್ ಸಮರಭ್ಯಾಸವನ್ನು ಮೊದಲ ಬಾರಿ 2007 ರಲ್ಲಿ ಚೀನಾದ ಕುನ್ಮಿಂಗ್ ನಲ್ಲಿ ಆಯೋಜಿಸಲಾಗಿತ್ತು. ಆನಂತರ 2008 ರಲ್ಲಿ ಬೆಳಗಾವಿಯಲ್ಲಿ ಈ ಸಮರಭ್ಯಾಸ ನಡೆದಿತ್ತು. 2013 ರಿಂದ ಪ್ರತಿ ವರ್ಷ ಈ ಯುದ್ದಭ್ಯಾಸವನ್ನು ಉಭಯ ದೇಶಗಳ ನಡುವೆ ಹಮ್ಮಿಕೊಳ್ಳಲಾಗುತ್ತಿದೆ.

80. ಪ್ರಸ್ತುತ ವಿಶ್ವದ ಅತಿ ಹೆಚ್ಚು ರಬ್ಬರ್ ಉತ್ಪಾದಿಸುವ ದೇಶಗಳ ಪೈಕಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) ಎರಡು

ಆ) ಮೂರು

ಇ) ನಾಲ್ಕು

ಈ) ಐದು

ನಾಲ್ಕು

ಭಾರತ ವಿಶ್ವದ ನಾಲ್ಕನೇ ಅತಿ ಹೆಚ್ಚು ರಬ್ಬರ್ ಉತ್ಪಾದಿಸುವ ರಾಷ್ಟ್ರವಾಗಿದೆ. ಥಾಯ್ಲೆಂಡ್, ಇಂಡೋನೇಷಿಯಾ ಮತ್ತು ಮಲೇಷಿಯಾ ಮೊದಲ ಮೂರು ಸ್ಥಾನದಲ್ಲಿವೆ. ಭಾರತದ ನಂತರ ಅತಿ ಹೆಚ್ಚು ರಬ್ಬರ್ ಉತ್ಪಾದಿಸುವ ರಾಷ್ಟ್ರಗಳೆಂದರೆ ವಿಯೆಟ್ನಾಂ, ಚೀನಾ, ಶ್ರೀಲಂಕಾ, ಫಿಲಿಫೈನ್ಸ್ ಮತ್ತು ಕಾಂಬೋಡಿಯ.

81. ಯಾವ ದೇಶ ಇತ್ತೀಚೆಗೆ ಜನವರಿ ತಿಂಗಳನ್ನು "ತಮಿಳು ಪಾರಂಪರಿಕ ತಿಂಗಳೆಂದು (Tamil Heritage Month)" ಘೋಷಿಸಿದೆ?

ಅ) ಶ್ರೀಲಂಕಾ

ಆ) ಕೆನಡಾ

ಇ) ಸಿಂಗಾಪುರ

www.karunaduexams.com

ಈ) ಮಲೇಷಿಯಾ

ಕೆನಡಾ

ಕೆನಡಾ ರಾಷ್ಟ್ರ ಜನವರಿ ತಿಂಗಳನ್ನು ಪಾರಂಪರಿಕ ತಿಂಗಳನ್ನಾಗಿ ಆಚರಿಸಲು ಆದೇಶ ನೀಡಿದೆ. ವಾರದ ಹಿಂದೆ ಈ ಕುರಿತಂತೆ ಕೆನಡಾದ ಹೌಸ್ ಆಫ್ ಕಾಮನ್ಸ್ ತಮಿಳು ಪಾರಂಪರಿಕ ತಿಂಗಳನ್ನು ಆಚರಿಸಲು ಒಮ್ಮತದ ನಿರ್ಣಯ ಗೊಂಡಿದೆ. ಅದರಂತೆ 2017 ರಿಂದ ಜನವರಿಯನ್ನ ತಮಿಳು ಪಾರಂಪರಿಕ ತಿಂಗಳನ್ನಾಗಿ ಆಚರಿಸಲಾಗುವುದು. ಕೆನಡಾದ 150 ನೇ ವರ್ಷಾಚರಣೆಯ ಜೊತೆ ಜೊತೆಗೆ ತಮಿಳು ಪಾರಂಪರಿಕ ತಿಂಗಳನ್ನು ಆಚರಿಸಲಾಗುತ್ತದೆ. ತಮಿಳುನಾಡಿನ ಮೂಲದ ಕೆನಡಾದ ಸಂಸದ ಗ್ಯಾರಿ ಆನಂದಾಸನಗರೀ ಹೌಸ್ ಆಫ್ ಕಾಮನ್ಸ್ ನಲ್ಲಿ ನಿರ್ಣಯ ಮಂಡಿಸಿದ್ದರು. ಈ ಬಗ್ಗೆ ಸೆಪ್ಟೆಂಬರ್ ನಲ್ಲಿ ಚರ್ಚೆ ನಡೆಸಲಾಗಿತ್ತು. ಕೆನಡಾದ ಅಭಿವೃದ್ಧಿಗೆ ತಮಿಳುನಾಡಿನ ಮೂಲದವರು ನೀಡಿರುವ ಕೊಡುಗೆಯನ್ನು ಸ್ಮರಿಸಲು ಜನವರಿ ತಿಂಗಳನ್ನು ತಮಿಳು ಪಾರಂಪರಿಕ ತಿಂಗಳನ್ನಾಗಿ ಘೋಷಿಸಲಾಗಿದೆ. ಕೆನಡಾದಲ್ಲಿ ಸುಮಾರು 3 ಲಕ್ಷಕ್ಕೂ ಹೆಚ್ಚು ತಮಿಳರು ನೆಲಸಿದ್ದಾರೆ.

82. "2016 ಜಾನ್ ಎಫ್ ರಿಚರ್ಡ್ ಪ್ರಶಸ್ತಿ (John F. Richards Prize)" ಪಡೆದ ಭಾರತದ ಲೇಖಕಿ ಯಾರು?

ಅ) ನಿರ್ಮಲ ಗೋಪಿನಾಥ್

ಆ) ಚೈತ್ರ ಸುಬ್ರಮಣ್ಯಂ

ಇ) ನಯನ್ ಜೋತ್ ಲಹಿರಿ

ಈ) ಕಿರಣ್ ದೇಸಾಯಿ

ನಯನ್ ಜೋತ್ ಲಹಿರಿ

ಅಶೋಕ ವಿಶ್ವವಿದ್ಯಾಲಯದಲ್ಲಿ ಇತಿಹಾಸ ಪ್ರಾಧ್ಯಪಕಿ ಆಗಿರುವ ನಯನ್ ಜೋತ್ ಲಹಿರಿ ಅವರಿಗೆ 2016 ಜಾನ್ ಎಫ್ ರಿಚರ್ಡ್ ಪ್ರಶಸ್ತಿಯನ್ನು ನೀಡಲಾಗಿದೆ. ಲಹಿರಿ ಅವರ ಪುಸ್ತಕ "ಅಶೋಕ ಇನ್ ಎನಿಸಿಯೆಂಟ್ ಇಂಡಿಯಾ (*Ashoka in Ancient India*) ಪುಸ್ತಕಕ್ಕೆ ಈ ಪ್ರಶಸ್ತಿ ಲಭಿಸಿದೆ. ಶಾಸನಗಳ ಮೂಲಕ ತನ್ನ ಸಾಮಾಜ್ರ್ಯದ ಬಗ್ಗೆ ಜನರಿಗೆ ತಿಳಿಸಿಕೊಟ್ಟ ಅಶೋಕ ಮಹಾರಾಜನ ಕುರಿತಾಗಿ ಈ ಪುಸ್ತಕ ಬರೆಯಲಾಗಿದ್ದು, ವಿಮರ್ಶಕರಿಂದ ಪ್ರಶಂಸೆಗೆ ಒಳಗಾಗಿದೆ. ಅಮೆರಿಕನ್ ಹಿಸ್ಟರಿಕಲ್ ಅಸೋಸಿಯೇಷನ್ ಈ ಪ್ರಶಸ್ತಿಯನ್ನು ದಕ್ಷಿಣ ಏಷ್ಯಾ ಇತಿಹಾಸ ಕುರಿತಾದ ಪುಸ್ತಕಗಳಿಗೆ ಪ್ರತಿ ವರ್ಷ ನೀಡುತ್ತಿದೆ. ಪ್ರಶಸ್ತಿಯನ್ನು ಜನವರಿ 2017ರಲ್ಲಿ ನೀಡಲಾಗುವುದು.

83. ಉದ್ದೇಶಿತ "ಗಂಗಾ ಬ್ಯಾರೇಜ್ ಯೋಜನೆ (Ganges Barrage (dam) project)" ಯಾವ ದೇಶಕ್ಕೆ ಸಂಬಂಧಿಸಿದೆ?

ಅ) ಬಾಂಗ್ಲದೇಶ

www.karunaduexams.com

ಆ) ಚೀನಾ

ಇ) ಭಾರತ

ಈ) ನೇಪಾಳ

ಬಾಂಗ್ಲದೇಶ

ಗಂಗಾ ಬ್ಯಾರೇಜ್ ಯೋಜನೆ ಬಾಂಗ್ಲದೇಶದ ಉದ್ದೇಶಿತ ಅಣೆಕಟ್ಟು ಯೋಜನೆಯಾಗಿದೆ. ಭಾರತ ಈ ಯೋಜನೆಯನ್ನು ನಿರ್ಮಿಸಲು ಮುಂದಾಗಿದ್ದು, ಬಾಂಗ್ಲದೇಶ ಸಹ ಸಹಮತ ತೋರಿದೆ. ಈ ಯೋಜನೆ ಮೂಲಕ ಪದ್ಮ ನದಿಯ ನೀರನ್ನು ಬಾಂಗ್ಲದ 26 ಜಿಲ್ಲೆಗಳಿಗೆ 123 ಸ್ಥಳೀಯ ನದಿಗಳ ಮೂಲಕ ಹರಿಸುವ ಗುರಿಯನ್ನು ಬಾಂಗ್ಲ ಹೊಂದಿದೆ.

84. 2016ನೇ ಸಾಲಿನ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಪಡೆದ "ಜುವಾನ್ ಮ್ಯಾನ್ಯುಯೆಲ್ ಸ್ಯಾಂಟೋಸ್" ಯಾವ ದೇಶದ ಅಧ್ಯಕ್ಷರು?

ಅ) ಕೊಲಂಬಿಯಾ

ಆ) ಮಾಲ್ಡೀವ್ಸ್

ಇ) ನೈಜೀರಿಯಾ

ಈ) ಘಾನ

ಕೊಲಂಬಿಯಾ

2016ನೇ ಸಾಲಿನ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಕೊಲಂಬಿಯಾ ಅಧ್ಯಕ್ಷ ಜುವಾನ್ ಮ್ಯಾನ್ಯುಯೆಲ್ ಸ್ಯಾಂಟೋಸ್ ಅವರಿಗೆ ನೀಡಲಾಗಿದೆ. ಅರ್ಧ ಶತಮಾನದ ಯುದ್ಧವನ್ನು ಕೊನೆಗೊಳಿಸಿದ ಕೊಲಂಬಿಯಾ ಶಾಂತಿ ಒಪ್ಪಂದದ ಸಾಧನೆಗಾಗಿ ಸ್ಯಾಂಟೋಸ್ ಅವರಿಗೆ ಈ ಪ್ರಶಸ್ತಿ ಲಭಿಸಿದೆ. ಸುಮಾರು ಎರಡೂವರೆ ಲಕ್ಷ ಜನರನ್ನು ಬಲಿ ತೆಗೆದುಕೊಂಡ ಐದು ದಶಕಗಳ ಸಮರಕ್ಕೆ ಮಂಗಳ ಹಾಡುವ ಕೊಲಂಬಿಯಾ ಶಾಂತಿ ಒಪ್ಪಂದಕ್ಕೆ ಸೆಪ್ಟೆಂಬರ್ 26ರಂದು ಅಧ್ಯಕ್ಷ ಸ್ಯಾಂಟೋಸ್ ಮತ್ತು ಮಾರ್ಕ್ಸ್‌ವಾದಿ ಫಾರ್ಕ್ ಬಂಡಾಯ ನಾಯಕ ಟಿಮೊಚೆಂಕೊ ಸಹಿ ಮಾಡಿದ್ದರು. 1992ರಲ್ಲಿ ಗ್ವಾಟೆಮಾಲಾದ ಮಾನವ ಹಕ್ಕುಗಳ ಹೋರಾಟಗಾರ ರಿಗೊಬೆರ್ಟ ಮೆಂಚು ಅವರು ಪ್ರಶಸ್ತಿ ಗೆದ್ದ ಬಳಿಕ ಲ್ಯಾಟಿನ್ ಅಮೆರಿಕಕ್ಕೆ ಲಭಿಸಿರುವ ಮೊತ್ತ ಮೊದಲ ಪ್ರಶಸ್ತಿ ಇದು.

85. 2016 ಫಾರ್ಮೂಲಾ ಓನ್ ಜಪಾನ್ ಗ್ರಾಂಡ್ ಪ್ರಿಕ್ಸ್ ಗೆದ್ದವರು _____?

ಅ) ನಿಕೊ ರೋಸ್ಬರ್ಗ್

ಆ) ಮ್ಯಾಕ್ಸ್ ವರ್ಸಟಪೆನ್

ಇ) ಲೇವಿಸ್ ಹ್ಯಾಮಿಲ್ಟನ್

ಈ) ಸೆಬಾಸ್ಟಿಯನ್ ವೆಟಲ್

ನಿಕೊ ರೋಸ್ಬರ್ಗ್



www.karunaduexams.com

ಮರ್ಸಿಡೆಸ್ ಚಾಲಕ ನಿಕೊ ರೋಸ್ಬರ್ಗ್ ಅವರು 2016 ಫಾರ್ಮೂಲಾ ಓನ್ ಜಪಾನ್ ಗ್ರಾಂಡ್ ಪ್ರಿಕ್ಸ್ ಗೆದ್ದುಕೊಂಡರು.

86. ಈ ಕೆಳಗಿನವುಗಳಲ್ಲಿ ಯಾವುದು ಖಾರೀಫ್ ಬೆಳೆ (Kharif Crop) ಆಗಿಲ್ಲ?

ಅ) ರಾಗಿ

ಆ) ಭತ್ತ

ಇ) ಜೋಳ

ಈ) ಸಾಸಿವೆ

ಸಾಸಿವೆ

ಭಾರತದಲ್ಲಿ ಕೃಷಿ ವರ್ಷವನ್ನು ಎರಡು ವಿಧಗಳನ್ನಾಗಿ ವರ್ಗೀಕರಿಸಲಾಗಿದೆ. ಅವುಗಳೆಂದರೆ ಖಾರೀಫ್ ಮತ್ತು ರಾಬಿ. ಖಾರೀಫ್ ಬೆಳೆಗಳ ಅವಧಿ ಏಪ್ರಿಲ್-ಅಕ್ಟೋಬರ್. ರಾಗಿ, ಜೋಳ, ಭತ್ತ, ದ್ವಿದಳ ಧಾನ್ಯಗಳು ಪ್ರಮುಖ ಖಾರೀಫ್ ಬೆಳೆಗಳಾಗಿವೆ.

87. 2016 ಜಪಾನ್ ಓಪನ್ ಪುರುಷರ ಸಿಂಗಲ್ಸ್ ಫೈನಲ್ ನಲ್ಲಿ ಪ್ರಶಸ್ತಿ ಗೆದ್ದವರು ಯಾರು?

ಅ) ಡೇವಿಡ್ ಗೊಫಿ

ಆ) ನಿಕ್ ಕಿರ್ಗಿಯೊಸ್

ಇ) ನೊವಾಕ್ ಜೊಕೊವಿಕ್

ಈ) ಆಯಂಡಿ ಮರೆ

ನಿಕ್ ಕಿರ್ಗಿಯೊಸ್

ಆಸ್ಟ್ರೇಲಿಯದ ಪವರ್-ಹಿಟ್ಟರ್ ನಿಕ್ ಕಿರ್ಗಿಯೊಸ್ ಬೆಲ್ಜಿಯಂನ ಡೇವಿಡ್ ಗೊಫಿನ್ರನ್ನು ನೇರ ಸೆಟ್ಗಳಿಂದ ಮಣಿಸಿ ಜಪಾನ್ ಓಪನ್ ಪ್ರಶಸ್ತಿಯನ್ನು ಗೆದ್ದುಕೊಂಡರು. ಪುರುಷರ ಸಿಂಗಲ್ಸ್ ಫೈನಲ್ನಲ್ಲಿ ಕಿರ್ಗಿಯೊಸ್ ಅವರು ಗೊಫಿನ್ರನ್ನು 4-6, 6-3, 7-5 ಸೆಟ್ಗಳ ಅಂತರದಿಂದ ಸೋಲಿಸಿ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

88. 24ನೇ ಏಕಲವ್ಯ ವರ್ಷದ ಪ್ರಶಸ್ತಿ-2016 ಪಡೆದುಕೊಂಡ ಕ್ರೀಡಾಪಟು ಯಾರು?

ಅ) ಸ್ರಬಣಿ ನಂದ

ಆ) ಸಾಕ್ಷಿ ಮಲಿಕ್

ಇ) ಪಿ ವಿ ಸಿಂಧು

ಈ) ದೀಪ್ ಗ್ರೆಸ್ ಎಕ್ಕ

www.karunaduexams.com

ಸ್ರಬಣಿ ನಂದ

ಅಂತಾರಾಷ್ಟ್ರೀಯ ಅಥ್ಲೆಟಿಕ್ ಸ್ರಬಣಿ ನಂದ 24ನೇ ಏಕಲವ್ಯ ವರ್ಷದ ಪ್ರಶಸ್ತಿ-2016 ಭಾಜನರಾಗಿದ್ದಾರೆ. ವಿವಿಧ ಕ್ಷೇತ್ರಗಳಿಂದ ಆಯ್ಕೆಮಾಡಲಾಗಿದ್ದ ತೀರ್ಪುಗಾರರನ್ನು ಒಳಗೊಂಡಿದ್ದ ಏಕಲವ್ಯ ಪ್ರಶಸ್ತಿ ಸಮಿತಿಯು ಸಬ್ರಣಿ ನಂದ ಅವರನ್ನು ಪ್ರಶಸ್ತಿಗೆ ಆಯ್ಕೆಮಾಡಿದೆ. ಪ್ರಶಸ್ತಿಯು ರೂ 5 ಲಕ್ಷ ನಗದು ಮತ್ತು ಫಲಕವನ್ನು ಒಳಗೊಂಡಿದೆ.

89. ______ ರಂದು "ವಿಶ್ವ ಅಂಚೆ ದಿನ (World Post Day)" ಆಚರಿಸಲಾಗುತ್ತದೆ?

ಅ) ಅಕ್ಟೋಬರ್ 8

ಆ) ಅಕ್ಟೋಬರ್ 9

ಇ) ಅಕ್ಟೋಬರ್ 10

ಈ) ಅಕ್ಟೋಬರ್ 11

ಅಕ್ಟೋಬರ್ 9

ವಿಶ್ವ ಅಂಚೆ ದಿನವನ್ನು ಅಕ್ಟೋಬರ್ 9ರಂದು ವಿಶ್ವದಾದ್ಯಂತ ಆಚರಿಸಲಾಗುತ್ತದೆ. 1874 ರಲ್ಲಿ ಈ ದಿನದಂದು ಯೂನಿವರ್ಸಲ್ ಪೋಸ್ಟಲ್ ಯೂನಿಯನ್ ಅನ್ನು ಸ್ಥಾಪಿಸಿದರ ಅಂಗವಾಗಿ ವಿಶ್ವ ಅಂಚೆ ದಿನವನ್ನು ಆಚರಿಸಲಾಗುತ್ತದೆ. 1969 ರಿಂದ ಜಗತ್ತಿನ ಎಲ್ಲಡೆ ವಿಶ್ವ ಅಂಚೆ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ. Innovation, Integration and Inclusion ಇದು ಈ ವರ್ಷದ ಅಂಚೆ ದಿನದ ತಿರುಳಾಗಿದೆ.

90. ಶಿಕ್ಷಣ ಸಂಬಂಧಿಸಿದ ಮಾಹಿತಿಗಳನ್ನು ನೀಡುವ "ಜ್ಞಾನ ದರ್ಶನ" ಪ್ರಸಾರಕ್ಕಾಗಿ ದೂರದರ್ಶನವು ಈ ಕೆಳಗಿನ ಯಾವ ಸಂಸ್ಥೆಯೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ?

ಅ) ಇಸ್ರೋ

ಆ) ಐಐಟಿ ದೆಹಲಿ

ಇ) ಇಗ್ನೋ

ಈ) ಐಐಟಿ ಬಾಂಬೆ

ಇಗ್ನೋ

ಶಿಕ್ಷಣ ಸಂಬಂಧಿತ ಮಾಹಿತಿಗಳನ್ನು ನೀಡುವ ಜ್ಞಾನ ದರ್ಶನ (ಗ್ಯಾನ್ ದರ್ಶನ್) ವಾಹಿನಿಗಳ ಪ್ರಸಾರಕ್ಕಾಗಿ ದೂರದರ್ಶನ ಮತ್ತು ಇಂದಿರಾ ಗಾಂಧಿ ಮುಕ್ತ ವಿಶ್ವವಿದ್ಯಾಲಯ(ಇಗ್ನೋ) ಒಪ್ಪಂದಕ್ಕೆ ಸಹಿ ಹಾಕಿವೆ. ಕಾರ್ಯಕ್ರಮ ಪ್ರಸಾರಕ್ಕಾಗಿ ಇಗ್ನೋ ಹೊಸದಾಗಿ ಪರವಾನಗಿ ಪಡೆಯುವುದು ಅಗತ್ಯ. ಆದರೆ, ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ನಿಯಮಗಳ ಪ್ರಕಾರ ಪರವಾನಗಿ ನೀಡಲು ಸಾಧ್ಯವಿಲ್ಲ. ಹಾಗಾಗಿ, ಇಗ್ನೋ ದೂರದರ್ಶನದ ಮೂಲಕ ಗ್ಯಾನ್ ದರ್ಶನ್ನ ನಾಲ್ಕು ವಾಹಿನಿಗಳ ಪರವಾನಗಿ ಮತ್ತು ಪ್ರಸಾರದ ಅನುಮತಿ ಪಡೆಯಲಿದೆ.

www.karunaduexams.com

91. ವೆನೆಜುವೆಲಾದ ಮಾಜಿ ಅಧ್ಯಕ್ಷ ದಿ. ಹ್ಯೂಗೊ ಚಾವೆಜ್ಜ್ ಸ್ಮರಣಾರ್ಥ ಸ್ಥಾಪಿಸಲಾದ ಪ್ರಪ್ರಥಮ ಶಾಂತಿ ಪ್ರಶಸ್ತಿಗೆ ಯಾರನ್ನು ಆಯ್ಕೆಮಾಡಲಾಗಿದೆ?

ಅ) ನರೇಂದ್ರ ಮೋದಿ

ಆ) ಬರಾಕ್ ಒಬಾಮ

ಇ) ವ್ಲಾದಿಮಿರ್ ಪುಟಿನ್

ಈ) ಶೇಖ್ ಹಸೀನಾ

ವ್ಲಾದಿಮಿರ್ ಪುಟಿನ್

ವೆನೆಜುವೆಲಾ ಮಾಜಿ ಅಧ್ಯಕ್ಷ ದಿವಂಗತ ಹ್ಯೂಗೊ ಚಾವೆಜ್ಜ್ ಸ್ಮರಣಾರ್ಥ ಶಾಂತಿ ಪ್ರಶಸ್ತಿಯನ್ನು ಸ್ಥಾಪಿಸಿರುವುದಾಗಿ ವೆನೆಜುವೆಲಾ ಅಧ್ಯಕ್ಷ ನಿಕೊಲಸ್ ಮಡುರೊ ಘೋಷಿಸಿದ್ದಾರೆ. ಅಲ್ಲದೇ ಪ್ರಪ್ರಥಮ ಶಾಂತಿ ಪ್ರಶಸ್ತಿಗೆ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುತಿನ್ ಅವರನ್ನು ಆಯ್ಕೆಮಾಡಲಾಗಿದೆ. ಪುತಿನ್ ಶಾಂತಿಗಾಗಿ ಹೋರಾಟ ನಡೆಸುತ್ತಿರುವ ಧೀಮಂತ ನಾಯಕರಾಗಿರುವ ಕಾರಣ ಪ್ರಶಸ್ತಿಗೆ ಆಯ್ಕೆ ಮಾಡಿರುವುದಾಗಿ ಮಡುರೊ ತಿಳಿಸಿದ್ದಾರೆ.

92. ರಾಷ್ಟ್ರೀಯ ಭದ್ರತಾ ಸಲಹಾ ಮಂಡಳಿಯ (NSAB) ಮುಖ್ಯಸ್ಥರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಸಿ ಎಸ್ ರಾಘವನ್

ಆ) ಆರ್ ಚಂದ್ರಮೌಳಿ

ಇ) ಎ ಬಿ ಮಾಥುರ್

ಈ) ಅಮರ್ ನಾಯಕ್

ಸಿ ಎಸ್ ರಾಘವನ್

ರಾಷ್ಟ್ರೀಯ ಭದ್ರತಾ ಸಲಹಾ ಮಂಡಳಿಯ (ಎನ್ಎಸ್ಎಬಿ) ಮುಖ್ಯಸ್ಥರಾಗಿ ಪಿ.ಎಸ್. ರಾಘವನ್ ಅವರನ್ನು ನೇಮಿಸಲಾಗಿದೆ. ರಾಘವನ್ ಹಿಂದೆ ರಷ್ಯಾದಲ್ಲಿ ಭಾರತದ ರಾಯಭಾರಿಯಾಗಿದ್ದರು. ಆಂತರಿಕ ಮತ್ತು ಬಾಹ್ಯ ಭದ್ರತೆ, ವಿದೇಶಾಂಗ ವ್ಯವಹಾರ, ರಕ್ಷಣೆ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಆರ್ಥಿಕ ವ್ಯವಹಾರಗಳ ಬಗ್ಗೆ ಈ ಮಂಡಳಿಯು ಸಲಹೆ ನೀಡುತ್ತದೆ. ಇದು ಉನ್ನತ ಮಟ್ಟದ ಸಮಿತಿಯಾಗಿದ್ದು ತಿಂಗಳಿಗೆ ಒಮ್ಮೆ ಸಭೆ ನಡೆಸುತ್ತದೆ. ಗುಪ್ತಚರ ಸಂಸ್ಥೆ 'ರಾ'ದ ಮಾಜಿ ಅಧಿಕಾರಿ ಎ.ಬಿ. ಮಾಥೂರ್, ಲೆ.ಜ.(ನಿವೃತ್ತ) ಎಸ್.ಎಲ್. ನರಸಿಂಹನ್ ಮತ್ತು ಗುಜರಾತ್ ನ್ಯಾಷನಲ್ ಲಾ ಯುನಿವರ್ಸಿಟಿಯ ಪ್ರೊ. ವಿಮಲ್ ಎನ್. ಪಟೇಲ್ ಅವರನ್ನು ಮಂಡಳಿಯ ಸದಸ್ಯರನ್ನಾಗಿ ನೇಮಿಸಲಾಗಿದೆ.

93. ಈ ಕೆಳಗಿನ ಯಾವ ವಿಮಾನ ನಿಲ್ದಾಣ ಆಫ್ರಿಕಾದ ಮೊದಲ ಸೌರ ವಿದ್ಯುತ್ ಶಕ್ತಿ ಚಾಲಿತ ನಿಲ್ದಾಣವಾಗಿದೆ?

ಅ) ಕೇಪ್ ಟೌನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ಆ) ಕೈರೊ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ



www.karunaduexams.com

ಇ) ಜಾರ್ಜ್ ವಿಮಾನ ನಿಲ್ದಾಣ

ಈ) ಟಂಬೊ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ಜಾರ್ಜ್ ವಿಮಾನ ನಿಲ್ದಾಣ

ದಕ್ಷಿಣ ಆಫ್ರಿಕಾದ ಪುಟ್ಟ ನಗರ ಜಾರ್ಜ್ ನಗರದಲ್ಲಿರುವ ಜಾರ್ಜಾ ವಿಮಾನ ನಿಲ್ದಾಣ ಆಫ್ರಿಕಾದ ಮೊದಲ ಹಸಿರು ವಿಮಾನ ನಿಲ್ದಾಣ ಎಂಬ ಕೀರ್ತಿಗೆ ಪಾತ್ರವಾಗಿದೆ. ಜಾರ್ಜ್ ವಿಮಾನ ನಿಲ್ದಾಣ ಸಂಪೂರ್ಣವಾಗಿ ಸೌರ ವಿದ್ಯುತ್ ನಿಂದ ಕಾರ್ಯನಿರ್ವಹಿಸುತ್ತಿದೆ. ಈ ವಿಮಾನ ನಿಲ್ದಾಣದಲ್ಲಿ 2,000 ಸೌರ ಫಲಕಗಳನ್ನು ಅಳವಡಿಸಲಾಗಿದ್ದು, ಪ್ರತಿ ನಿತ್ಯ 750 ಕಿ.ವ್ಯಾ ವಿದ್ಯುತ್ ಉತ್ಪಾದಿಸುತ್ತಿದ್ದು, ವಿಮಾನ ನಿಲ್ದಾಣಕ್ಕೆ ಅಗತ್ಯವಿರುವದಕ್ಕಿಂತಲೂ ಹೆಚ್ಚು ವಿದ್ಯುತ್ ಅನ್ನು ಉತ್ಪಾದಿಸುತ್ತಿದೆ. 2015 ರಲ್ಲಿ ಕೇರಳದ ಕೊಚ್ಚಿ ವಿಮಾನ ನಿಲ್ದಾಣ ವಿಶ್ವದ ಮೊದಲ ಸೌರ ವಿದ್ಯುತ್ ಚಾಲಿತ ವಿಮಾನ ನಿಲ್ದಾಣ ಎನಿಸಿತ್ತು.

94. ಹರಿಕಾ ದ್ರೋಣವಳ್ಳಿ ರವರು ಯಾವ ಕ್ರೀಡೆಗೆ ಸಂಬಂಧಿಸಿದ್ದಾರೆ?

ಅ) ಚೆಸ್

ಆ) ಬ್ಯಾಡ್ಮಿಂಟನ್

ಇ) ಟೆನ್ನಿಸ್

ಈ) ಅಥ್ಲೆಟಿಕ್ಸ್

ಚೆಸ್

ಹರಿಕಾ ದ್ರೋಣವಳ್ಳಿ ಭಾರತದ ಶ್ರೇಷ್ಠ ಚೆಸ್ ಆಟಗಾರ್ತಿ. ಹರಿಕಾ ದ್ರೋಣವಳ್ಳಿ ಅವರು ನೂತನ ವಿಶ್ವ ಚೆಸ್ ಕ್ರಮಾಂಕ ಪಟ್ಟಿಯಲ್ಲಿ 5ನೇ ಸ್ಥಾನಕ್ಕೇರಿದ್ದಾರೆ.ಇಸ್ಲೆ ಆಫ್ ಮ್ಯಾನ್ ಚೆಸ್ ಟೂರ್ನಿಯಲ್ಲಿ ಅಮೋಘ ಆಟ ಆಡಿದ್ದ ಹರಿಕಾ ಲೈವ್ ರೇಟಿಂಗ್ ಅನ್ನು 2528ರಿಂದ 2543.4ಕ್ಕೆ ಹೆಚ್ಚಿಸಿ ಕೊಂಡು 10ರಿಂದ ಐದನೇ ಸ್ಥಾನಕ್ಕೆ ಬಡ್ತಿ ಹೊಂದಿದ್ದಾರೆ.

95. ತೆಲಂಗಣ ರಾಜ್ಯ ಸರ್ಕಾರ ಇತ್ತೀಚೆಗೆ ಹೊಸದಾಗಿ 21 ಜಿಲ್ಲೆಗಳನ್ನು ರಚಿಸಿದೆ. ಹೊಸ ಜಿಲ್ಲೆಗಳ ರಚನೆಯಿಂದಾಗಿ ತೆಲಂಗಣದ ಜಿಲ್ಲೆಗಳ ಸಂಖ್ಯೆ ಎಷ್ಟು?

ಅ) 21

ಆ) 25

ಇ) 31

ಈ) 33

www.karunaduexams.com

31

ತೆಲಂಗಣ ರಾಜ್ಯದಲ್ಲಿ ಹೊಸದಾಗಿ 21 ಜಿಲ್ಲೆಗಳನ್ನು ರಚಿಸಲಾಗಿದ್ದು, ಆ ಮೂಲಕ ರಾಜ್ಯದ ಜಿಲ್ಲೆಗಳ ಸಂಖ್ಯೆ 31ಕ್ಕೆ ಏರಿಕೆಯಾಗಿದೆ. 2014ರ ಚುನಾವಣೆ ವೇಳೆ 14 ಹೊಸ ಜಿಲ್ಲೆಗಳನ್ನು ರಚಿಸುವುದಾಗಿ ತೆಲಂಗಣ ರಾಷ್ಟ್ರೀಯ ಸಮಿತಿ ಭರವಸೆ ನೀಡಿತ್ತು, ಆದರೆ ಸರ್ಕಾರದ ಮೇಲೆ ರಾಜ್ಯದ ವಿವಿದೆಡೆಯಿಂದ ಒತ್ತಡ ಹೆಚ್ಚಾದ ಕಾರಣ 21 ಜಿಲ್ಲೆಗಳನ್ನು ಹೊಸದಾಗಿ ರಚಿಸಲಾಗಿದೆ. 2014ರಲ್ಲಿ ಭಾರತ 29ನೇ ರಾಜ್ಯವಾಗಿ ತೆಲಂಗಣ ಉದಯವಾದ ವೇಳೆ 10 ಜಿಲ್ಲೆಗಳನ್ನು ಹೊಂದಿತ್ತು.

96. ಬ್ರಿಟಿಷ್ ಸಂಸತ್ತಿಗೆ ಸದಸ್ಯರಾಗಿ ಆಯ್ಕೆಯಾದ ಮೊಟ್ಟ ಮೊದಲ ಭಾರತೀಯ ಯಾರು?

ಅ) ಬಾಲಗಂಗಾಧರ ತಿಲಕ್

ಆ) ದಾದಾಬಾಯಿ ನರೋಜಿ

ಇ) ರಾಜಾರಾಂ ಮೋಹನ್ ರಾಯ್

ಈ) ಗೋಪಾಲ ಕೃಷ್ಣ ಗೋಖಲೆ

ರಾಜಾರಾಂ ಮೋಹನ್ ರಾಯ್

97. ಇತ್ತೀಚಿನ ವರದಿಯೊಂದರ ಪ್ರಕಾರ ವೈಜ್ಞಾನಿಕ ಸಂಶೋಧನೆಯ ಬೆಳವಣಿಗೆಯಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) ಎರಡು

ಆ) ಐದು

ಇ) ಏಳು

ಈ) ಒಂಬತ್ತು

ಎರಡು

ಉನ್ನತ ಗುಣಮಟ್ಟದ ವೈಜ್ಞಾನಿಕ ಸಂಶೋಧನೆಯ ಬೆಳವಣಿಗೆಯಲ್ಲಿ ಜಗತ್ತಿನಲ್ಲಿ ಭಾರತ ಎರಡನೇ ಸ್ಥಾನದಲ್ಲಿದೆ. ರೈಸಿಂಗ್ ಸ್ಟಾರ್ಸ್ ಎಂಬ ವರದಿಯಲ್ಲಿ ಈ ವಿಷಯ ಪ್ರಕಟಗೊಂಡಿದೆ. ವೈಜ್ಞಾನಿಕ ಸಂಶೋಧನೆಯಲ್ಲಿ ಚೀನಾ ಪ್ರಥಮ ಸ್ಥಾನದಲ್ಲಿದೆ.

98. ಈ ಕೆಳಗಿನ ಯಾವ ದೇಶದಲ್ಲಿ ನಾಲ್ಕನೇ ಏಷ್ಯನ್ ಚಾಂಪಿಯನ್ಸ್ ಹಾಕಿ ಟ್ರೋಫಿ (Asian Champions Trophy (ACT)) ನಡೆಯಲಿದೆ?

ಅ) ಭಾರತ

ಆ) ಪಾಕಿಸ್ತಾನ

ಇ) ಮಲೇಷಿಯಾ

ಈ) ಶ್ರೀಲಂಕಾ

ಮಲೇಷಿಯಾ

ನಾಲ್ಕನೇ ಏಷ್ಯನ್ ಚಾಂಪಿಯನ್ಸ್ ಹಾಕಿ ಟ್ರೋಫಿ ಮಲೇಷಿಯಾದ ಕೌಂಟನದಲ್ಲಿ ಅಕ್ಟೋಬರ್ 20 ರಿಂದ 30 ರವರೆಗೆ ನಡೆಯಲಿದೆ. ಭಾರತದ ಗೋಲು ಕೀಪರ್ ಪಿ ಆರ್ ಶ್ರೇಜೆಶ್ 18 ಸದಸ್ಯರನ್ನು ಒಳಗೊಂಡ ಭಾರತ ಹಾಕಿ ಪುರಷರ ತಂಡವನ್ನು ಮುನ್ನೆಡಸಲಿದ್ದಾರೆ.

99. ಚಿಲ್ಕಾ ಸರೋವರ ಪ್ರದೇಶವು ಈ ಎರಡು ನದಿಮುಖಜ ಭೂಮಿಗಳ ನಡುವೆ ಇದೆ ____?

ಅ) ಗಂಗಾ ಮತ್ತು ಮಹಾನದಿ

ಆ) ಗೋದಾವರಿ ಮತ್ತು ಕೃಷ್ಣ

ಇ) ಮಹಾನದಿ ಮತ್ತು ಗೋದಾವರಿ

ಈ) ಕೃಷ್ಣ ಮತ್ತು ಗೋದಾವರಿ

ಮಹಾನದಿ ಮತ್ತು ಗೋದಾವರಿ

ಚಿಲ್ಕಾ ಸರೋವರ ಪ್ರದೇಶವು ಮಹಾನದಿ ಮತ್ತು ಗೋದಾವರಿ ನದಿಮುಖಜ ಭೂಮಿಗಳ ನಡುವೆ ಇದೆ.

100. 2016ನೇ ಸಾಲಿನ ಭೌತಶಾಸ್ತ್ರ ನೊಬೆಲ್ ಪಡೆದ ಮೂವರು ವಿಜ್ಞಾನಿಗಳನ್ನು ಗುರುತಿಸಿ?

ಅ) ಡೇವಿಡ್ ಜೆ ಥೌಲೆಸ್, ಎಫ್ ಡಂಕನ್ ಎಂ ಹಲ್ಡೇನ್, ಜೆ ಮೈಕಲ್ ಕೋಸ್ಟೆರ್ಲಿಟ್ಸ್

ಆ) ಡೇವಿಡ್ ಜೆ ಥೌಲೆಸ್, ಎಫ್ ಡಂಕನ್ ಎಂ ಹಲ್ಡೇನ್, ಸಿ ಅರ್ಥರ್ ಜಾನ್ ಸನ್

ಇ) ಡೇವಿಡ್ ಜೆ ಥೌಲೆಸ್, ಜಾರ್ಜ್ ಜೇಮ್ಸನ್, ಜೆ ಮೈಕಲ್ ಕೋಸ್ಟೆರ್ಲಿಟ್ಸ್

ಈ) ಡೇವಿಡ್ ಜೆ ಥೌಲೆಸ್, ಸ್ಟೀಫನ್ ಶೂಮೇಕರ್, ಜೆ ಮೈಕಲ್ ಕೋಸ್ಟೆರ್ಲಿಟ್ಸ್

ಡೇವಿಡ್ ಜೆ ಥೌಲೆಸ್, ಎಫ್ ಡಂಕನ್ ಎಂ ಹಲ್ಡೇನ್, ಜೆ ಮೈಕಲ್ ಕೋಸ್ಟೆರ್ಲಿಟ್ಸ್

ಅತ್ಯಾಧುನಿಕ ಗಣಿತೀಯ ವಿಧಾನಗಳನ್ನು ಬಳಸಿ ಭಿನ್ನ ಹಂತಗಳಲ್ಲಿ ಭೌತವಸ್ತುಗಳ ಅಧ್ಯಯನದ ಸಾಧ್ಯತೆಯನ್ನು ಹೊರ ತಂದಿರುವ ಅಮೆರಿಕಾದ ಮೂವರು ವಿಜ್ಞಾನಿಗಳಾದ ಡೇವಿಡ್ ಜೆ ಥೌಲೆಸ್, ಎಫ್ ಡಂಕನ್ ಎಂ ಹಲ್ಡೇನ್, ಜೆ ಮೈಕಲ್ ಕೋಸ್ಟೆರ್ಲಿಟ್ಸ್  2016ನೇ ಸಾಲಿನ ಭೌತಶಾಸ್ತ್ರ ನೊಬೆಲ್ ಘೋಷಿಸಲಾಗಿದೆ. ಭಿನ್ನ ಹಂತಗಳಲ್ಲಿ ಆಕೃತಿಯ ಜ್ಯಾಮಿತೀಯ ಲಕ್ಷಣಗಳನ್ನು ಅಧ್ಯಯನ ಮಾಡುವುದಕ್ಕೆ ಸಂಬಂಧಿಸಿದಂತೆ (ಟೊಪಾಲಜಿಕಲ್ ಫೇಸ್) ಭೌತವಸ್ತು ಹಾಗೂ ಪರಿವರ್ತನೆ ಗಳ ಸೈದ್ಧಾಂತಿಕ ಸಂಶೋಧನೆಗಾಗಿ ಭೌತಶಾಸ್ತ್ರ ನೊಬೆಲ್ ಘೋಷಿಸಲಾಗಿದೆ.

101. ಇತ್ತೀಚೆಗೆ ಗಿನ್ನಿಸ್ ದಾಖಲೆ ಸೇರ್ಪಡೆಗೊಂಡ "ಬತುಕಮ್ಮ(Bathukamma)" ಹಬ್ಬವನ್ನು ಯಾವ ರಾಜ್ಯದಲ್ಲಿ ಆಚರಿಸಲಾಗುತ್ತದೆ?

ಅ) ಕೇರಳ



www.karunaduexams.com

ಆ) ಆಂಧ್ರ ಪ್ರದೇಶ

ಇ) ಕರ್ನಾಟಕ

ಈ) ತೆಲಂಗಣ

ತೆಲಂಗಣ

ಬತುಕಮ್ಮ ಹಬ್ಬ ತೆಲಂಗಣದ ಪ್ರಮುಖ ಹಬ್ಬವಾಗಿದೆ. ಸಾವಿರಾರು ವರ್ಷಗಳ ಇತಿಹಾಸವನ್ನು ಈ ಹಬ್ಬ ಹೊಂದಿದೆ. ಇತ್ತೀಚೆಗೆ ಹೈದಾರಾಬಾದಿನ ಲಾಲ್ ಬಹಾದ್ದೂರ್ ಶಾಸ್ತ್ರಿ ಕ್ರೀಡಾಂಗಣದಲ್ಲಿ 9,292 ಮಹಿಳೆಯರು ಈ ಹಬ್ಬದಲ್ಲಿ ಭಾಗವಹಿಸಿ ಹೊಸ ದಾಖಲೆ ಬರೆದಿದ್ದಾರೆ. ಕಳೆದ ವರ್ಷ ಅಂದರೆ 2015ರಲ್ಲಿ ಕೇರಳದಲ್ಲಿ ಏರ್ಪಡಿಸಲಾಗಿದ್ದ ಓಣಂ ನೃತ್ಯ ಕಾರ್ಯಕ್ರಮದಲ್ಲಿ ಐದು ಸಾವಿರಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು. ಈಗ ಬತುಕಮ್ಮ ಹಬ್ಬ ಈ ದಾಖಲೆಯನ್ನು ಮುರಿದು ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡಿಗೆ ಸೇರ್ಪಡೆಯಾಗಿದೆ.

102. 2016ನೇ ಸಾಲಿನ ನೊಬೆಲ್ ಅರ್ಥಶಾಸ್ತ್ರ ಪ್ರಶಸ್ತಿಯನ್ನು ಈ ಕೆಳಗಿನ ಯಾರು ಪಡೆದುಕೊಂಡಿದ್ದಾರೆ?

ಅ) ಆಲಿವರ್ ಹಾರ್ಟ್ ಮತ್ತು ಬೆಂಗ್ಟ್ ಹೋಲ್ಮಸ್ಟ್ರಾಮ್

ಆ) ಡೇವಿಡ್ ಕ್ರೆಬ್ ಮತ್ತು ಲೀನಿಯೆಸ್ ಮ್ಯಾಥ್ಯೂ

ಇ) ಜಾರ್ಜ್ ಎಫ್ ಪೊರ್ಡ್ ಮತ್ತು ಯೂನಸ್ ಖಾನ್

ಈ) ಆಲಿವರ್ ಹಾರ್ಟ್ ಮತ್ತು ಡೇವಿಡ್ ಕ್ರೆಬ್

ಆಲಿವರ್ ಹಾರ್ಟ್ ಮತ್ತು ಬೆಂಗ್ಟ್ ಹೋಲ್ಮಸ್ಟ್ರಾಮ್

ಬ್ರಿಟನ್ - ಅಮೆರಿಕದ ಅರ್ಥಶಾಸ್ತ್ರಜ್ಞ ಆಲಿವರ್ ಹಾರ್ಟ್ ಮತ್ತು ಫಿನ್ಲೆಂಡ್‌ನ ಬೆಂಗ್ಟ್ ಹೋಲ್ಮಸ್ಟ್ರಾಮ್ ಅವರು ಅಭಿವೃದ್ಧಿಪಡಿಸಿರುವ 'ಗುತ್ತಿಗೆ ಸಿದ್ಧಾಂತ'ಕ್ಕೆ ನೊಬೆಲ್ ಅರ್ಥಶಾಸ್ತ್ರ ಪ್ರಶಸ್ತಿಯನ್ನು ಜಂಟಿಯಾಗಿ ಘೋಷಿಸಲಾಗಿದೆ. ಉನ್ನತ ಹುದ್ದೆಗಳಲ್ಲಿ ಇರುವವರ ಕಾರ್ಯದಕ್ಷತೆ ಆಧರಿಸಿದ ವೇತನ, ವಿಮೆ ಹಣ ಪಾವತಿ, ಕಡಿತ ಮತ್ತು ಸರ್ಕಾರಿ ವಲಯದ ಉತ್ಪಾದನಾ ಚಟುವಟಿಕೆಗಳ ಖಾಸಗೀಕರಣ ಸೇರಿದಂತೆ ವೈವಿಧ್ಯಮಯ ವಿಷಯಗಳನ್ನು ವಿಶ್ಲೇಷಿಸುವ ಸಮಗ್ರ ವಿಧಾನವನ್ನು ಈ ಇಬ್ಬರೂ ಅರ್ಥಶಾಸ್ತ್ರಜ್ಞರು ಈ ಗುತ್ತಿಗೆ ಸಿದ್ಧಾಂತದಲ್ಲಿ ಅಭಿವೃದ್ಧಿಪಡಿಸಿದ್ದಾರೆ ಎಂದು ಪ್ರಶಸ್ತಿ ಆಯ್ಕೆ ಸಮಿತಿಯು ತಿಳಿಸಿದೆ. ಅರ್ಥಶಾಸ್ತ್ರಕ್ಕೆ ನೀಡಲಾಗುವ ನೊಬೆಲ್ ಪ್ರಶಸ್ತಿಯನ್ನು ಸ್ವೀಡನ್ನಿನ ಕೇಂದ್ರೀಯ ಬ್ಯಾಂಕ್ 1968ರಲ್ಲಿ ಸ್ಥಾಪಿಸಿದೆ.

103. ಅಂತಾರಾಷ್ಟ್ರೀಯ ಹೆಣ್ಣು ಮಗು ದಿನ (International Day of Girl Child)ವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಅಕ್ಟೋಬರ್ 10

www.karunaduexams.com

ಆ) ಅಕ್ಟೋಬರ್ 11

ಇ) ಅಕ್ಟೋಬರ್ 12

ಈ) ಜನವರಿ 25

ಅಕ್ಟೋಬರ್ 11

ಅಂತಾರಾಷ್ಟ್ರೀಯ ಹೆಣ್ಣು ಮಗು ದಿನ ಅಕ್ಟೋಬರ್ 11 ರಂದು ಆಚರಿಸಲಾಗುತ್ತದೆ. ವಿಶ್ವಸಂಸ್ಥೆಯ ಘೋಷಣೆಯಂತೆ 2012 ರಂದು ಮೊದಲ ಬಾರಿಗೆ ಅಂತಾರಾಷ್ಟ್ರೀಯ ಹೆಣ್ಣು ಮಗು ದಿನವನ್ನು ಆಚರಿಸಲಾಗಿತ್ತು. ಹೆಣ್ಣು ಮಕ್ಕಳ ವಿರುದ್ಧ ಧೋರಣೆ, ತಾರತಮ್ಯವನ್ನು ಹೋಗಲಾಡಿಸಲು ಹಾಗೂ ಸಮಾನ ಹಕ್ಕನ್ನು ನೀಡಲು ವಿಶ್ವ ಮಟ್ಟದಲ್ಲಿ ಒತ್ತಾಯಿಸಲು ಈ ದಿನವನ್ನು ಆಚರಿಲಾಗುತ್ತದೆ. Girls' Progress = Goals' Progress: What Counts for Girls ಈ ವರ್ಷದ ಆಚರಣೆಯ ಥೀಮ್.

104. 2016ನೇ ಸಾಲಿನ ಐಎಸ್‌ಎಸ್‌ಎಫ್ 'ಚಾಂಪಿಯನ್ಸ್ ಆಫ್ ಚಾಂಪಿಯನ್ಸ್' ಪ್ರಶಸ್ತಿಯನ್ನು ಗೆದ್ದುಕೊಂಡ ಶೂಟರ್ ಯಾರು?

ಅ) ಗಗನ್ ನಾರಂಗ್

ಆ) ಜಿತು ರಾಯ್

ಇ) ಡಾಮಿರ್ ಮಿಕೆಕ್

ಈ) ಅಶೋಕ್ ಕಶ್ಯಪ್

ಜಿತು ರಾಯ್

ಭಾರತದ ಖ್ಯಾತ ಶೂಟರ್ ಜಿತು ರಾಯ್ ಅವರು ಚಾಂಪಿಯನ್ಸ್ ಟ್ರೋಫಿ 10 ಮೀ. ಏರ್ ಪಿಸ್ತೂಲ್ ಫೈನಲ್ನಲ್ಲಿ ಪ್ರಶಸ್ತಿ ಗೆಲ್ಲುವ ಮೂಲಕ 2016ನೆ ಸಾಲಿನ ಐಎಸ್‌ಎಸ್‌ಎಫ್ನ 'ಚಾಂಪಿಯನ್ಸ್ ಆಫ್ ಚಾಂಪಿಯನ್ಸ್' ಪ್ರಶಸ್ತಿಯನ್ನು ಬಾಚಿಕೊಂಡಿದ್ದಾರೆ. ಇಟಲಿಯ ಬೊಲೊಗ್ನಾದಲ್ಲಿ ನಡೆದ 10 ಮೀಟರ್ ಏರ್ ಪಿಸ್ತೂಲ್ ಫೈನಲ್ನಲ್ಲಿ ಜಿತು ರಾಯ್ ಅವರು ಸರ್ಬಿಯಾದ ಡಾಮಿರ್ ಮಿಕೆಕ್ ಅವರನ್ನು ಹಿಂದಿಕ್ಕಿ 5,587 ಡಾಲರ್(5,000 ಯುರೋಸ್) ಮೊತ್ತದ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದ್ದಾರೆ.

105. ಈ ಕೆಳಗಿನ ಯಾರು ಚೀನಾದ ಭಾರತ ರಾಯಭಾರಿಯಾಗಿ ಇತ್ತೀಚೆಗೆ ನೇಮಕಗೊಂಡರು?

ಅ) ಲೀ ಯೆಂಗ್ಚುಕ್

ಆ) ಲುವೋ ಝಾವೋ ಹುಯಿ

www.karunaduexams.com

ಇ) ಲೀ ಚಾಂಗ್ಲಿ

ಈ) ಲುವೋ ಪೋಸೆಕಾ ಹುಯಿ

ಲುವೋ ಝಾವೋ ಹುಯಿ

ಚೀನಾದ ಅಧ್ಯಕ್ಷ ಕ್ಸಿ ಜಿನ್ಪಿಂಗ್ ರವರು ಲುವೋ ಝಾವೋ ಹುಯಿ (**Luo Zhaohui**) ರವರನ್ನು ಚೀನಾದ ಭಾರತ ರಾಯಭಾರಿಯನ್ನಾಗಿ ನೇಮಕ ಮಾಡಿದ್ದಾರೆ. ಈ ಮುಂಚೆ ಇವರು ಚೀನಾದ ಕೆನಡಾ ರಾಯಭಾರಿಯಾಗಿ 2014 ರಿಂದ 2016 ರವರೆಗೆ ಕಾರ್ಯನಿರ್ವಹಿಸಿದ್ದರು.

106. ಇತ್ತೀಚೆಗೆ ನಿಧನರಾದ "ಪರಮೇಶ್ವರ್ ಗೋದ್ರೆಜ್" ರವರು ಪ್ರಸಿದ್ಧ ______?

ಅ) ಲೇಖಕಿ

ಆ) ಲೋಕೋಪಕಾರಿ

ಇ) ಉದ್ಯಮಿ

ಈ) ಗಾಯಕಿ

ಲೋಕೋಪಕಾರಿ

ಉದ್ಯಮಿ ಆದಿ ಗೊದ್ರೇಜ್ ಅವರ ಪತ್ನಿ ಪರಮೇಶ್ವರ್ ಗೋದ್ರೆಜ್ ನಿಧನರಾದರು. ಲೋಕೋಪಕಾರಿ, ಸಮಾಜವಾದಿ ಹೀಗೆ ಬಹುಮುಖ ಪ್ರತಿಭೆಯ ಪರಮೇ ಶ್ವರ್ ಅವರು ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದರು. ಏಡ್ಸ್ ವಿರುದ್ಧದ ಹೋರಾಟಕ್ಕೆ ದಿ ಬಿಲ್ ಮತ್ತು ಮಿಲಿಂದಾ ಗೇಟ್ಸ್ ಫೌಂಡೇಶನ್ ಹಾಗೂ ಕ್ಲಿಂಟನ್ ಗ್ಲೋಬಲ್ ಕೈಗೊಂಡಿರುವ 'ಹೀರೋಸ್' ಯೋಜನೆಗೆ ಪರಮೇಶ್ವರ್ ಗೋದ್ರೆಜ್ ಅವರೂ ಕೈಜೋಡಿಸಿದ್ದರು.

107. ಯಾವ ರಾಜ್ಯ ಸರ್ಕಾರ ರಾಜ್ಯದಲ್ಲಿ ಅನೀಮಿಯಾವನ್ನು ಮುಕ್ತಗೊಳಿಸುವ ಸಲುವಾಗಿ 'ಲಲಿಮಾ ಅಭಿಯಾನ (Lalima Abhiyan)ವನ್ನು ಜಾರಿಗೊಳಿಸಲಿದೆ?

ಅ) ರಾಜಸ್ತಾನ

ಆ) ಮಧ್ಯಪ್ರದೇಶ

ಇ) ಗುಜರಾತ್

ಈ) ಮಹಾರಾಷ್ಟ್ರ

ಮಧ್ಯಪ್ರದೇಶ

ಮಧ್ಯಪ್ರದೇಶ ರಾಜ್ಯವನ್ನು ಅನೀಮಿಯಾ ಮುಕ್ತ ರಾಜ್ಯವನ್ನಾಗಿ ಮಾಡಲು "ಲಲಿಮಾ ಅಭಿಯಾನ"ವನ್ನು ಜಾರಿಗೊಳಿಸಲು ಮಧ್ಯಪ್ರದೇಶ ಸರ್ಕಾರ ತೀರ್ಮಾನಿಸಿದೆ. ನವೆಂಬರ್ 1 ರಿಂದ ಈ ಅಭಿಯಾನ ಅನುಷ್ಟಾನಗೊಳ್ಳಲಿದೆ. ಈ ಅಭಿಯಾನದಡಿ ಉಚಿಯವಾಗಿ ಐರನ್ ಫೋಲಿಕ್ ಮಾತ್ರೆಗಳನ್ನು ಅಂಗನವಾಡಿ, ಆರೋಗ್ಯ ಕೇಂದ್ರ ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ವಿತರಿಸಲಾಗುವುದು.

www.karunaduexams.com

108. ಮಧುಮೇಹ ರೋಗಿಯ ಮೂತ್ರದ ಮಾದರಿಯು ಇವುಗಳನ್ನು ಒಳಗೊಂಡಿರುತ್ತದೆ___?

ಅ) ಸುಕ್ರೋಸ್

ಆ) ಫ್ರಕ್ಟೋಸ್

ಇ) ಗ್ಲೂಕೋಸ್

ಈ) ಮೇಲಿನ ಎಲ್ಲವೂ

ಮೇಲಿನ ಎಲ್ಲವೂ

109. "Half Lion: How P V Narasimha Rao Transformed India" ಪುಸ್ತಕದ ಲೇಖಕರು ಯಾರು?

ಅ) ವಿನಯ್ ಸಿತಪತಿ

ಆ) ಜಗದೀಶ್ ಕುಲಕರ್ಣಿ

ಇ) ಭಾಸ್ಕರ್ ರಾಜ್

ಈ) ಅಶೋಕ್ ಸಿಂಗ್

ವಿನಯ್ ಸಿತಪತಿ

"Half Lion: How P V Narasimha Rao Transformed India" ಪುಸ್ತಕವನ್ನು ವಿನಯ್ ಸಿತಪರಿ ರವರು ಬರೆದಿದ್ದಾರೆ. ಭಾರತದ ಮಾಜಿ ಪ್ರಧಾನಿ ಪಿ ವಿ ನರಸಿಂಹ ರಾವ್ ರವರ ಜೀವನವನ್ನು ಆಳವಾಗಿ ಸಂಶೋಧನೆ ನಡೆಸಿ ಈ ಪುಸ್ತಕವನ್ನು ಬರೆಯಲಾಗಿದೆ.

110. ಪೂರ್ವ ಘಟ್ಟಗಳ ಭಾಗವಾಗಿರುವ "ವೆಲಿಕೊಂಡ ಬೆಟ್ಟಗಳು (Veliconda Hills)" ಯಾವ ರಾಜ್ಯದಲ್ಲಿ ಕಂಡು ಬರುತ್ತವೆ?

ಅ) ಒಡಿಶಾ

ಆ) ತಮಿಳು ನಾಡು

ಇ) ಕೇರಳ

ಈ) ಆಂಧ್ರ ಪ್ರದೇಶ

ಆಂಧ್ರ ಪ್ರದೇಶ

ವೆಲಿಕೊಂಡ ಬೆಟ್ಟಗಳು ಆಂಧ್ರ ಪ್ರದೇಶದ ದಕ್ಷಿಣ ಭಾಗದಲ್ಲಿದ್ದು, ಪೂರ್ವ ಘಟ್ಟಗಳ ಭಾಗವಾಗಿವೆ.

111. ಪ್ರಪ್ರಥಮ "ವಿಶ್ವ ಸುನಾಮಿ ಜಾಗೃತಾ ದಿನ (World Tsunami Awareness Day)" ವನ್ನು ಯಾವ ದಿನದಂದು ಆಚರಿಸಲಾಗುವುದು?

ಅ) ನವೆಂಬರ್ 5



www.karunaduexams.com

ಆ) ಅಕ್ಟೋಬರ್ 15

ಇ) ಡಿಸೆಂಬರ್ 25

ಈ) ನವೆಂಬರ್ 10

ನವೆಂಬರ್ 5

ಪ್ರಪ್ರಥಮ ವಿಶ್ವ ಸುನಾಮಿ ಜಾಗೃತಾ ದಿನವನ್ನು ನವೆಂಬರ್ 5 ರಂದು ಆಚರಿಸಲಾಗುವುದು. ಸುನಾಮಿ ಅಪಾಯದ ಬಗ್ಗೆ ಅರಿವು ಮೂಡಿಸುವುದು ಮತ್ತು ಸುನಾಮಿಯಿಂದಾಗು ಅಪಾಯವನ್ನು ತಗ್ಗಿಸಲು ಮುನ್ನೆಚ್ಚರಿಕೆ ವ್ಯವಸ್ಥೆಯ ಪ್ರಾಮುಖ್ಯತೆ ಬಗ್ಗೆ ಜಾಗೃತಿ ಮೂಡಿಸಲು ಈ ದಿನವನ್ನು ಆಚರಿಸಲಾಗುವುದು. ಡಿಸೆಂಬರ್ 2015 ರಲ್ಲಿ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ ನವೆಂಬರ್ 5 ರಂದು ವಿಶ್ವ ಸುನಾಮಿ ಜಾಗೃತಾ ದಿನವನ್ನು ಆಚರಿಸಲು ತೀರ್ಮಾನಿಸಿತ್ತು.

112. ವಿಶ್ವದ ಮೊದಲ "ಬಯೋನಿಕ್ ಒಲಂಪಿಕ್ಸ್ (Bionic Olympics)" ಯಾವ ದೇಶದಲ್ಲಿ ಆರಂಭಗೊಂಡಿತು?

ಅ) ಸ್ವಿಟ್ಜಲ್ಯಾಂಡ್

ಆ) ಚೀನಾ

ಇ) ಬ್ರೆಜಿಲ್

ಈ) ಅಮೆರಿಕ

ಸ್ವಿಟ್ಜಲ್ಯಾಂಡ್

ವಿಕಲಚೇತನರು ಭಾಗವಹಿಸುವ ವಿಶ್ವದ ಮೊದಲ ಸೈಬ್ಲಾಥನ್ ಚಾಂಪಿಯನ್ ಷಿಪ್ ಸ್ವಿಟ್ಜಲ್ಯಾಂಡ್ನ ಜೂರಿಚ್ ನಲ್ಲಿ ಆರಂಭಗೊಂಡಿದೆ. ಈ ಚಾಂಪಿಯನ್ ಷಿಪ್ ಅನ್ನು ಬಯೋನಿಕ್ ಒಲಂಪಿಕ್ಸ್ ಎಂತಲೂ ಕರೆಯಲಾಗುತ್ತದೆ. ಬಯೋನಿಕ್ ಒಲಂಪಿಕ್ಸ್ ಪ್ಯಾರಾಲಿಂಪಿಕ್ ಗಿಂತ ಭಿನ್ನವಾಗಿದ್ದು, ಈ ಕ್ರೀಡಾಕೂಟದಲ್ಲಿ ಭಾಗವಹಿಸುವ ವಿಕಲಚೇತನ ಸ್ಪರ್ಧಾರ್ಥಿಗಳು ವಿನೂತನ ತಂತ್ರಜ್ಞಾನಗಳಾದ ರೋಬೋಟಿಕ್ ಅಂಗಗಳು, ಬ್ರೈನ್ ಕಂಪ್ಯೂಟರ್ ಇಂಟರ್ಫೇಸ್ ಸೇರಿದಂತೆ ಇತರೆ ತಂತ್ರಜ್ಞಾನಗಳ ಸಹಾಯದೊಂದಿಗೆ ಆಡಲಿದ್ದಾರೆ.

113. 2016 ರಷ್ಯಾ ಬ್ಯಾಡ್ಮಿಂಟನ್ ಗ್ರಾಂಡ್ ಫ್ರಿಕ್ಸ್ ಮಹಿಳೆಯರ ಸಿಂಗಲ್ಸ್ ನಲ್ಲಿ ಪ್ರಶಸ್ತಿ ಗೆದ್ದವರು _____?

ಅ) ರುತ್ವಿಕ ಶಿವಾನಿ ಗದ್ದೆ

ಆ) ಇಗೇನಿಯಾ ಕೊಸೆಟ್ಸ್ಕಯ

ಇ) ಎನ್ ಸಿಕ್ಕಿ ರೆಡ್ಡಿ

www.karunaduexams.com

ಈ) ಪಿ ವಿ ಸಿಂಧು

ರುತ್ವಿಕ ಶಿವಾನಿ ಗದ್ದೆ

ಭಾರತದ ರುತ್ವಿಕ ಶಿವಾನಿ ಗದ್ದೆ ಅವರು 2016 ರಷ್ಯಾ ಬ್ಯಾಡ್ಮಿಂಟನ್ ಗ್ರಾಂಡ್ ಫ್ರಿಕ್ಸ್ ಮಹಿಳೆಯರ ಸಿಂಗಲ್ಸ್ ನಲ್ಲಿ ಪ್ರಶಸ್ತಿ ಗೆದ್ದು ಭರವಸೆ ಮೂಡಿಸಿದ್ದಾರೆ. ಶಿವಾನಿ ರಷ್ಯಾದ ಇಗೇನಿಯಾ ಕೊಸೆಟ್ಸ್ಕಯ ಅವರನ್ನು 21-10, 21-13 ಸೆಟ್ ಗಳಿಂದ ಮಣಿಸಿ ಪ್ರಶಸ್ತಿಯನ್ನು ಗೆದ್ದುಕೊಂಡರು. ಶಿವಾನಿ ಅವರಿಗೆ ಇದು ಮೊದಲ ಸೀನಿಯರ್ ಪ್ರಶಸ್ತಿಯಾಗಿದೆ.

114. "ಅಬ್ದೆಲಿಲಹ್ ಬೆಕಿರನೆ (Abdelilah Bekirane)" ರವರು ಯಾವ ದೇಶದ ಪ್ರಧಾನಿಯಾಗಿ ನೇಮಕಗೊಂಡರು?

ಅ) ಮೊರಾಕೊ

ಆ) ನಮೀಬಿಯಾ

ಇ) ಜಿಂಬಾಬ್ವೆ

ಈ) ಬ್ರೆಜಿಲ್

ಮೊರಾಕೊ

ಅಬ್ದೆಲಿಲಹ್ ಬೆಕಿರನೆ ರವರು ಮೊರಾಕಾದ ಪ್ರಧಾನಿಯಾಗಿ ಎರಡನೇ ಅವಧಿಗೆ ನೇಮಕಗೊಂಡಿದ್ದಾರೆ. ನವೆಂಬರ್ 2011ರಿಂದ ಬೆಕಿರನೆ ಅವರು ಮೊರಾಕೊದ ಪ್ರಧಾನಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇತ್ತೀಚೆಗೆ ನಡೆದ ಸಾರ್ವತಿಕ ಚುನಾವಣೆಯಲ್ಲಿ ಬೆಕಿರನೆ ನೇತೃತ್ವದ "ಇಸ್ಲಾಮಿಕ್ ಜಸ್ಟೀಸ್ ಅಂಡ್ ಡೆವೆಲಪ್ಮೆಂಟ್" ಪಕ್ಷ ಜಯಭೇರಿಯಾದ ಹಿನ್ನಲೆಯಲ್ಲಿ ಮೊರಾಕೊದ ಅಧ್ಯಕ್ಷ ಮೊಹಮ್ಮದ್ V ರವರು ಬೆಕಿರನೆ ಅವರನ್ನು ಪ್ರಧಾನಿಯೆಂದು ಅಧಿಕೃತವಾಗಿ ಘೋಷಿಸಿದರು.

115. ಪ್ರವಾಸಿಗರನ್ನು ಆಕರ್ಷಿಸಲು ಯಾವ ರಾಜ್ಯ ದೇಶದಲ್ಲಿ ಪ್ರಥಮ ಬಾರಿಗೆ "ಡಕ್ ಬೋಟ್ (Duck Boat)" ಆರಂಭಿಸಿದೆ?

ಅ) ಕೇರಳ

ಆ) ಗೋವಾ

ಇ) ತೆಲಂಗಣ

ಈ) ಕರ್ನಾಟಕ

ಗೋವಾ

ದೇಶದಲ್ಲೇ ಮೊದಲ ಎನಿಸಿದ "ಡಕ್ ಬೋಟ್" ಸೌಲಭ್ಯವನ್ನು ಗೋವಾ ಪ್ರವಾಸೋದ್ಯಮ ಇಲಾಖೆ ಆರಂಭಿಸಿದೆ. ಈ ಬೋಟ್ ನೀರು ಹಾಗೂ ರಸ್ತೆಯ ಮೇಲೆ ಸರಾಗವಾಗಿ ಚಲಿಸುತ್ತದೆ. ಪ್ರವಾಸಿ ತಾಣವಾಗಿರುವ ಗೋವಾಕ್ಕೆ ಆಗಮಿಸುವ ಹೆಚ್ಚಿನ ಪ್ರವಾಸಿಗರ ಪ್ರಮುಖ ಆಕರ್ಷಣೆಯಾಗಿದೆ. ಒಂದು ಬೋಟ್ ನಲ್ಲಿ ಗರಿಷ್ಠ 32 ಜನರು ಪ್ರಯಾಣಿಸಬಹುದಾಗಿದ್ದು, ನವೆಂಬರ್ 2016ರಿಂದ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲಿದೆ.

www.karunaduexams.com

116. “Ashoka in Ancient India” ಪುಸ್ತಕದ ಲೇಖಕರು _____?

ಅ) ಉಮಾ ಮಹದೇವನ್

ಆ) ನಯನ್ಜೋತ್ ಲಹಿರಿ

ಇ) ಸುಧಾ ನರಸಿಂಹನ್

ಈ) ಪ್ರತಿಭಾ ನಾರಾಯಣನ್

ನಯನ್ಜೋತ್ ಲಹಿರಿ

“Ashoka in Ancient India” ಪುಸ್ತಕದ ಲೇಖಕರು ನಯನ್ಜೋತ್ ಲಹಿರಿ. ಅಶೋಕ ವಿಶ್ವವಿದ್ಯಾಲಯದಲ್ಲಿ ಇತಿಹಾಸ ಪ್ರಾಧ್ಯಪಕರಾಗಿರುವ ನಯನ್ಜೋತ್ ಲಹಿರಿ ರವರ ಈ ಪುಸ್ತಕಕ್ಕೆ 2016 ಜಾನ್ ಎಫ್ ರಿಚರ್ಡ್ ಪ್ರಶಸ್ತಿ ಲಭಿಸಿದೆ. ತನ್ನ ಶಾಸನಗಳ ಸಾಮ್ರಾಜ್ಯವನ್ನು ಬಣ್ಣಿಸಿರುವ ಅಶೋಕ ಮಹಾರಾಜನ ಕುರಿತಾಗಿರುವ ಈ ಪುಸ್ತಕ ವಿಮರ್ಶಕರ ಪ್ರಶಂಸೆಗೆ ಒಳಗಾಗಿದೆ.

117. ಭಾರತದ ಮೊದಲ “ಪರಿವರ್ತನ ಸ್ಟೇಡಿಯಂ (convertible stadium)” ಯಾವ ನಗರದಲ್ಲಿದೆ?

ಅ) ಅಹಮದಾಬಾದ್

ಆ) ಹೈದ್ರಾಬಾದ್

ಇ) ಚೆನ್ನೈ

ಈ) ಕೊಲ್ಕತ್ತಾ

ಅಹಮದಾಬಾದ್

ಭಾರತದ ಮೊದಲ “ಪರಿವರ್ತನ ಸ್ಟೇಡಿಯಂ” ಅಹಮದಾಬಾದ್ ನಲ್ಲಿದೆ. ಅರೆನ ಬೈ ಟ್ರಾನ್ಸ್ಟ್ರಂಡಿಯಾ (**Arena** by TransStadia) ಹೆಸರಿನ ಈ ಕ್ರೀಡಾಂಗಣವನ್ನು ಕೇವಲ ಒಂದು ಬಟನ್ ಒತ್ತಿದರೆ ಆರು ನಿಮಿಷದಲ್ಲಿ ಈ ಕ್ರೀಡಾಂಗಣ ಒಳಾಂಗಣ ಮತ್ತು ಹೊರಾಂಗಣ ಕ್ರೀಡಾಂಗಣವಾಗಿ ಪರಿವರ್ತನೆಯಾಗಲಿದೆ. 20,000 ಆಸನಗಳನ್ನು ಒಳಗೊಂಡಿರುವ ಈ ಕ್ರೀಡಾಂಗಣದಲ್ಲಿ ಕ್ರಿಕೆಟ್ ಹೊರತುಪಡಿಸಿ 14 ಕ್ರೀಡೆಗಳನ್ನು ಆಡಬಹುದಾಗಿದೆ.

118. “ಯುನೈಟೆಡ್ ನೇಷನ್ ಆಫೀಸ್ ಫಾರ್ ಡಿಸಸ್ಟರ್ ರಿಸ್ಕ್ ರೆಡಕ್ಷನ್ (United Nations Office for Disaster Risk Reduction)” ಕೇಂದ್ರ ಕಚೇರಿ ಎಲ್ಲಿದೆ?

ಅ) ನ್ಯೂಯಾರ್ಕ್, ಅಮೆರಿಕ

ಆ) ಜಿನೀವಾ, ಸ್ವಿಟ್ಜರ್ಲ್ಯಾಂಡ್

ಇ) ಮಾಸ್ಕೋ, ರಷ್ಯಾ

www.karunaduexams.com

ಈ) ಬರ್ಲಿನ್, ಜರ್ಮನಿ

ಜಿನೀವಾ, ಸ್ವಿಟ್ಜರ್ಲ್ಯಾಂಡ್

ಯುನೈಟೆಡ್ ನೇಷನ್ ಆಫೀಸ್ ಫಾರ್ ಡಿಸಸ್ಟರ್ ರಿಸ್ಕ್ ರೆಡಕ್ಷನ್ ಕೇಂದ್ರ ಕಚೇರಿ ಜಿನೀವಾ, ಸ್ವಿಟ್ಜರ್ಲ್ಯಾಂಡ್ ನಲ್ಲಿದೆ.

119. ಇತ್ತೀಚೆಗೆ 4ನೇ ಬ್ರಿಕ್ಸ್ ವಿಜ್ಞಾನ, ತಂತ್ರಜ್ಞಾನ ಮತ್ತು ಅನುಶೋಧನಾ ಕುರಿತಾದ ಅಧಿಕಾರಿಗಳ ಸಭೆ ಯಾವ ನಗರದಲ್ಲಿ ನಡೆಯಿತು?

ಅ) ಬೆಂಗಳೂರು

ಆ) ಜೈಪುರ

ಇ) ನವದೆಹಲಿ

ಈ) ಪಣಜಿ

ಜೈಪುರ

ಬ್ರಿಕ್ಸ್ ರಾಷ್ಟ್ರಗಳ 4ನೇ ವಿಜ್ಞಾನ, ತಂತ್ರಜ್ಞಾನ ಮತ್ತು ಅನುಶೋಧನಾ ಕುರಿತಾದ ಅಧಿಕಾರಿಗಳ ಸಭೆ ರಾಜಸ್ತಾನದ ಜೈಪುರದಲ್ಲಿ ನಡೆಯಿತು. ವಿಜ್ಞಾನ, ತಂತ್ರಜ್ಞಾನ ಮತ್ತು ಅನುಶೋಧನಾ ಕ್ಷೇತ್ರಗಳಲ್ಲಿ ಬ್ರಿಕ್ಸ್ ರಾಷ್ಟ್ರಗಳ ನಡುವೆ ಸಹಕಾರವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಈ ಸಭೆಯನ್ನು ಆಯೋಜಿಸಲಾಗಿತ್ತು.

120. "ಹೈ ಸ್ಪೀಡ್ ರೈಲು" ಆರಂಭಿಸಲು ಭಾರತ ಇತ್ತೀಚೆಗೆ ಈ ಕೆಳಗಿನ ಯಾವ ರಾಷ್ಟ್ರದೊಂದಿಗೆ ಸಹಿ ಹಾಕಿತು?

ಅ) ರಷ್ಯಾ

ಆ) ಜರ್ಮನಿ

ಇ) ಚೀನಾ

ಈ) ಜಪಾನ್

ಜರ್ಮನಿ

ಹೈ ಸ್ಪೀಡ್ ರೈಲು ಆರಂಭಿಸುವ ಸಲುವಾಗಿ ಭಾರತ ಇತ್ತೀಚೆಗೆ ಜರ್ಮನಿಯೊಂದಿಗೆ ಸಹಿ ಹಾಕಿದೆ. ಈ ಒಪ್ಪಂದದಿಂದ ಉಭಯ ದೇಶಗಳ ನಡುವೆ ರೈಲ್ವೆ ವಲಯದಲ್ಲಿ ದ್ವಿಪಕ್ಷೀಯ ಸಂಬಂಧ ಮತ್ತಷ್ಟು ಬಲಗೊಳ್ಳಲಿದೆ.

121. ಇತ್ತೀಚೆಗೆ ಈ ಕೆಳಗಿನ ಯಾವ ಹಿಂದಿ ಚಿತ್ರಕ್ಕೆ ರಂಗಭೂಮಿ ಸ್ಪರ್ಶ ನೀಡಲು ಭಾರತ ಮತ್ತು ಚೀನಾ ಸಹಿ ಹಾಕಿವೆ?

ಅ) ಶೋಲೆ

ಆ) ಆವಾರಾ

ಇ) ಮುಘಲ್-ಇ-ಅಜಾಮ್

ಈ) ಗೈಡ್

www.karunaduexams.com

ಆವಾರಾ

ಹಿಂದಿ ಚಿತ್ರರಂಗದ ನಿರ್ದೇಶಕ, ನಟ ರಾಜ್‌ಕಪೂರ್ ಅವರ ಜನಪ್ರಿಯ ಚಿತ್ರ 'ಆವಾರಾ' ಚಿತ್ರವನ್ನು ರಂಗಪ್ರಯೋಗಕ್ಕೆ ಇಳಿಸಲು ಭಾರತ ಮತ್ತು ಚೀನಾ ಜಂಟಿಯಾಗಿ ಮುಂದಾಗಿವೆ. 1951ರಲ್ಲಿ ಬಿಡುಗಡೆಯಾದ 'ಆವಾರಾ' ಚೀನಾದಲ್ಲಿಯೂ ಭರ್ಜರಿ ಯಶಸ್ಸು ಕಂಡಿತ್ತು. ಈ ಯಶಸ್ಸನ್ನು ಮರುಕಳಿಸುವ ಗುರಿಯೊಂದಿಗೆ ಭಾರತದ ಸಾಂಸ್ಕೃತಿಕ ಸಂಬಂಧಗಳ ಮಂಡಳಿ (ಐಸಿಸಿಆರ್) ಮತ್ತು ಚೀನಾದ ಶಾಂಘೈ ಅಂತರರಾಷ್ಟ್ರೀಯ ಕಲೆಗಳ ಉತ್ಸವ (ಸಿಎಸ್‌ಐಎಎಫ್) ಒಪ್ಪಂದಕ್ಕೆ ಸಹಿ ಹಾಕಿವೆ. ಒಪ್ಪಂದದ ಪ್ರಕಾರ 'ಆವಾರಾ' ಸಿನಿಮಾದ ರಂಗಭೂಮಿ ಅವತರಣಿಕೆಯನ್ನು ಭಾರತ ಮತ್ತು ಚೀನಾ ಸೇರಿದಂತೆ ಜಗತ್ತಿನೆಲ್ಲೆಡೆಯ ಆಧುನಿಕ ಪ್ರೇಕ್ಷಕರನ್ನು ಗಮನದಲ್ಲಿರಿಸಿಕೊಂಡು ಬದಲಾವಣೆಗಳೊಂದಿಗೆ ಅಳವಡಿಸಲಾಗುತ್ತದೆ ಎಂದು ಐಸಿಸಿಆರ್‌ನ ಪ್ರಧಾನ ನಿರ್ದೇಶಕ ಅಮರೇಂದ್ರ ಕತುವಾ ಅವರು ತಿಳಿಸಿದ್ದಾರೆ.

122. ಯಾವ ನಗರದಲ್ಲಿ "ಸಾರ್ಕ್ ಸೂಫಿ ಉತ್ಸವ" ಇತ್ತೀಚೆಗೆ ಆರಂಭಗೊಂಡಿತು?

ಅ) ಜೈಪುರ

ಆ) ಪುಣೆ

ಇ) ನಾಸಿಕ್

ಈ) ಹೈದ್ರಾಬಾದ್

ಜೈಪುರ

ಮೂರನೇ ಸಾರ್ಕ್ ಸೂಫಿ ಉತ್ಸವ ರಾಜಸ್ತಾನದ ಜೈಪುರದಲ್ಲಿ ಅಕ್ಟೋಬರ್ 14ರಂದು ಆರಂಭವಾಗಿದ್ದು, ಅಕ್ಟೋಬರ್ 16 ವರೆಗೆ ನಡೆಯಲಿದೆ. ಈ ಉತ್ಸವನ್ನು ಸಾರ್ಕ್ ರೈಟರ್ಸ್ ಮತ್ತು ಲಿಟರೆಚರ್ (FOSWAL) ಆಯೋಜಿಸುತ್ತಿದೆ. ಪಾಕಿಸ್ತಾನವನ್ನು ಹೊರತುಪಡಿಸಿ ಉಳಿದ ಸಾರ್ಕ್ ರಾಷ್ಟ್ರಗಳ ಸೂಫಿ ಸಂತರು, ವಿದ್ವಾಂಸರು, ಕವಿಗಳು, ಗಾಯಕರು, ನೃತ್ಯಗಾರರು ಮತ್ತು ಸಂಗೀತಗಾರರು ಈ ಉತ್ಸವದಲ್ಲಿ ಭಾಗವಹಿಸಲಿದ್ದಾರೆ.

123. ಇತ್ತೀಚೆಗೆ ನಿಧನರಾದ ಖ್ಯಾತ ನಾಟಕಕಾರ, ಕಲಾವಿದ ಹಾಗೂ ನೊಬೆಲ್ ಸಾಹಿತ್ಯ ಪ್ರಶಸ್ತಿ ಪುರಸ್ಕೃತ "ಡರಿಯೋ ಫೋ" ಯಾವ ದೇಶದವರು?

ಅ) ಇಟಲಿ

ಆ) ಸ್ಪೇನ್

ಇ) ಫ್ರಾನ್ಸ್

ಈ) ಮೆಕ್ಸಿಕೊ

ಇಟಲಿ

www.karunaduexams.com

ಇಟಲಿಯ ಖ್ಯಾತ ನಾಟಕಕಾರ, ಕಲಾವಿದ, 1997ರ ನೊಬೆಲ್ ಸಾಹಿತ್ಯ ಪ್ರಶಸ್ತಿ ಪುರಸ್ಕೃತ ಡರಿಯೋ ಫೋ (90) ನಿಧನರಾದರು. “ಆಕ್ಸಿಡೆಂಟಲ್ ಡೆತ್ ಆಫ್ ಆನ್ ಅನಾರ್ಕಿಸ್ಟ್ (Accidental Death of an Anarchist)” ಮತ್ತು “ಕಾನ್’ಂಟ್ ಪೆ, ವೊಂಟ್ ಪೆ (Can’t Pay, Won’t Pay)”ರಾಜಕೀಯ ವಿಡಂಬಕ ನಾಟಕಗಳು ಫೋ ಅವರಿಗೆ ಅಪಾರ ಮನ್ನಣೆ ತಂದಿದ್ದವು.

124. ಈ ಕೆಳಗಿನವುಗಳಲ್ಲಿ ಪುಸ್ತಕಗಳು ಮತ್ತು ಲೇಖಕರ ಹೊಂದಾಣಿಕೆ ಆಗಿಲ್ಲದಿರುವುದನ್ನು ಗುರುತಿಸಿ:

ಅ) ಹಾಫ್ ಆಫ್ ವಾಟ್ ಐ ಸೇ (Half of What I Say) – ಅನಿಲ್ ಮೆನನ್

ಆ) ಜಿನ್ನಾ ಆಫ್ಟನ್ ಕಮ್ ಟು ಅವರ್ ಹೌಸ್ (Jinnah Often Came To Our House) – ಕಿರಣ್ ದೋಶಿ

ಇ) ದಿ ಆದಿವಾಸಿ ವಿಲ್ ನಾಟ್ ಡ್ಯಾನ್ಸ್ (The Adivasi Will Not Dance) – ಹನ್ಸದ ಸೋವೆಂದ್ರ ಶೇಖರ್

ಈ) ದಿ ಐಲ್ಯಾಂಡ್ ಆಫ್ ಲಾಸ್ಟ್ ಗರ್ಲ್ಸ್ (The Island of Lost Girls) – ಮನು ಚಕ್ರವರ್ತಿ

ದಿ ಐಲ್ಯಾಂಡ್ ಆಫ್ ಲಾಸ್ಟ್ ಗರ್ಲ್ಸ್ (The Island of Lost Girls) – ಮನು ಚಕ್ರವರ್ತಿ

“ದಿ ಐಲ್ಯಾಂಡ್ ಆಫ್ ಲಾಸ್ಟ್ ಗರ್ಲ್ಸ್” ಪುಸ್ತಕದ ಲೇಖಕರು ಮಂಜುಳ ಪದ್ಮನಾಭನ್. ಈ ಮೇಲಿನ ಪುಸ್ತಕಗಳನ್ನು ದಿ ಹಿಂದು ಸಾಹಿತ್ಯ ಪ್ರಶಸ್ತಿ-2016ಗೆ ಅಂತಿಮ ಸುತ್ತಿಗೆ ಆಯ್ಕೆಮಾಡಲಾಗಿದ್ದು, ವಿಜೇತರನ್ನು ಜನವರಿ 2017ರಲ್ಲಿ ಘೋಷಿಸಲಾಗುವುದು.

125. ಈ ಕೆಳಗಿನ ಯಾವ ಸಂಸ್ಥೆ ದೇಶದ ಅತಿ ಉದ್ದದ ಎಲ್ಪಿಜಿ (ಅಡುಗೆ ಅನಿಲ) ಮಾರ್ಗವನ್ನು ನಿರ್ಮಿಸಲು ಯೋಜನೆ ರೂಪಿಸಿದೆ?

ಅ) ಇಂಡಿಯನ್ ಆಯಿಲ್ ಕಾರ್ಪೋರೇಷನ್

ಆ) ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿಮಿಟೆಡ್

ಇ) ಪೆಟ್ರೋನೆಟ್ ಎಲ್ಎನ್ಜಿ

ಈ) ಆಯಿಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್

ಇಂಡಿಯನ್ ಆಯಿಲ್ ಕಾರ್ಪೋರೇಷನ್

ಸರ್ಕಾರಿ ಸ್ವಾಮ್ಯದ ತೈಲ ಕಂಪನಿ ಇಂಡಿಯನ್ ಆಯಿಲ್ ಕಾರ್ಪೋರೇಷನ್ (ಐಒಸಿ) ದೇಶದ ಅತ್ಯಂತ ಉದ್ದದ ಎಲ್ಪಿಜಿ (ಅಡುಗೆ ಅನಿಲ) ಕೊಳವೆಮಾರ್ಗ ನಿರ್ಮಿಸಲು ಯೋಜಿಸಿದೆ. ಈ ಮಾರ್ಗವು ಗುಜರಾತ್ ಕರಾವಳಿಯಿಂದ ಉತ್ತರ ಪ್ರದೇಶದ ಗೋರಖ್ಪುರದವರೆಗೆ ನಿರ್ಮಾಣಗೊಳ್ಳಲಿದೆ. ದೇಶದಲ್ಲಿ ಹೆಚ್ಚುತ್ತಿರುವ ಅಡುಗೆ ಅನಿಲ ಬೇಡಿಕೆಯನ್ನು ಪೂರೈಸಲು ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ಕಂಪನಿ ಹೇಳಿದೆ. ಇದಕ್ಕೆ ಅನುಮತಿ ನೀಡುವಂತೆ ಕೋರಿ ಐಒಸಿಯು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ನಿಯಂತ್ರಣ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದೆ. ಗುಜರಾತ್ನ ಕಾಂಡ್ಲಾ ಬಂದರಿಗೆ ಅನಿಲವನ್ನು ಆಮದು ಮಾಡಿಕೊಳ್ಳಲಿರುವ ಇಂಡಿಯನ್ ಆಯಿಲ್, ಅದನ್ನು ಕೊಳವೆ ಮೂಲಕ ಗೋರಖ್ಪುರಕ್ಕೆ ಸಾಗಿಸಲಿದೆ.

126. "ಇನ್ಸ್ಟಿಟ್ಯೂಟ್ ಆಫ್ ಮೈಕ್ರೊಬಿಯಲ್ ಟೆಕ್ನಾಲಜಿ (Institute of Microbial Technology (IMTECH))" ಎಲ್ಲಿದೆ?

ಅ) ಬೆಂಗಳೂರು

ಆ) ಚಂಡೀಗರ್

ಇ) ಮುಂಬೈ

ಈ) ಲಕ್ನೋ

ಚಂಡೀಗರ್

"ಇನ್ಸ್ಟಿಟ್ಯೂಟ್ ಆಫ್ ಮೈಕ್ರೊಬಿಯಲ್ ಟೆಕ್ನಾಲಜಿ" ಚಂಡೀಗರದಲ್ಲಿದೆ. ಇತ್ತೀಚೆಗೆ ಈ ಸಂಸ್ಥೆಯು ಸ್ವದೇಶಿ ತಂತ್ರಜ್ಞಾನದೊಂದಿಗೆ ಪ್ರೋಟಿನ್ ಆಧರಿತ ಇನ್ಸುಲಿನ್, ಸ್ಟ್ರೆಪ್ಟೊಕಿನೆಸ್ ಮತ್ತು ಹೆಪಟೈಟಿಸ್ ಬಿ ಲಸಿಕೆಗಳನ್ನು ಅಭಿವೃದ್ದಿಪಡಿಸಿ ಸುದ್ದಿಯಲ್ಲಿತ್ತು. ಸದ್ಯ ಈ ಔಷಧಗಳನ್ನು ಭಾರತ ವಿದೇಶಗಳಿಂದ ಆಮದುಮಾಡಿಕೊಳ್ಳುತ್ತಿದೆ. ಈ ಲಸಿಕೆಗಳ ಅಭಿವೃದ್ದಿಯಿಂದ ಮುಂದಿನ ದಿನಗಳಲ್ಲಿ ಇವುಗಳ ದರ ಮೂರರಿಂದ ನಾಲ್ಕುಪಟ್ಟು ಕಡಿಮೆಯಾಗಲಿದೆ ಎನ್ನಲಾಗಿದೆ. ಯೀಸ್ಟ್ ನ ವಿದಳನ ತಂತ್ರಗಾರಿಕೆ (fission yeast) ಬಳಸಿ ಈ ಲಸಿಕೆಗಳನ್ನು ಅಭಿವೃದ್ದಿಪಡಿಸಲಾಗಿದೆ.

127. ಜಾಗತಿಕ ಹಸಿವು ಸೂಚ್ಯಂಕ (Global Hunger Index)ದಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) 80

ಆ) 97

ಇ) 63

ಈ) 99

97

ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತ 118 ದೇಶಗಳ ಪೈಕಿ 97ನೇ ಸ್ಥಾನವನ್ನು ಪಡೆದುಕೊಂಡಿದೆ. 2016ನೇ ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತ 100 ಅಂಕಗಳಿಗೆ ಕೇವಲ 28.5 ಅಂಕಗಳನ್ನು ಮಾತ್ರ ಭಾರತ ಪಡೆದುಕೊಂಡಿದೆ. ಆ ಮೂಲಕ ಭಾರತದಲ್ಲಿ ಇನ್ನೂ ವ್ಯಾಪಕ ಪ್ರಮಾಣದಲ್ಲಿ ಹಸಿವಿನ ಸಮಸ್ಯೆ ತಾಂಡವಾಡುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಇಂಟರ್ ನ್ಯಾಷನಲ್ ಫುಡ್ ಪಾಲಿಸಿ ರಿಸರ್ಚ್ ಇನ್ಸ್ಟಿಟ್ಯೂಟ್ (IFPRI) ಈ ಸೂಚ್ಯಂಕವನ್ನು ಬಿಡುಗಡೆಗೊಳಿಸಿದೆ.

128. 2016 ನೊಬೆಲ್ ಸಾಹಿತ್ಯ ಪ್ರಶಸ್ತಿಯನ್ನು ಪಡೆದುಕೊಂಡ "ಬಾಬ್ ಡೊಲೈನ್" ಯಾವ ದೇಶದವರು?

ಅ) ರಷ್ಯಾ

ಆ) ಅಮೆರಿಕ

ಇ) ಜರ್ಮನಿ

ಈ) ಸ್ವೀಡನ್

www.karunaduexams.com

ಅಮೆರಿಕ

ಅಮೆರಿಕದ ಖ್ಯಾತ ಗೀತ ರಚನಕಾರ, ಕಲಾಕಾರ ಮತ್ತು ಸಂಗೀತ ಕ್ಷೇತ್ರದ ದಂತಕತೆ ಎನಿಸಿರುವ ಬಾಬ್ ಡೊಲೈನ್ ಅವರಿಗೆ 2016ನೇ ಸಾಲಿನ ಸಾಹಿತ್ಯ ನೊಬೆಲ್ ಪ್ರಶಸ್ತಿಯನ್ನು ನೀಡಲಾಗಿದೆ. ಮಹಾನ್ ಅಮೆರಿಕದ ಹಾಡುಗಳ ಪರಂಪರೆಗೆ ಹೊಸ ಕಾವ್ಯ ಅಭಿವ್ಯಕ್ತಿಗಳನ್ನು ಸೃಷ್ಟಿಸಿದ್ದಕ್ಕಾಗಿ ಡೈಲಾನ್ ಅವರಿಗೆ 80 ಲಕ್ಷ ಸ್ವೀಡಿಷ್ ಕ್ರೌನ್ (927,740 ಡಾಲರ್) ಮೊತ್ತದ ಪ್ರಶಸ್ತಿ ಸಂದಿದೆ.

129. 2016 ಅಂತಾರಾಷ್ಟ್ರೀಯ ವಿಪತ್ತು ತಗ್ಗಿಸುವ ದಿನ (International Day for Disaster Reduction ) ಧ್ಯೇಯವಾಕ್ಯ ____?

ಅ) Live to Tell

ಆ) World With No Disaster

ಇ) No Disaster No Problem

ಈ) Resilience is for Life

Live to Tell

ಅಂತಾರಾಷ್ಟ್ರೀಯ ವಿಪತ್ತು ತಗ್ಗಿಸುವ ದಿನವನ್ನು ಪ್ರತಿವರ್ಷ ಅಕ್ಟೋಬರ್ 13ರಂದು ಆಚರಿಸಲಾಗುತ್ತದೆ. ವಿಪತ್ತು ಚೇತರಿಸಿಕೊಳ್ಳುವ ಸಮುದಾಯ ಮತ್ತು ರಾಷ್ಟ್ರಗಳನ್ನು ನಿರ್ಮಿಸಲು ಪ್ರತಿ ವ್ಯಕ್ತಿ, ಸಮುದಾಯ ಮತ್ತು ಸರ್ಕಾರ ಭಾಗವಹಿಸುವಂತೆ ಪ್ರೋತ್ಸಾಹಿಸುವ ಸಲುವಾಗಿ ಈ ದಿನವನ್ನು ಆಚರಿಸಲಾಗುತ್ತದೆ. Live to Tell: Raising Awareness, Reducing Mortality", ಇದು ಈ ವರ್ಷದ ಧ್ಯೇಯವಾಕ್ಯ.

130. ರಣಜಿ ಕ್ರಿಕೆಟ್ ಇತಿಹಾಸದಲ್ಲಿ 594 ರನ್ ಪೇರಿಸುವ ಮೂಲಕ ಹೊಸ ದಾಖಲೆ ಬರೆದ ಆಟಗಾರರು ಯಾರು?

ಅ) ಸ್ವಪ್ನಿಲ್ ಗುಗಾಲೆ ಮತ್ತು ಅಂಕಿತ್ ಬಾವ್ನೆ

ಆ) ಅಂಕಿತ್ ಬಾವ್ನೆ ಮತ್ತು ಮಹಮ್ಮದ್ ಕೈಫ್

ಇ) ಸ್ವಪ್ನಿಲ್ ಗುಗಾಲೆ ಮತ್ತು ಮಹಮ್ಮದ್ ಕೈಫ್

ಈ) ರಫಾತುಲ್ಲಾ ಮಹಮ್ಮದ್ ಮತ್ತು ಅಂಕಿತ್ ಬಾವ್ನೆ

ಸ್ವಪ್ನಿಲ್ ಗುಗಾಲೆ ಮತ್ತು ಅಂಕಿತ್ ಬಾವ್ನೆ

ಮಹಾರಾಷ್ಟ್ರ ತಂಡದ ಸ್ವಪ್ನಿಲ್ ಗುಗಾಲೆ ಹಾಗೂ ಅಂಕಿತ್ ಭಾವ್ನೆ ಭಾರತದ ಪ್ರಮುಖ ದೇಶೀಯ ಸ್ಪರ್ಧೆ ರಣಜಿ ಟ್ರೋಫಿ ಇತಿಹಾಸದಲ್ಲಿ ಗರಿಷ್ಠ ಜೊತೆಯಾಟ ನಡೆಸಿ ವಿಶ್ವದ ಗಮನ ಸೆಳೆದಿದ್ದಾರೆ. ರಣಜಿ ಟ್ರೋಫಿಯ 2ನೆ ದಿನದಾಟವಾದ

www.karunaduexams.com

ಶುಕ್ರವಾರ ದಿಲ್ಲಿಯ ವಿರುದ್ಧ 3ನೆ ವಿಕೆಟ್ಗೆ ಮುರಿಯದ ಜೊತೆಯಾಟದಲ್ಲಿ 594 ರನ್ ಸೇರಿಸಿದ ಸ್ವಪ್ನಿಲ್ ಹಾಗೂ ಅಂಕಿತ್ ಹೊಸ ದಾಖಲೆ ನಿರ್ಮಿಸಿದರು. ಈ ಮೂಲಕ 1946-47ರ ಋತುವಿನಲ್ಲಿ 3ನೆ ವಿಕೆಟ್ಗೆ 577 ರನ್ ಜೊತೆಯಾಟ ನಡೆಸಿದ್ದ ಬರೋಡ ತಂಡದ ವಿಜಯ್ ಹಝಾರೆ ಹಾಗೂ ಗುಲ್ ಮುಹಮ್ಮದ್ ಅವರ ಹಳೆಯ ದಾಖಲೆ ಮುರಿದರು. ಇದು ವಿಶ್ವದ ಪ್ರಥಮ ದರ್ಜೆ ಕ್ರಿಕೆಟ್ನಲ್ಲಿ ದಾಖಲಾದ ಎರಡನೆ ಗರಿಷ್ಠ ಜೊತೆಯಾಟವಾಗಿದೆ. 2006ರಲ್ಲಿ ದಕ್ಷಿಣ ಆಫ್ರಿಕ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಶ್ರೀಲಂಕಾದ ಕುಮಾರ ಸಂಗಕ್ಕರ ಹಾಗೂ ಮಹೇಲ ಜಯವರ್ಧನೆ 624 ರನ್ ಸೇರಿಸಿ ವಿಶ್ವ ದಾಖಲೆ ನಿರ್ಮಿಸಿದ್ದರು.

131. ಈ ಕೆಳಗಿನ ಯಾವ ರಾಜ್ಯದಲ್ಲಿ “ಹಿಮಾಂಶು” ಹಿಮನದಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಾಗಿದೆ?

ಅ) ಉತ್ತರಖಂಡ್

ಆ) ಹಿಮಾಚಲ ಪ್ರದೇಶ

ಇ) ಉತ್ತರ ಪ್ರದೇಶ

ಈ) ಜಮ್ಮು ಮತ್ತು ಕಾಶ್ಮೀರ

ಹಿಮಾಚಲ ಪ್ರದೇಶ

ಹಿಮಾಲಯದಲ್ಲಿ ಸ್ಥಾಪಿಸಲಾಗಿರುವ ದೇಶದ ಅತಿ ಎತ್ತರದ ಹಿಮನದಿ ಸಂಶೋಧನಾ ಕೇಂದ್ರ ಹಿಮಾಂಶು (Himamshu) ತನ್ನ ಕೆಲಸವನ್ನು ಆರಂಭಿಸಿತು. 13,500 ಮೀಟರ್ ಎತ್ತರವಿರುವ ಹಿಮಾಚಲ ಪ್ರದೇಶದ ಸ್ಪಿತಿ ಕಣಿವೆಯಲ್ಲಿ ಈ ಕೇಂದ್ರವನ್ನು ಸ್ಥಾಪಿಸಲಾಗಿದೆ. ಹಿಮನದಿ ಚಲನೆ ಮತ್ತು ಹಿಮ ಹೊದಿಕೆ ವ್ಯತ್ಯಾಸವನ್ನು ಸೂಕ್ಷ್ಮವಾಗಿ ಅಧ್ಯಯನ ನಡೆಸಲು ಈ ಕೇಂದ್ರ ಸಹಕಾರಿಯಾಗಲಿದೆ. ಈ ಸಂಶೋಧನಾ ಕೇಂದ್ರವನ್ನು ನ್ಯಾಷನಲ್ ಸೆಂಟರ್ ಫಾರ್ ಅಂಟಾರ್ಟಿಕ್ ಅಂಡ್ ಓಷನ್ ರೀಸರ್ಚ್ (ಎನ್‌ಸಿಎಓಆರ್) ಸ್ಪಿತಿ ಕಣಿವೆಯಲ್ಲಿ ಸ್ಥಾಪಿಸಿದೆ. ಸ್ಪಿತಿ ಕಣಿವೆ ದೇಶದ ಅತ್ಯಂತ ನಿರ್ಜನ ಪ್ರದೇಶಗಳಲ್ಲಿ ಒಂದಾಗಿದೆ.

132. ಎರಡನೇ ರಾಷ್ಟ್ರೀಯ ಸಂಸ್ಕೃತಿ ಮಹೋತ್ಸವವನ್ನು ಯಾವ ನಗರದಲ್ಲಿ ಆಯೋಜಿಸಲಾಗಿದೆ?

ಅ) ಮುಂಬೈ

ಆ) ನವ ದೆಹಲಿ

ಇ) ಲಕ್ನೊ

ಈ) ಇಟಾನಗರ

ನವ ದೆಹಲಿ

www.karunaduexams.com

ಎರಡನೇ ರಾಷ್ಟ್ರೀಯ ಸಂಸ್ಕೃತಿ ಮಹೋತ್ಸವವನ್ನು ಕೇಂದ್ರ ಗೃಹ ಸಚಿವ ರಾಜನಾಥ್ ಸಿಂಗ್ ರವರು ನವದೆಹಲಿಯ ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದಲ್ಲಿ ಉದ್ಘಾಟಿಸಿದರು. ಹತ್ತು ದಿನಗಳ ಕಾಲ ನಡೆಯುವ ಈ ಕಾರ್ಯಕ್ರಮದಲ್ಲಿ ದೇಶದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಪ್ರದರ್ಶಿಸಲಾಗುವುದು.

133. ಪೋರ್ಚುಗಲ್ ಮಾಜಿ ಪ್ರಧಾನಿ ಅಂಟೋನಿಯೊ ಗುಟೆರಸ್ ಅವರು ವಿಶ್ವಸಂಸ್ಥೆಯ ಎಷ್ಟನೇ ಮಹಾ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ?

ಅ) ಏಳು

ಆ) ಎಂಟು

ಇ) ಒಂಬತ್ತು

ಈ) ಹತ್ತು

ಒಂಬತ್ತು

ಪೋರ್ಚುಗಲ್ ಮಾಜಿ ಪ್ರಧಾನಿ ಅಂಟೋನಿಯೊ ಗುಟೆರಸ್ ಅವರನ್ನು ವಿಶ್ವಸಂಸ್ಥೆಯ ನೂತನ ಮಹಾಪ್ರಧಾನ ಕಾರ್ಯದರ್ಶಿಯನ್ನಾಗಿ ಸಾಮಾನ್ಯ ಸಭೆಯು ಅಧಿಕೃತವಾಗಿ ಆಯ್ಕೆ ಮಾಡಿದೆ. 15 ರಾಷ್ಟ್ರಗಳ ಸದಸ್ಯರನ್ನು ಒಳಗೊಂಡ ಭದ್ರತಾ ಮಂಡಳಿಯು ಕಳೆದ ವಾರ ನಡೆಸಿದ ರಹಸ್ಯ ಸಭೆಯಲ್ಲಿ ಗುಟೆರಸ್ ಆಯ್ಕೆಗೆ ತೀರ್ಮಾನ ತೆಗೆದುಕೊಂಡಿದ್ದು, ಅನುಮೋದನೆಗಾಗಿ ಅವರ ಹೆಸರನ್ನು 193 ದೇಶಗಳ ಸಾಮಾನ್ಯ ಸಭೆಗೆ ಕಳುಹಿಸಿತ್ತು. ಬಾನ್ ಕಿ ಮೂನ್ ಅವರ ಉತ್ತರಾಧಿಕಾರಿಯಾಗಿ, ಮಹಾಪ್ರಧಾನ ಕಾರ್ಯದರ್ಶಿ ಹುದ್ದೆಗೆ ಗುಟೆರಸ್ ಅವರ ಹೆಸರು ಈ ಹಿಂದೆ ಅನೇಕ ಬಾರಿ ಕೇಳಿಬಂದಿತ್ತು. ವಿಶ್ವಸಂಸ್ಥೆಯ ಈಗಿನ ಮಹಾಪ್ರಧಾನ ಕಾರ್ಯದರ್ಶಿ ಬಾನ್ ಕಿ ಮೂನ್ ಅವರ ಅವಧಿ ಡಿಸೆಂಬರ್ 31ಕ್ಕೆ ಮುಕ್ತಾಯವಾಗಲಿದೆ. 67 ವರ್ಷದ ಗುಟೆರಸ್ ಅವರು ವಿಶ್ವಸಂಸ್ಥೆಯ 9ನೇ ಮಹಾ ಪ್ರಧಾನ ಕಾರ್ಯದರ್ಶಿಯಾಗಿ ನೇಮಕವಾಗಿದ್ದು, 2017ರ ಜನವರಿ 1ರಿಂದ 2022ರ ಡಿಸೆಂಬರ್ 31ರವರೆಗೆ ಅವರ ಅಧಿಕಾರ ಅವಧಿ ಇರಲಿದೆ.

134. ಇತ್ತೀಚೆಗೆ ನಿಧನರಾದ "ಭೂಮಿಬೋಲ್ ಅದುಲ್ಯದೇಜ್" ರವರು ಯಾವ ದೇಶದ ದೊರೆ ಆಗಿದ್ದರು?

ಅ) ಫಿಲಿಫೈನ್ಸ್

ಆ) ಥಾಯ್ಲೆಂಡ್

ಇ) ಮಾರಿಷಸ್

ಈ) ಈಜಿಪ್ಟ್

ಥಾಯ್ಲೆಂಡ್ ಸತತ 70 ವರ್ಷಗಳ ಆಡಳಿತ ನಡೆಸಿದ್ದ ಥಾಯ್ಲೆಂಡ್‌ನ ದೊರೆ ಭೂಮಿಬೋಲ್ ಅದುಲ್ಯದೇಜ್ ನಿಧನರಾಗಿದ್ದಾರೆ. ಅವರಿಗೆ 88 ವರ್ಷ ವಯಸ್ಸಾಗಿತ್ತು. ಭೂಮಿಬೋಲ್ ಜಗತ್ತಿನಲ್ಲಿ ಸುದೀರ್ಘ ಆಡಳಿತ ನಡೆಸಿದ ರಾಜನೆಂಬ ಖ್ಯಾತಿ ಹೊಂದಿದ್ದರು. ಕಳೆದ 2 ವರ್ಷಗಳಿಂದ ಅವರು ಬಹು ಸಮಯ ಆಸ್ಪತ್ರೆಯಲ್ಲಿಯೇ ಕಳೆದಿದ್ದರು.

www.karunaduexams.com

ಥಾಯ್ಲೆಂಡ್ ಜನತೆಯಿಂದ ದೇವಮಾನವ ಎಂದೇ ಕರೆಯಲ್ಪಡುತ್ತಿದ್ದ ಅವರು ಚಕ್ರಿ ಸಾಮ್ರಾಜ್ಯದ 9ನೇ ಸಾಮ್ರಾಟರಾಗಿದ್ದರು. ಅಣ್ಣನ ಸಾವಿನ ನಂತರ 1946ರಲ್ಲಿ ಪಟ್ಟಕ್ಕೇರಿದ್ದ ಅವರಿಗೆ 'ರಾಮ 9' ಎಂದೂ ಕರೆಯಲಾಗುತ್ತಿತ್ತು.

135. ಪ್ರಧಾನಿ ಮೋದಿ ರವರು ಯಾವ ರಾಜ್ಯದಲ್ಲಿ ಇತ್ತೀಚೆಗೆ "ಶೌರ್ಯ ಸ್ಮಾರಕ"ವನ್ನು ಲೋಕಾರ್ಪಣೆ ಮಾಡಿದರು?

ಅ) ಮಧ್ಯ ಪ್ರದೇಶ

ಆ) ಮಹಾರಾಷ್ಟ್ರ

ಇ) ತೆಲಂಗಣ

ಈ) ಆಂಧ್ರ ಪ್ರದೇಶ

ಮಧ್ಯ ಪ್ರದೇಶ

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮಧ್ಯಪ್ರದೇಶದ ಭೂಪಾಲ್ ನಲ್ಲಿ ನಿರ್ಮಿಸಿರುವ "ಶೌರ್ಯ ಸ್ಮಾರಕ"ವನ್ನು ಲೋಕಾರ್ಪಣೆ ಮಾಡಿದರು. ಈ ಸ್ಮಾರಕವನ್ನು ಮಧ್ಯಪ್ರದೇಶ ಸರ್ಕಾರ ದೇಶಕ್ಕಾಗಿ ಹುತ್ಮಾತರಾದ ಯೋಧರನ್ನು ಸ್ಮರಿಸಲು ನಿರ್ಮಿಸಿದೆ. ಸುಮಾರು 12,.67 ಎಕರೆ ಪ್ರದೇಶದಲ್ಲಿ ರೂ 41 ಕೋಟಿ ವೆಚ್ಚದಲ್ಲಿ ಇದನ್ನು ನಿರ್ಮಿಸಲಾಗಿದೆ. ದೇಶಕ್ಕಾಗಿ ವೀರಾವೇಶದಿಂದ ಪ್ರಾಣತೆತ್ತ ಸೈನಿಕರ ಬಗ್ಗೆ ಬೆಳಕು ಮತ್ತು ಧ್ವನಿ ಮಾಧ್ಯಮದ ಮೂಲಕ ಹೇಳುವ ವ್ಯವಸ್ಥೆಯನ್ನು ಈ ಸ್ಮಾರಕ ಹೊಂದಿದೆ.

136. ದೇಶದಲ್ಲಿ ಕೃಷಿ ಪ್ರದೀಪನ ಕೇಂದ್ರಗಳನ್ನು (Agro Irradiation Centre) ಸ್ಥಾಪಿಸುವ ಸಲುವಾಗಿ ಯಾವ ದೇಶದೊಂದಿಗೆ ಭಾರತ ಇತ್ತೀಚೆಗೆ ಸಹಿ ಹಾಕಿದೆ?

ಅ) ಜರ್ಮನಿ

ಆ) ರಷ್ಯಾ

ಇ) ಬ್ರೆಜಿಲ್

ಈ) ಇಸ್ರೇಲ್

ರಷ್ಯಾ

ಬೇಗ ಹಾಳಾಗುವ ಕೃಷಿ ಉತ್ಪನ್ನಗಳನ್ನು ವಿಕಿರಣ ಚಿಕಿತ್ಸೆಗೆ ಒಳಪಡಿಸಿ ದೀರ್ಘಕಾಲ ಶೇಖರಿಸಿಡಲು "ಕೃಷಿ ಪ್ರದೀಪನ ಕೇಂದ್ರ"ಗಳನ್ನು ಸ್ಥಾಪಿಸಲು ಭಾರತ ಸರ್ಕಾರ ರಷ್ಯಾದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಈ ಸಂಬಂಧ ರಷ್ಯಾದ ಯುನೈಟೆಡ್ ಇನೋವೇಷನ್ ಕಾರ್ಪೋರೇಷನ್ ಸಂಸ್ಥೆ ಹಾಗೂ ಹಿಂದೂಸ್ತಾನ್ ಆಗ್ರೋ ಸಹಕಾರ ಲಿ., ನಡುವೆ ಒಪ್ಪಂದ ಏರ್ಪಟ್ಟಿದೆ. ಒಪ್ಪಂದದಂತೆ 25 ಕೃಷಿ ಪ್ರದೀಪನ ಕೇಂದ್ರಗಳನ್ನು ದೇಶದಲ್ಲಿ ಸ್ಥಾಪಿಸಲಾಗುವುದು.

137. ಜಗತ್ತಿನ ಅತಿ ದೊಡ್ಡ ಉಡುಪು ರಫ್ತು ಮಾಡುವ ದೇಶ _____?

ಅ) ಭಾರತ


www.karunaduexams.com

ಆ) ಚೀನಾ

ಇ) ಅಮೆರಿಕ

ಈ) ರಷ್ಯಾ

ಚೀನಾ

ಚೀನಾ ವಿಶ್ವದ ಅತಿದೊಡ್ಡ ಉಡುಪು ರಫ್ತು ಮಾಡುವ ದೇಶವಾಗಿದೆ. ಜಗತ್ತಿನ ಒಟ್ಟು ಉಡುಪು ರಫ್ತು ಮಾರುಕಟ್ಟೆಯಲ್ಲಿ ಚೀನಾ ಶೇ 35-39 ಪಾಲನ್ನು ಹೊಂದಿದೆ. ಐರೋಪ್ಯ ಒಕ್ಕೂಟ ವಿಶ್ವದ ಅತಿ ದೊಡ್ಡ ಉಡುಪು ಆಮದು ಶಕ್ತಿಯಾಗಿದೆ.

138. ಮೊಟ್ಟ ಮೊದಲ "ಬ್ರಿಕ್ಸ್-ಬಿಮ್ಸ್ ಟೆಕ್ (BRICS-BIMSTEC)" ಶೃಂಗಸಭೆ ಇತ್ತೀಚೆಗೆ ಯಾವ ರಾಜ್ಯದಲ್ಲಿ ನಡೆಯಿತು?

ಅ) ಗೋವಾ

ಅ) ಕೇರಳ

ಇ) ಹರಿಯಾಣ

ಈ) ರಾಜಸ್ತಾನ

ಗೋವಾ

ಗೋವಾದಲ್ಲಿ ನಡೆದ 8ನೇ ಬ್ರಿಕ್ಸ್ ಶೃಂಗಸಭೆಯ ಜತೆಗೆ ಬ್ರಿಕ್ಸ್-ಬಿಮ್ಸ್ ಟೆಕ್ ಶೃಂಗಸಭೆ ಅಕ್ಟೋಬರ್ 15 ರಂದು ನಡೆಯಿತು. ಈ ಶೃಂಗಸಭೆಯಲ್ಲಿ ಬಿಮ್ಸ್ ಟೆಕ್ ರಾಷ್ಟ್ರಗಳ ಜೊತೆ ಆರ್ಥಿಕ ಮತ್ತು ತಾಂತ್ರಿಕ ಸಹಕಾರದ ಬಗ್ಗೆ ಚರ್ಚಿಸಲಾಯಿತು. ಬಿಮ್ಸ್ ಟೆಕ್ ರಾಷ್ಟ್ರಗಳು ಬಾಂಗ್ಲಾದೇಶ, ಭಾರತ, ಮ್ಯಾನ್ಮಾರ್, ಶ್ರೀಲಂಕಾ, ಥಾಯ್ಲೆಂಡ್, ಭೂತಾನ್ ಮತ್ತು ನೇಪಾಳ.

139. "ಡೈರೆಕ್ಟರ್ ಜನರಲ್ ಆಫ್ ಫಾರೀನ್ ಟ್ರೇಡ್" ನ ನೂತನ ಡೈರೆಕ್ಟರ್ ಜನರಲ್ ಆಗಿ ಯಾರು ನೇಮಕಗೊಂಡಿದ್ದಾರೆ?

ಅ) ಅನೂಪ್ ವಾಧ್ವನ್

ಆ) ಅಜಯ್ ಕುಮಾರ್ ಭಲ್ಲ

ಇ) ಸುಪ್ರೀತ್ ಸಿಂಗ್

ಈ) ಶಿವ ನಾರಾಯಣ್

ಅಜಯ್ ಕುಮಾರ್ ಭಲ್ಲ

ಹಿರಿಯ ಐಎಎಸ್ ಅಧಿಕಾರಿ ಅಜಯ್ ಕುಮಾರ್ ಭಲ್ಲ ಅವರನ್ನು ಡೈರೆಕ್ಟರ್ ಜನರಲ್ ಆಫ್ ಫಾರೀನ್ ಟ್ರೇಡ್ (Directorate General of Foreign Trade)ನ ನೂತನ ಡೈರೆಕ್ಟರ್ ಜನರಲ್ ಆಗಿ ನೇಮಕಮಾಡಲಾಗಿದೆ. ಅನೂಪ್ ವಾಧ್ವನ್ ಅವರಿಂದ ತೆರವಾಗಿದ್ದ ಸ್ಥಾನವನ್ನು ಭಲ್ಲ ರವರು ತುಂಬಲಿದ್ದಾರೆ. ಅನೂಪ್ ಅವರು ಕೇಂದ್ರ ವಾಣಿಜ್ಯ ಸಚಿವಾಲಯದ ಹೆಚ್ಚುವರಿ ನಿರ್ದೇಶಕರಾಗಿ ನೇಮಕಗೊಂಡ ಕಾರಣ ಈ ಹುದ್ದೆ ಖಾಲಿಯಾಗಿತ್ತು.

www.karunaduexams.com

140.ಭಾರತದಲ್ಲಿ ಈ ಕೆಳಗಿನ ಯಾರ ಸಂಬಳವನ್ನು ಆದಾಯ ತೆರಿಗೆಯಿಂದ ಹೊರಗಿಡಲಾಗಿದೆ?

ಅ) ಪ್ರಧಾನ ಮಂತ್ರಿ

ಅ) ರಾಷ್ಟ್ರಪತಿ

ಇ) ಲೋಕಸಭಾ ಸ್ಪೀಕರ್

ಈ) ಎಲ್ಲಾ ಸಚಿವರುಗಳು

ರಾಷ್ಟ್ರಪತಿ

141. ಪ್ರಸಿದ್ಧ ಮಾನವ ಹಕ್ಕು ಹೋರಾಟ ಸಂಘಟನೆಗಳು ನೀಡುವ ಮಾನವ ಹಕ್ಕು ಪುರಸ್ಕಾರಕ್ಕೆ ಪ್ರಸ್ತುಕ ಸಾಲಿನಲ್ಲಿ ಯಾರನ್ನು ಆಯ್ಕೆಮಾಡಲಾಗಿದೆ?

ಅ) ಅಂಗ್ ಸನ್ ಸೂಕಿ

ಆ) ಇಲ್ಹಾ ತೊಹ್ತಿ

ಇ) ಮೇಧಾ ಪಾಟ್ಕರ್

ಈ) ಮಲಾಲ ಯೂಸಫ್ ಝೈ

ಇಲ್ಹಾ ತೊಹ್ತಿ

ಅಮ್ನೆಸ್ಟಿ ಇಂಟರ್ನ್ಯಾಶನಲ್, ಹ್ಯೂಮನ್ ರೈಟ್ಸ್ ವಾಚ್ ಮುಂತಾದ ಎಂಟು ಮಾನವ ಹಕ್ಕು ಸಂಘಟನೆಗಳು ಸೇರಿ ನೀಡುವ ಮಾರ್ಟಿನ್ ಎನ್ನಲ್ಸ್ ಅವಾರ್ಡ್ ಎಂಬ ಮಾನವ ಹಕ್ಕು ಪ್ರಶಸ್ತಿಯನ್ನು ಇಲ್ಹಾಂ ತೊಹ್ತಿ ಅವರಿಗೆ ನೀಡಲಾಗಿದೆ. ಮುಸ್ಲಿಂ ವಿದ್ವಾಂಸ ಮತ್ತು ಅರ್ಥಶಾಸ್ತ್ರದ ಪ್ರೊಫೆಸರ್ ಆಗಿರುವ ಇಲ್ಹಾಂ ತೊಹ್ತಿ ಅವರನ್ನು ಚೀನಾದಲ್ಲಿ ಸೆರೆಮನೆಯಲ್ಲಿ ಇಡಲಾಗಿದೆ. ತೊಹ್ತಿ ಅವರ ಜೈಲುವಾಸದ ಅವಸ್ಥೆ ಆಮೂಲಕ ಅಂತಾರಾಷ್ಟ್ರೀಯವಾಗಿ ಗಮನಕ್ಕೆ ಬರುವಂತಾಗಿದೆ ಎಂದು ವರದಿಯೊಂದು ತಿಳಿಸಿದೆ. ಚೀನಾದ ಉಯುಗುರ್ ವಂಶೀಯರಾದ 46ವರ್ಷದ ತೋಹ್ತಿ ಬೀಜಿಂಗ್ನ ಮಿನ್ಸು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾಗಿದ್ದಾರೆ. ಚೀನದ ಪಶ್ಚಿಮ ಪ್ರಾಂತ ಸಿನ್ಜುಂಗ್ನ ಉಯುಗುರ್ ವಂಶೀಯರೊಂದಿಗೆ ಚೀನ ತೋರಿಸುತ್ತಿರುವ ತಾರತಮ್ಯದ ವಿರುದ್ಧ ಇವರು ಧ್ವನಿಯೆತ್ತಿದ್ದರು. ಇದಕ್ಕಾಗಿ ಅವರನ್ನು ಚೀನಾ ಬಂಧಿಸಿ ಜೈಲಿಗಟ್ಟಿದೆ. ಎರಡುದಿವಸ ವಿಚಾರಣೆ ನಡೆಸಿ ಚೀನಾವನ್ನು ಛಿದ್ರಗೊಳಿಸಲು ಶ್ರಮಿಸುತ್ತಿದ್ದಾರೆಂದು ಆರೋಪಿಸಿ 2014ರ ಸೆಪ್ಟಂಬರ್ನಲ್ಲಿ ಜೀವಾವಧಿ ಜೈಲು ವಾಸ ವಿಧಿಸಲಾಗಿದೆ.

142. ಈ ಕೆಳಗಿನ ಯಾರ ಜನ್ಮದಿನವನ್ನು "ರಾಷ್ಟ್ರೀಯ ಐಕ್ಯತಾ ದಿನ" ವೆಂದು ಆಚರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ?

ಅ) ದೀನ್ ದಯಾಳ್ ಉಪಾಧ್ಯಯ

www.karunaduexams.com

ಆ) ಸರ್ದಾರ್ ವಲ್ಲಭಬಾಯಿ ಪಟೇಲ್

ಇ) ಭಗತ್ ಸಿಂಗ್

ಈ) ಸುಭಾಷ್ ಚಂದ್ರ ಭೋಸ್

ಸರ್ದಾರ್ ವಲ್ಲಭಬಾಯಿ ಪಟೇಲ್

ಶದ ಪ್ರಥಮ ಗೃಹಮಂತ್ರಿ ಮತ್ತು ಉಕ್ಕಿನ ಮನುಷ್ಯ ಎಂದು ಬಿರುದು ಇರುವ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮದಿನವನ್ನು `ರಾಷ್ಟ್ರೀಯ ಐಕ್ಯತಾ ದಿನ'ವಾಗಿ ಆಚರಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಅ.31ರಂದು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 141ನೇ ಜನ್ಮದಿನವನ್ನು ದೇಶಾದ್ಯಂತ ಅದ್ಧೂರಿಯಾಗಿ ಆಚರಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ನಿರ್ಧರಿಸಿದೆ. ಪಟೇಲರ ಜನ್ಮದಿನದಂದು ಪ್ರಧಾನಿ ನರೇಂದ್ರ ಮೋದಿ ಅವರು ಪಟೇಲರ ಕುರಿತು ಡಿಜಿಟಲ್ ಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ. ಸದೃಢ ಭಾರತ ದೇಶವನ್ನಾಗಿ ಮಾಡುವಲ್ಲಿ ವಲ್ಲಭಭಾಯಿ ಪಟೇಲರು ಪ್ರಮುಖ ಪಾತ್ರ ವಹಿಸಿದ್ದರು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಮೇಲೆ ಸುಮಾರು 500ಕ್ಕೂ ಹೆಚ್ಚು ರಾಜಸಂಸ್ಥಾನಗಳನ್ನು ಭಾರತ ಒಕ್ಕೂಟ ವ್ಯವಸ್ಥೆಗೆ ಸೇರಿಸುವಲ್ಲಿ ಯಶಸ್ವಿಯಾಗಿದ್ದರು.

143. ಇತ್ತೀಚೆಗೆ ದೇಶದ ಖಾಸಗಿ ವಲಯದ ಎರಡನೇ ಅತಿ ದೊಡ್ಡ ತೈಲ ಕಂಪನಿಯನ್ನು ಖರೀದಿಸಿದ ರೋಸ್‌ನೆಫ್ಟ್ ಯಾವ ದೇಶದ ಸಂಸ್ಥೆಯಾಗಿದೆ?

ಅ) ರಷ್ಯಾ

ಆ) ಇರಾನ್

ಇ) ಇರಾಕ್

ಈ) ಅಮೆರಿಕ

ರಷ್ಯಾ

ರಷ್ಯಾದ ರೋಸ್‌ನೆಫ್ಟ್ ಮತ್ತು ಅದರ ಪಾಲುದಾರ ಕಂಪೆನಿಗಳು ಖಾಸಗಿ ವಲಯದಲ್ಲಿ ಭಾರತದ ಎರಡನೇ ಅತಿದೊಡ್ಡ ತೈಲ ಕಂಪೆನಿ ಎಸ್ಸಾರ್ ಆಯಿಲ್ ಅನ್ನು ಖರೀದಿ ಮಾಡಲು ಸಮ್ಮತಿಸಿವೆ. ಸಾಲವನ್ನೂ ಒಳಗೊಂಡು ಒಟ್ಟು ರೂ 87,100 ಕೋಟಿ ಮೊತ್ತದ ಸ್ವಾಧೀನ ಒಪ್ಪಂದ ನಡೆದಿದೆ. ರೋಸ್‌ನೆಫ್ಟ್ ಮತ್ತು ಇದರ ಪಾಲುದಾರಿಕೆ ಸಂಸ್ಥೆಗಳಾದ ನೆದರ್ಲ್ಯಾಂಡ್ ಮೂಲದ ಟ್ರಾಫಿಗುರ ಮತ್ತು ಖಾಸಗಿ ಬಂಡವಾಳ ಗ್ರೂಫ್ ಯುನೈಟೆಡ್ ಕ್ಯಾಪಿಟಲ್ ಪಾರ್ಟನರ್ಸ್ ಖರೀದಿಗೆ ಕೈಜೋಡಿಸಿವೆ. ಈ ಮೊತ್ತದಲ್ಲಿ ಎಸ್ಸಾರ್ ಆಯಿಲ್ ಹೊಂದಿರುವ ಒಟ್ಟು ರೂ 40,200 ಕೋಟಿ ಸಾಲವೂ ಸೇರಿಕೊಂಡಿದೆ.

144. "ಬೆಡಕ್ವಿಲಿನ್ ಮತ್ತು ಡೆಲಮನಿಡ್ (Bedaquiline and Delamanid)" ಔಷಧಿಗಳನ್ನು ಈ ರೋಗಕ್ಕೆ ನೀಡುವ ಔಷಧ ____?

ಅ) ಕ್ಷಯರೋಗ

ಆ) ಮಲೇರಿಯಾ

www.karunaduexams.com

ಇ) ಡೆಂಗ್ಯೂ

ಈ) ಎಚ್ಐವಿ/ಏಡ್ಸ್

ಕ್ಷಯರೋಗ

“ಬೆಡಕ್ವಿಲಿನ್ ಮತ್ತು ಡೆಲಮನಿಡ್” ಕ್ಷಯರೋಗ ಚಿಕಿತ್ಸೆಗೆ ವಿಶ್ವದಾದ್ಯಂತ ಬಳಸಲಾಗುತ್ತಿರುವ ಔಷಧಗಳಾಗಿವೆ.

145. ಅಂತಾರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಅಕ್ಟೋಬರ್ 13

ಆ) ಅಕ್ಟೋಬರ್ 14

ಇ) ಅಕ್ಟೋಬರ್ 15

ಈ) ಅಕ್ಟೋಬರ್ 16

ಅಕ್ಟೋಬರ್ 15

ಅಂತಾರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನವನ್ನು ಪ್ರತಿವರ್ಷ ಅಕ್ಟೋಬರ್ 15 ರಂದು ಆಚರಿಸಲಾಗುವುದು. ಗ್ರಾಮೀಣ ಮಹಿಳೆಯರ ಕೊಡುಗೆ ಮತ್ತು ಪಾತ್ರವನ್ನು ಗೌರವಿಸುವ ಸಲುವಾಗಿ ಅಂತಾರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನವನ್ನು ಆಚರಿಸಲಾಗುವುದು. ಗ್ರಾಮೀಣ ಮತ್ತು ಕೃಷಿ ಅಭಿವೃದ್ಧಿ, ಗ್ರಾಮೀಣ ಬಡತನ ನಿರ್ಮೂಲನೆ ಮತ್ತು ಆಹಾರ ಭದ್ರತೆ ಉತ್ತಮಪಡಿಸುವಲ್ಲಿ ಗ್ರಾಮೀಣ ಮಹಿಳೆಯರ ಪಾತ್ರ ಮತ್ತು ಕೊಡುಗೆಯನ್ನು ಎತ್ತಿಹಿಡಿಯುವುದು. 2016 ಅಂತಾರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನದ ಥೀಮ್: Climate is changing. Food and agriculture must too”.

146. “ಎಸ್-400” ಟ್ರಯಂಪ್ ಅನ್ನು ಖರೀದಿಸುವ ಒಪ್ಪಂದಕ್ಕೆ ಭಾರತ-ರಷ್ಯಾ ಇತ್ತೀಚೆಗೆ ಸಹಿ ಹಾಕಿವೆ. ಅಂದಹಾಗೆ “ಎಸ್-400” ಎಂಬುದು _____?

ಅ) ರಹಸ್ಯ ಯುದ್ದನೌಕೆ

ಆ) ವಾಯು ರಕ್ಷಣಾ ವ್ಯವಸ್ಥೆ

ಇ) ಜಲಂತರ್ಗಾಮಿ ಯುದ್ದನೌಕೆ

ಈ) ಅತ್ಯಾಧುನಿಕ ಹೆಲಿಕಾಪ್ಟರ್

ವಾಯು ರಕ್ಷಣಾ ವ್ಯವಸ್ಥೆ

ರಷ್ಯಾದಿಂದ ಐದು ಅತ್ಯಾಧುನಿಕ “ಎಸ್-400” ಟ್ರಯಂಪ್ ವಾಯು ರಕ್ಷಣಾ ವ್ಯವಸ್ಥೆಯನ್ನು ಖರೀದಿಸುವುದು ಸೇರಿದಂತೆ ಸುಮಾರು 39,000 ಕೋಟಿ ಮೊತ್ತದ ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ಒಪ್ಪಂದಕ್ಕೆ ಭಾರತ ಸಹಿಹಾಕಿದೆ. ಅಲ್ಲದೇ ನಾಲ್ಕು ರಹಸ್ಯ ಯುದ್ದನೌಕೆಗಳ ಅಭಿವೃದ್ಧಿಗೆ ಕೈಜೋಡಿಸುವುದು ಮತ್ತು ಮೇಕ್ ಇನ್ ಇಂಡಿಯಾ ಯೋಜನೆಯಡಿ ಕಮಾವ್ 226ಟಿ ಹೆಲಿಕಾಪ್ಟರ್ ಅನ್ನು ಭಾರತದಲ್ಲಿ ತಯಾರಿಸುವುದು ಒಪ್ಪಂದಲ್ಲಿ ಸೇರಿವೆ. ಈ ಸಂಬಂಧ ಉಭಯ

ದೇಶಗಳ ನಡುವೆ ಅಂತರ್ ಸರ್ಕಾರ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಎಸ್-400 ಅಥವಾ ಟ್ರಯಂಫ ಇದು ಜಗತ್ತಿನ ಅತ್ಯಾಧುನಿಕ ಭಾರಿ ಸಾಮರ್ಥ್ಯದ ದೂರಗಾಮಿ ವಾಯು ಪ್ರದೇಶ ರಕ್ಷಣಾ ವ್ಯವಸ್ಥೆ. ನಾಟೋ ಇದನ್ನು ಎಸ್ಎ-21 ಎಂತಲೂ ಕರೆಯುತ್ತಿದೆ. ಇದು ಎಸ್-300 ವಾಯು ರಕ್ಷಣಾ ವ್ಯವಸ್ಥೆಯ ಮುಂದುವರೆದ ತಂತ್ರಜ್ಞಾನವಾಗಿದ್ದು, ಅಲ್ಮಝ್-ಅಂಟೇ ಅಭಿವೃದ್ಧಿಪಡಿಸಿದೆ. 2007 ರಿಂದ ರಷ್ಯಾ ಮಿಲಿಟರಿ ಸೇವೆಯಲ್ಲಿ ಇದನ್ನು ಬಳಸಲಾಗುತ್ತಿದೆ.

147. ಬಂಗಾಳಕೊಲ್ಲಿ ರಾಷ್ಟ್ರಗಳ ಬಹುವಲಯ ತಾಂತ್ರಿಕ ಮತ್ತು ಆರ್ಥಿಕ ಸಹಕಾರ ಒಕ್ಕೂಟ (Bay of Bengal Initiative for Multi-Sectoral Technical and Economic Cooperation) ಕೇಂದ್ರ ಕಚೇರಿ ಎಲ್ಲಿದೆ?

ಅ) ಢಾಕಾ, ಬಾಂಗ್ಲದೇಶ

ಆ) ನವದೆಹಲಿ, ಭಾರತ

ಇ) ಥಿಂಪು, ಭೂತಾನ್

ಈ) ಕೊಲೊಂಬೊ, ಶ್ರೀಲಂಕಾ

ಢಾಕಾ, ಬಾಂಗ್ಲದೇಶ

ಬಂಗಾಳಕೊಲ್ಲಿ ರಾಷ್ಟ್ರಗಳ ಬಹುವಲಯ ತಾಂತ್ರಿಕ ಮತ್ತು ಆರ್ಥಿಕ ಸಹಕಾರ ಒಕ್ಕೂಟ ಅಥವಾ BIMSTEC ಕೇಂದ್ರ ಕಚೇರಿ ಢಾಕಾ, ಬಾಂಗ್ಲದೇಶದಲ್ಲಿದೆ. ದಕ್ಷಿಣ ಏಷ್ಯಾ ಮತ್ತು ದಕ್ಷಿಣ ಪೂರ್ವ ಏಷ್ಯಾ ರಾಷ್ಟ್ರಗಳ ನಡುವೆ ಪರಸ್ಪರ ತಾಂತ್ರಿಕ ಮತ್ತು ಆರ್ಥಿಕ ಸಹಕಾರ ಹಂಚಿಕೊಳ್ಳುವುದು ಈ ಒಕ್ಕೂಟದ ಧ್ಯೇಯವಾಗಿದೆ ಬಾಂಗ್ಲಾದೇಶ, ಭಾರತ, ಮ್ಯಾನ್ಮಾರ್, ಶ್ರೀಲಂಕಾ, ಥಾಯ್ಲೆಂಡ್, ಭೂತಾನ್ ಮತ್ತು ನೇಪಾಳ ಸದಸ್ಯ ರಾಷ್ಟ್ರಗಳಾಗಿವೆ.

148. 2016 ಬ್ರಿಕ್ಸ್ ಶೃಂಗಸಭೆಯ ಧ್ಯೇಯವಾಕ್ಯ _____?

ಅ) Building Responsive, Inclusive and Collective Solutions

ಆ) Inclusive Growth: Sustainable Solutions

ಇ) BRICS: Partnership for Development, Integration and Industrialisation

ಈ) BRICS Partnership – a Powerful Factor of Global Development

Building Responsive, Inclusive and Collective Solutions ಗೋವಾದಲ್ಲಿ ನಡೆದ 8ನೇ ಬ್ರಿಕ್ಸ್ ಶೃಂಗಸಭೆಯ ಧ್ಯೇಯವಾಕ್ಯವಾಗಿದೆ.

149. ಕೇರಳದ "ಮಾತೃಭೂಮಿ ಸಾಹಿತ್ಯ ಪ್ರಶಸ್ತಿ-2016"ಗೆ ಯಾರನ್ನು ಆಯ್ಕೆಮಾಡಲಾಗಿದೆ?

ಅ) ಎಂ ಮುಕುಂದನ್

ಆ) ಸರಹ ಜೋಸೆಫ್

ಇ) ಸಿ ರಾಧಕೃಷ್ಣನ್

www.karunaduexams.com

ಈ) ಪಿ ವಿ ಚಂದ್ರನ್

ಸಿ ರಾಧಕೃಷ್ಣನ್

ಖ್ಯಾತ ಮಲೆಯಾಳಂ ಸಾಹಿತಿ ಸಿ.ರಾಧಕೃಷ್ಣನ್ ಅವರನ್ನು ಮಾತೃಭೂಮಿ ಸಾಹಿತ್ಯ ಪ್ರಶಸ್ತಿ-2016ಗೆ ಆಯ್ಕೆಮಾಡಲಾಗಿದೆ. ಪ್ರಶಸ್ತಿಯು ರೂ 2 ಲಕ್ಷ ನಗದು, ಫಲಕ ಮತ್ತು ಮೂರ್ತಿಯನ್ನು ಒಳಗೊಂಡಿದೆ.

150. ಈ ಕೆಳಗಿನ ಯಾರಿಗೆ ಉಗಾಂಡ ದೇಶದ ಪ್ರತಿಷ್ಠಿತ ಪ್ರಶಸ್ತಿಯನ್ನು ಇತ್ತೀಚೆಗೆ ನೀಡಲಾಯಿತು?

ಅ) ರಮೇಶ್ ಪೊಖ್ರಿಯಲ್ ನಿಶಾಂಕ್

ಆ) ಪಿ ಚಿದಂಬರಂ

ಇ) ವೀರಪ್ಪ ಮೊಯ್ಲಿ

ಈ) ಚೇತನ್ ಭಗತ್

ರಮೇಶ್ ಪೊಖ್ರಿಯಲ್ ನಿಶಾಂಕ್

ಉತ್ತರಖಂಡ ಮಾಜಿ ಮುಖ್ಯಮಂತ್ರಿ ರಮೇಶ್ ಪೊಖ್ರಿಯಲ್ ನಿಶಾಂಕ್ ಅವರಿಗೆ ಉಗಾಂಡ ದೇಶದ ಪ್ರಶಸ್ತಿಯನ್ನು ನೀಡಲಾಗಿದೆ. ಸಾಹಿತ್ಯದ ಮೂಲಕ ಮಾನವೀಯ ಮೌಲ್ಯಗಳನ್ನು ಪ್ರೋತ್ಸಾಹಿಸಿದಕ್ಕೆ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಪ್ರಸ್ತುತ ರಮೇಶ್ ಅವರು 16ನೇ ಲೋಕಸಭಾದ ಸದಸ್ಯರಾಗಿದ್ದಾರೆ.

151. ಇತ್ತೀಚೆಗೆ ಸುದ್ದಿಯಲ್ಲಿದ್ದ "ಕಿಗಾಲಿ ಒಪ್ಪಂದ (Kigali Agreement)" ಇದಕ್ಕೆ ಸಂಬಂಧಿಸಿದೆ _____?

ಅ) ಭಯೋತ್ಪಾದನೆ ನಿಗ್ರಹಿಸುವುದು

ಆ) ಹಸಿರು ಮನೆ ಅನಿಲ ತಗ್ಗಿಸುವುದು

ಇ) ಪರಮಾಣು ಅಣ್ವಸ್ತ್ರ ವಿರೋಧಿಸುವುದು

ಈ) ವಲಸೆ ಹಕ್ಕಿಗಳ ಸಂರಕ್ಷಣೆ

ಹಸಿರು ಮನೆ ಅನಿಲ ತಗ್ಗಿಸುವುದು

ಕಿಗಾಲಿ ಒಪ್ಪಂದ ಇಂಗಾಲದ ಡೈಆಕ್ಸೈಡ್ಗಿಂತಲೂ ಜಾಗತಿಕ ತಾಪಮಾನ ಹೆಚ್ಚಳದಲ್ಲಿ ಸಾವಿರ ಪಟ್ಟು ಅಧಿಕ ಪ್ರಭಾವ ಬೀರುವ ಹೈಡ್ರೋಫ್ಲೂರೋಕಾರ್ಬನ್ (ಎಚ್ಎಫ್ಸಿ) ನಿಯಂತ್ರಿಸಲು ವಿಶ್ವದ 197 ರಾಷ್ಟ್ರಗಳು ಸಹಿ ಹಾಕಿರುವ ಒಪ್ಪಂದವಾಗಿದೆ. ಈ ಐತಿಹಾಸಿಕ ಒಪ್ಪಂದಕ್ಕೆ ರುವಾಂಡಾದ ಕಿಗಾಲಿಯಲ್ಲಿ ಸಹಿ ಹಾಕಿದ ಕಾರಣ ಕಿಗಾಲಿ ಒಪ್ಪಂದ ಎನ್ನಲಾಗಿದೆ. ಈ ಒಪ್ಪಂದವು ಮಾಂಟ್ರಿಯಲ್ ಪ್ರೊಟೊಕಲ್ ಅನ್ನು ತಿದ್ದುಪಡಿ ತರುವುದಾಗಿದೆ. ಜಾಗತಿಕ ತಾಪಮಾನ ಹೆಚ್ಚಳಕ್ಕೆ ಕಾರಣವಾಗುವ ಪ್ರಭಾವಯುತ ಹಸಿರುಮನೆ ಅನಿಲ ಉತ್ಪಾದನೆ ನಿಯಂತ್ರಣ ಹಾಗೂ 2050ರ ವೇಳೆಗೆ 0.5 ಸೆಲ್ಸಿಯಸ್ ಉಷ್ಣಾಂಶ ಏರಿಕೆಯನ್ನು ನಿಯಂತ್ರಿಸುವ ಒಪ್ಪಂದಕ್ಕೆ 200 ರಾಷ್ಟ್ರಗಳು ಒಮ್ಮತ ಸೂಚಿಸಿವೆ. ಗೃಹ ಮತ್ತು ಕಾರುಗಳ ಹವಾನಿಯಂತ್ರಕಗಳಲ್ಲಿ ಶೈತ್ಯಕಾರಿಯಾಗಿ ಹೈಡ್ರೋಫ್ಲೂರೋಕಾರ್ಬನ್ (ಎಚ್ಎಫ್ಸಿ) ಅನಿಲ ಹೆಚ್ಚು

www.karunaduexams.com

ಬಳಕೆಯಾಗುತ್ತಿದೆ. ಜಾಗತಿಕ ತಾಪಮಾನ ಹೆಚ್ಚಳದಲ್ಲಿ ಇದರ ಪ್ರಭಾವ ಅಧಿಕವಾಗಿದ್ದು, 2045ರ ವೇಳೆಗೆ ಶೇ.85ರಷ್ಟು ಎಚ್ಎಫ್ಸಿ ಬಳಕೆ ತಗ್ಗಿಸುವ ನಿಟ್ಟಿನಲ್ಲಿ ಭಾರತ, ಚೀನಾ, ಅಮೆರಿಕ ಹಾಗೂ ಯುರೋಪ್ ಶುಕ್ರವಾರ ಸಮ್ಮತಿಸಿದ್ದವು.

152. ಇತ್ತೀಚೆಗೆ ಸರಸ್ವತಿ ನದಿ ಅಸ್ತಿತ್ವದ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿದ ಸಮಿತಿ ಯಾವುದು?

ಅ) ಆರ್ ಮಾಥೂರ್ ಸಮಿತಿ

ಆ) ಸುದರ್ಶನ್ ನಾಯ್ಕ್ ಸಮಿತಿ

ಇ) ಕೆ.ಎಸ್.ವಾಲ್ದೀಯ ಸಮಿತಿ

ಈ) ಮಧುಕರ್ ಗುಪ್ತಾ ಸಮಿತಿ

ಕೆ.ಎಸ್.ವಾಲ್ದೀಯ ಸಮಿತಿ

ಇದುವರೆಗೂ ಪುರಾಣಗಳಲ್ಲಿ ಉಲ್ಲೇಖಿತವಾಗಿದ್ದ ಸರಸ್ವತಿ ನದಿ ನಿಜವಾಗಲೂ ಅಸ್ತಿತ್ವದಲ್ಲಿತ್ತು ಎಂದು ಕೆ ಎಸ್ ವಾಲ್ದೀಯ ನೇತೃತ್ವದ ಸಮಿತಿ ತನ್ನ ವರದಿಯನ್ನು ಕೇಂದ್ರ ಜಲಸಂಪನ್ಮೂಲ ಸಚಿವಾಲಯಕ್ಕೆ ಸಲ್ಲಿಸಿದೆ. ಭೂಗೋಳಶಾಸ್ತ್ರಜ್ಞರು, ಪುರಾತತ್ತ್ವಜ್ಞರು ಮತ್ತು ಹೈಡ್ರಾಲಾಜಿಸ್ಟ್ ಗಳನ್ನು ಒಳಗೊಂಡಿದ ಸಮಿತಿಯು ಸರಸ್ವತಿ ನದಿ ಮೂಲವನ್ನು ಪತ್ತೆಹಚ್ಚಿರುವುದಾಗಿ ತಿಳಿಸಿದ್ದಾರೆ. ಸರಸ್ವತಿ ನದಿಯನ್ನು ಕಾಲ್ಪನಿಕ ನದಿಯೆಂದೇ ಪರಿಗಣಿಸಲಾಗಿತ್ತು, ಪ್ರಾಚೀನ ಹಿಂದೂ ಪುರಾಣಗಳಲ್ಲಿ, ಋಗ್ವೇದ, ಮಹಾಭಾರತ ಮತ್ತು ರಾಮಾಯಣದಲ್ಲಿ ಈ ನದಿಯ ಬಗ್ಗೆ ಪ್ರಸ್ತಾಪಿಸಲಾಗಿದೆ.

153. ಈ ಕೆಳಗಿನ ಉಪಕರಣಗಳನ್ನು ಗಮಿನಿಸಿ:

I) ರೆಫ್ರಿಜರೇಟರ್

II) ಹವಾನಿಯಂತ್ರಕಗಳು

III) ಏರ್ ಸ್ಪ್ರೇ

ಈ ಮೇಲಿನ ಯಾವುಗಳಲ್ಲಿ ಹೈಡ್ರೋಫ್ಲೋರೋಕಾರ್ಬನ್ (HFC)ಯನ್ನು ಬಳಸಲಾಗುತ್ತದೆ?

ಅ) I & II

ಆ) II & III

ಇ) I & III

ಈ) I, II & III

I, II & III

ಹೈಡ್ರೋಫ್ಲೋರೋಕಾರ್ಬನ್ (HFC) ಅತ್ಯಂತ ಪ್ರಬಲ ಹಸಿರು ಮನೆ ಅನಿಲವಾಗಿದೆ. ಇಂಗಾಲದ ಡೈಆಕ್ಸೈಡ್ಗಿಂತಲೂ 14,800 ಕ್ಕಿಂತ ಹೆಚ್ಚು ಪಟ್ಟು ಜಾಗತಿಕ ತಾಪಮಾನ ಪ್ರಭಾವ ಬೀರುವ ಹೈಡ್ರೋಫ್ಲೂರೋಕಾರ್ಬನ್ ಸಾಮರ್ಥ್ಯವನ್ನು



www.karunaduexams.com

ಹೊಂದಿದೆ. ಹೈಡ್ರೋಫ್ಲೋರೋಕಾರ್ಬನ್ ಅನ್ನು ರೆಫ್ರಿಜರೇಟರ್, ಗೃಹ ಮತ್ತು ವಾಹನ ಹವಾನಿಯಂತ್ರಕಗಳು ಮತ್ತು ಏರ್ ಸ್ಪ್ರೇನಲ್ಲಿ ಅಧಿಕವಾಗಿ ಬಳಸಲಾಗುತ್ತಿದೆ.

154. ಮೊದಲ ಆವೃತಿಯ 17 ವರ್ಷದೊಳಗಿನವರ ಬ್ರಿಕ್ಸ್ ಫುಟ್ಬಾಲ್ ಟೂರ್ನಮೆಂಟ್ನಲ್ಲಿ ಪ್ರಶಸ್ತಿ ಗೆದ್ದ ತಂಡ ಯಾವುದು?

ಅ) ಬ್ರೆಝಿಲ್

ಆ) ದಕ್ಷಿಣ ಆಫ್ರಿಕ

ಇ) ಚೀನಾ

ಈ) ಭಾರತ

ಬ್ರೆಝಿಲ್

ಮೊದಲ ಆವೃತ್ತಿಯ ಬ್ರಿಕ್ಸ್ ಅಂಡರ್-17 ಫುಟ್ಬಾಲ್ ಟೂರ್ನಮೆಂಟ್ನ ಫೈನಲ್ನಲ್ಲಿ ದಕ್ಷಿಣ ಆಫ್ರಿಕ ತಂಡವನ್ನು 5-1 ಅಂತರದ ಗೋಲುಗಳಿಂದ ಮಣಿಸಿದ ಬ್ರೆಝಿಲ್ ತಂಡ ಪ್ರಶಸ್ತಿ ಎತ್ತಿ ಹಿಡಿದಿದೆ. ಗೋವಾದ ನೆಹರೂ ಸ್ಟೇಡಿಯಂನಲ್ಲಿ ನಡೆದ ಪ್ರಶಸ್ತಿ ಸುತ್ತಿನ ಪಂದ್ಯದುದ್ದಕ್ಕೂ ಬ್ರೆಝಿಲ್ ಸಂಪೂರ್ಣ ಪ್ರಾಬಲ್ಯ ಮೆರೆಯಿತು. ಬ್ರೆಝಿಲ್ನ ಪರ ಪೌಲೊ ಹೆನ್ರಿಕ್(24ನೆ ನಿಮಿಷ), ವಿನಿಕ್ಯೂಸ್ ಜೋಸ್ ಪೈಕ್ಸೊ(35ನೆ ನಿ.), ವಿಕ್ಟರ್ ಗ್ಯಾಬ್ರಿಯಲ್(40ನೆ, 61ನೆ ನಿ.) ಹಾಗೂ ಅಲನ್ ಡಿಸೋಜಾ(90+1 ನಿ.) ಗೋಲು ಬಾರಿಸಿದರು.ದಕ್ಷಿಣ ಆಫ್ರಿಕದ ಪರ ಸ್ಮೈಸೊ ಬೊಫೆಲಾ 89ನೆ ನಿಮಿಷದಲ್ಲಿ ಏಕೈಕ ಗೋಲು ಬಾರಿಸಿದರು.

155. "ದಿ ಸಿಕ್ರೇಟ್ ಡೈರಿ ಆಫ್ ಕಸ್ತೂರಬಾ (The Secret Dairy of Kasturba)" ಪುಸ್ತಕದ ಲೇಖಕರು ____?

ಅ) ನೀಲಿಮಾ ದಾಲ್ಮಿಯಾ ಆಧಾರ್

ಆ) ಹೃಷಿಕಿರಣ್ ಸಿಂಗ್

ಇ) ಭಗವತಿ ಚಂದ್ರನ್

ಈ) ಹರಿಭಗತ್ ದಾಲ್ಮಿಯಾ

ನೀಲಿಮಾ ದಾಲ್ಮಿಯಾ ಆಧಾರ್

"ದಿ ಸಿಕ್ರೇಟ್ ಡೈರಿ ಆಫ್ ಕಸ್ತೂರಬಾ" ಪುಸ್ತಕವನ್ನು ನೀಲಿಮಾ ದಾಲ್ಮಿಯಾ ಆಧಾರ್ ಅವರು ಬರೆದಿದ್ದಾರೆ. ಪತ್ನಿ ಕಸ್ತೂರಬಾ ಅವರ ನೆರವಿಲ್ಲದೆ ಮಹಾತ್ಮ ಗಾಂಧಿ "ಮಹಾತ್ಮ" ಎನಿಸಲು ಸಾಧ್ಯವಾಗುತ್ತಿರಲಿಲ್ಲ ಎಂದು ನೀಲಿಮಾ ಪುಸ್ತಕದಲ್ಲಿ ಹೇಳಿದ್ದಾರೆ. ಪುಸ್ತಕವನ್ನು ಅಕ್ಟೋಬರ್ 2 ರಂದು ಭಾರತದಲ್ಲಿ ಬಿಡುಗಡೆ ಮಾಡಲಾಗಿದೆ.

156. "2016 ವಿಶ್ವ ಆಹಾರ ದಿನ (World Food Day)" ಧ್ಯೇಯ ವಾಕ್ಯ ಯಾವುದು?

ಅ) Climate is changing. Food and agriculture must too

ಆ) No More Food Waste

ಇ) Save Food and Save Environment

ಈ) Feeding the world, caring for the earth

Climate is changing. Food and agriculture must too

ಪ್ರತೀ ವರ್ಷ ಅಕ್ಟೋಬರ್ 16 ರಂದು ವಿಶ್ವ ಆಹಾರ ದಿನವೆಂದು ಆಚರಿಸಲಾಗುತ್ತಿದೆ. 1945 ರಲ್ಲಿ ವಿಶ್ವಸಂಸ್ಥೆಯು ಈ ದಿನವನ್ನು ಕೃಷಿ ಸಂಸ್ಥೆ ಸ್ಥಾಪನೆಯ ದಿನಾಂಕದ ಗೌರವಾರ್ಥವಾಗಿ ಆಹಾರ ದಿನವನ್ನಾಗಿ ಆಚರಿಸಲು ನಿರ್ಧರಿಸಿತು. ಈ ದಿನವನ್ನು ಜಗತ್ತಿನ ಜನರು ಹಸಿವಿನ ವಿರುದ್ಧ ಕೆಲಸ ಮಾಡಲು ಮತ್ತು ಅದರ ನಿರ್ಮೂಲನೆಗಾಗಿ ಕೆಲಸ ಮಾಡಲು ಒಗ್ಗೂಡುವ ಸಲುವಾಗಿ ಆಚರಣೆಗೆ ತರಲಾಗಿದೆ. Climate is changing. Food and agriculture must too ಇದು ಈ ವರ್ಷದ ಧ್ಯೇಯವಾಕ್ಯ.

157. "2016 ಇಟಿ ಪನಚೆ ಟ್ರೆಂಡ್ಸಸೆಟ್ಟರ್ ಪ್ರಶಸ್ತಿ (ET Panache Trendsetter Award)" ಪಡೆದ ಬಾಲಿವುಡ್ ನಟಿ ಯಾರು?

ಅ) ಸೋನಂ ಕಪೂರ್

ಆ) ಪ್ರಿಯಾಂಕ ಚೋಪ್ರಾ

ಇ) ಐಶ್ವರ್ಯಾ ರೈ

ಈ) ದೀಪಿಕ ಪಡುಕೋಣೆ

ಸೋನಂ ಕಪೂರ್

ಬಾಲಿವುಡ್ ನಟಿ ಸೋನಂ ಕಪೂರ್ ಅವರಿಗೆ 2016 ಇಟಿ ಪನಚೆ ಟ್ರೆಂಡ್ಸಸೆಟ್ಟರ್ ಪ್ರಶಸ್ತಿಯನ್ನು ನೀಡಲಾಗಿದೆ. ಇವರ ಜೊತೆಗೆ ದೀಪ ಕರ್ಮಕರ್, ದೇವೆಂದ್ರ ಝೂಜಹರಿಯ, ಅನನ್ಯ ಬಿರ್ಲಾ, ವಿಜಯ್ ಶೇಖರ್ ಶರ್ಮಾ ಅವರಿಗೂ ಈ ಪ್ರಶಸ್ತಿಯನ್ನು ನೀಡಲಾಗಿದೆ. ತಮ್ಮ ಜೀವನ ಕಥೆಗಳ ಮೂಲಕ ಇತರರಿಗೆ ಸ್ಪೂರ್ತಿಯಾಗುವ ಉದ್ಯಮಿಗಳು, ಕ್ರೀಡಾಪಟುಗಳು ಮತ್ತು ಸಿನಿಮಾ ತಾರೆಯರಿಗೆ ಈ ಪ್ರಶಸ್ತಿಯನ್ನು ಕೊಡಲಾಗುತ್ತದೆ.

158. 2016 ಶಾಂಘೈ ಮಾಸ್ಟರ್ಸ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ನಲ್ಲಿ ಪ್ರಶಸ್ತಿ ಗೆದ್ದವರು ಯಾರು?

ಅ) ಆಯಂಡಿ ಮರ್ರೆ

ಆ) ರೋಜರ್ ಫೆಡರರ್

ಇ) ರಾಬರ್ಟೊ ಬಾಟಿಸ್ಟ

ಈ) ನೊವಾಕ್ ಜೊಕೊಕೋವಿಕ್

ಆಯಂಡಿ ಮರ್ರೆ

ಇಂಗ್ಲೆಂಡ್ನ ಆಯಂಡಿ ಮರ್ರೆ ಅವರು ಶಾಂಘೈ ಮಾಸ್ಟರ್ಸ್ ಟೆನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಪುರುಷರ ಸಿಂಗಲ್ಸ್ ಫೈನಲ್ನಲ್ಲಿ ಮರ್ರೆ 7-6(7-1), 6-1 ನೇರ ಸೆಟ್ಗಳಿಂದ ಸ್ಪೇನ್ನ ರಾಬರ್ಟೊ ಬಾಟಿಸ್ಟ ವಿರುದ್ಧ ಜಯ ಸಾಧಿಸಿದರು. ಇದು ಮರ್ರೆಗೆ 3ನೇ ಶಾಂಘೈ ಪ್ರಶಸ್ತಿಯಾಗಿದೆ. ಇದಕ್ಕೂ ಮುನ್ನ 2010 ಮತ್ತು 2011 ರಲ್ಲಿ ಸತತವಾಗಿ ಚಾಂಪಿಯನ್ ಆಗಿದ್ದರು.

www.karunaduexams.com

159. ಇತ್ತೀಚೆಗೆ ಯಾವ ದೇಶದ ಕ್ರಿಕೆಟ್ ತಂಡ 900 ಏಕದಿನ ಪಂದ್ಯವಾಡಿದ ಜಗತ್ತಿನ ಮೊದಲ ತಂಡ ಎನಿಸಿದೆ?

ಅ) ಆಸ್ಟ್ರೇಲಿಯಾ

ಆ) ಭಾರತ

ಇ) ಇಂಗ್ಲೆಂಡ್

ಈ) ದಕ್ಷಿಣ ಆಫ್ರಿಕ

ಭಾರತ

ಭಾರತ ತಂಡ 900 ಏಕದಿನ ಪಂದ್ಯವಾಡಿದ ಕ್ರಿಕೆಟ್ ಜಗತ್ತಿನ ಮೊದಲ ದೇಶವೆಂಬ ದಾಖಲೆ ಬರೆಯಿತು. ಧರ್ಮಶಾಲಾದಲ್ಲಿ ನ್ಯೂಜಿಲ್ಯಾಂಡ್ ತಂಡದ ವಿರುದ್ಧ ಭಾರತ ಈ ಐತಿಹಾಸಿಕ ಪಂದ್ಯವನ್ನು ಆಡಿತು. ಭಾರತ ತಂಡ 1974ರ ಜುಲೈ 13ರಂದು ಲೀಡ್ಸ್‌ನಲ್ಲಿ ಮೊಟ್ಟಮೊದಲ ಏಕದಿನ ಪಂದ್ಯವಾಡಿತ್ತು. ಅಜಿತ್ ವಾಡೇಕರ್ ನಾಯಕತ್ವದ ಭಾರತ ತಂಡ ಕ್ರಿಕೆಟ್ ಜನಕ ಇಂಗ್ಲೆಂಡ್ ವಿರುದ್ಧ 4 ವಿಕೆಟ್‌ಗಳಿಂದ ಸೋಲನುಭವಿಸಿತ್ತು. ಇದು ವಿಶ್ವ ಏಕದಿನ ಕ್ರಿಕೆಟ್ ಇತಿಹಾಸದ 12ನೇ ಪಂದ್ಯವಾಗಿತ್ತು.

160. 44ನೇ ಚಾಪ್ಲಿನ್ ವಾರ್ಷಿಕ ಪ್ರಶಸ್ತಿಗೆ (44th annual Chaplin Award) ಆಯ್ಕೆ ಆಗಿರುವ ನಟ ಯಾರು?

ಅ) ರಾಬರ್ಟ್ ಡಿ ನಿರೊ

ಆ) ಮೊರ್ಗನ್ ಫ್ರೀಮನ್

ಇ) ರಾಬರ್ಟ್ ಡೌನಿ ಜೂನಿಯರ್

ಈ) ವಿನ್ ಡಿಸೇಲ್

ರಾಬರ್ಟ್ ಡಿ ನಿರೊ

ಪ್ರಖ್ಯಾತ ಹಾಲಿವುಡ್ ನಟ ಮತ್ತು ನಿರ್ಮಾಪಕ ರಾಬರ್ಟ್ ಡಿ ನಿರೊ ಅವರನ್ನು 44ನೇ ಚಾಪ್ಲಿನ್ ವಾರ್ಷಿಕ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ನಾಲ್ಕು ದಶಕಗಳ ಕಾಲ ಸಿನಿಮಾ ಕ್ಷೇತ್ರಕ್ಕೆ ನೀಡಿರುವ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. "ಮೀನ್ ಸ್ಟ್ರೀಟ್ಸ್", "ರೇಜಿಂಗ್ ಬುಲ್ಸ್" ಮತ್ತು "ದಿ ಗಾಡ್ ಫಾದರ್ ಪಾರ್ಟ್ II" ರಾಬರ್ಟ್ ಡಿ ನಿರೊ ಅವರ ಪ್ರಮುಖ ಸಿನಿಮಾಗಳು.

161. "104ನೇ ಭಾರತೀಯ ಸೈನ್ಸ್ ಕಾಂಗ್ರೆಸ್ (Indian Science Congress)" ಜನವರಿ, 2017 ರಲ್ಲಿ ಯಾವ ರಾಜ್ಯದಲ್ಲಿ ನಡೆಯಲಿದೆ?

ಅ) ತಮಿಳುನಾಡು

ಆ) ಆಂಧ್ರ ಪ್ರದೇಶ

ಇ) ತೆಲಂಗಣ

www.karunaduexams.com

ಈ) ಮಹಾರಾಷ್ಟ್ರ

ಆಂಧ್ರ ಪ್ರದೇಶ

ಆಂಧ್ರ ಪ್ರದೇಶದ ಎಸ್.ವಿ ವಿಶ್ವವಿದ್ಯಾಲಯ, ತಿರುಪತಿಯಲ್ಲಿ "104ನೇ ಭಾರತೀಯ ಸೈನ್ಸ್ ಕಾಂಗ್ರೆಸ್" ಜನವರಿ 3 ರಿಂದ 7 ರವರೆಗೆ ನಡೆಯಲಿದೆ. ಅಮೆರಿಕ, ಜಪಾನ್, ಫ್ರಾನ್ಸ್, ಇಸ್ರೇಲ್ ಮತ್ತು ಬಾಂಗ್ಲದೇಶದಿಂದ ಒಂಬತ್ತು ನೊಬೆಲ್ ಪುರಸ್ಕೃತ ವಿಜ್ಞಾನಿಗಳು ಈ ಕಾಂಗ್ರೆಸ್ ನಲ್ಲಿ ಭಾಗವಹಿಸಲಿದ್ದಾರೆ.

162. "ಅಂತಾರಾಷ್ಟ್ರೀಯ ಬಡತನ ನಿರ್ಮೂಲನ ದಿನ"ವನ್ನು ಈ ದಿನದಂದು ಆಚರಿಸಲಾಗುವುದು ______?

ಅ) ಅಕ್ಟೋಬರ್ 15

ಆ) ಅಕ್ಟೋಬರ್ 16

ಇ) ಅಕ್ಟೋಬರ್ 17

ಈ) ಅಕ್ಟೋಬರ್ 18

ಅಕ್ಟೋಬರ್ 17

ಅಂತಾರಾಷ್ಟ್ರೀಯ ಬಡತನ ನಿರ್ಮೂಲನ ದಿನವನ್ನು ಅಕ್ಟೋಬರ್ 17ರಂದು ಪ್ರತಿ ವರ್ಷ ಆಚರಿಸಲಾಗುವುದು. ಜಾಗತಿಕ ಮಟ್ಟದಲ್ಲಿ ಬಡತನ ನಿರ್ಮೂಲನೆ ಮಾಡಲು ಕರೆ ನೀಡುವುದು ಈ ದಿನದ ಉದ್ದೇಶ. Moving from humiliation and exclusion to participation: Ending poverty in all its forms" ಈ ವರ್ಷದ ಬಡತನ ನಿರ್ಮೂಲನ ದಿನದ ಥೀಮ್.

163. 2016 ಚೈನೀಸ್ ತೈಪೆ ಮಾಸ್ಟರ್ಸ್ ಟೂರ್ನಿಯ ಪುರುಷರ ಸಿಂಗಲ್ಸ್ ನಲ್ಲಿ ಪ್ರಶಸ್ತಿ ಗೆದ್ದ ಭಾರತೀಯ ಆಟಗಾರ ಯಾರು?

ಅ) ಸೌರಭ್ ವರ್ಮ

ಆ) ಸುಶೀಲ್ ಶರ್ಮ

ಇ) ಅಶೋಕ್ ಘೋಷಲ್

ಈ) ಸಮೀರ್ ವರ್ಮ

ಸೌರಭ್ ವರ್ಮ

ಭಾರತದ ಉದಯೋನ್ಮುಖ ಆಟಗಾರ ಸೌರಭ್ ವರ್ಮಾ, ಚೈನೀಸ್ ತೈಪೆ ಗ್ರ್ಯಾನ್ ಪ್ರೀ ಬ್ಯಾಡ್ಮಿಂಟನ್ ಪಂದ್ಯಾವಳಿಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಚಾಂಪಿಯನ್ ಪ್ರಶಸ್ತಿ ಪಡೆದಿದ್ದಾರೆ. ಫೈನಲ್ ಪಂದ್ಯದಲ್ಲಿ ಭಾರತದ ಸೌರಭ್ 12-10, 12-10, 3-3 ಗೇಮ್ಗಳಿಂದ ಮಲೇಷ್ಯಾದ ಡರೇನ್ ಲೀವ್ ಎದುರು ಗೆಲುವು ಸಾಸಿದರು.

164. ಇತ್ತೀಚೆಗೆ "ಶೆಂಝೌ-11 (Shenzhou-11)" ಮಾನವ ಸಹಿತ ಬಾಹ್ಯಕಾಶ ನೌಕೆಯನ್ನು ಯಶಸ್ವಿಯಾಗಿ ಉಡಾವಣೆ ಮಾಡಿದ ದೇಶ ಯಾವುದು?

www.karunaduexams.com

ಅ) ಅಮೆರಿಕ

ಆ) ಚೀನಾ

ಇ) ಜಪಾನ್

ಈ) ರಷ್ಯಾ

ಚೀನಾ

ಇಬ್ಬರು ಖಗೋಳಯಾತ್ರಿಗಳನ್ನು ಹೊಂದಿರುವ ಅಂತರಿಕ್ಷ ನೌಕೆ "ಶೆಂಝೌ-11" ಅನ್ನು ಚೀನಾ ಯಶಸ್ವಿಯಾಗಿ ಉಡಾವಣೆ ಮಾಡುವ ಮೂಲಕ ಬಾಹ್ಯಾಕಾಶ ಕ್ಷೇತ್ರದಲ್ಲಿ ಮತ್ತೊಂದು ಮಹತ್ವದ ಸಾಧನೆ ಮಾಡಿದೆ. ವಾಯುವ್ಯ ಚೀನಾದ ಗೋಬಿ ಮರುಭೂಮಿ ಬಳಿ ಜಿಯುಕ್ವಾನ್ ಉಪಗ್ರಹ ಉಡಾವಣಾ ಕೇಂದ್ರದಿಂದ 50 ವರ್ಷದ ಜಿಂಗ್ ಹೈಪೆಂಗ್ ಮತ್ತು 37ರ ಹರೆಯದ ಚೆನ್ ಡಾಂಗ್ ಅವರಿದ್ದ ಶೆಂಝೌ-11 (ಚೀನಿ ಭಾಷೆಯಲ್ಲಿ ಸ್ವರ್ಗ ನೌಕೆ) ಗಗನನೌಕೆಯನ್ನು ಯಶಸ್ವಿಯಾಗಿ ಗಗನಕ್ಕೆ ಚಿಮ್ಮಿಸಲಾಯಿತು.ಉಡಾವಣೆ ನಂತರ ಲಾಂಗ್ ಮಾರ್ಚ್-2ಎಫ್ ಕ್ಯಾರಿಯರ್ ರಾಕೆಟ್‌ನಿಂದ ಈ ಗಗನನೌಕೆ ಅಂತರಿಕ್ಷ ಕಕ್ಷೆಗೆ ಸೇರ್ಪಡೆಯಾಗಲಿದೆ.

165. ಅಂತಾರಾಷ್ಟ್ರೀಯ ಆಹಾರ ಸಂರಕ್ಷಣೆ ಒಕ್ಕೂಟದ (International Association Of Food Protection (IAFP)) ಯುವ ವಿಜ್ಞಾನಿ ಪ್ರಶಸ್ತಿಯನ್ನು ಪಡೆದುಕೊಂಡಿರುವ ಭಾರತೀಯ ಮೂಲದ ವಿಜ್ಞಾನಿ ಯಾರು?

ಅ) ಕೀರ್ತಿರಾಜ್ ಕುಂಡ್ಲಿಕ್ ಗಾಯಕ್ವಾಡ್

ಆ) ಅಶಿಶ್ ಕುಮಾರ್ ಜೊಂಡಲೆ

ಇ) ಅಶೋಕ್ ಶಿಂಧೆ

ಈ) ಮಹಂತೇಶ್ ಪಾಟೀಲ್

ಕೀರ್ತಿರಾಜ್ ಕುಂಡ್ಲಿಕ್ ಗಾಯಕ್ವಾಡ್

ಭಾರತೀಯ ಮೂಲದ ಯುವ ವಿಜ್ಞಾನಿ ಕೀರ್ತಿರಾಜ್ ಕುಂಡ್ಲಿಕ್ ಗಾಯಕ್ವಾಡ್ ಅವರು ಅಂತಾರಾಷ್ಟ್ರೀಯ ಆಹಾರ ಸಂರಕ್ಷಣೆ ಒಕ್ಕೂಟ ನೀಡುವ ಯುವ ವಿಜ್ಞಾನಿ ಸ್ಕಾಲರ್ಷಿಪ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಸಕ್ರಿಯ ಪ್ಯಾಕೇಜಿಂಗ್ ವಿಭಾಗದಲ್ಲಿ ಆಮ್ಲಜನಕ ಸೂಕ್ಷ್ಮ ಆಹಾರ ಪದಾರ್ಥಗಳನ್ನು ಶೇಖರಿಸಿಡಲು ವಿನೂತನ ಆಮ್ಲಜನಕ ಹೀರಿಕೊಳ್ಳುವ ಪ್ಯಾಕೇಜ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದಕ್ಕಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ.

166. ಅಂತಾರಾಷ್ಟ್ರೀಯ ಮಹಿಳಾ ಕುಸ್ತಿಪಟು ಗೀತಾ ಫೋಗಟ್ ಅವರು ಯಾವ ರಾಜ್ಯದ ಪೊಲೀಸ್ ಡಿಎಸ್ಪಿ ಆಗಿ ನೇಮಕಗೊಂಡಿದ್ದಾರೆ?

ಅ) ರಾಜಸ್ತಾನ

ಆ) ಹರಿಯಾಣ

ಇ) ಪಂಜಾಬ್

www.karunaduexams.com

ಈ) ಕೇರಳ

ಹರಿಯಾಣ

ಹರಿಯಾಣ ಸರಕಾರ ಅಂತಾರಾಷ್ಟ್ರೀಯ ಮಹಿಳಾ ಕುಸ್ತಿಪಟು ಗೀತಾ ಫೋಗಟ್ ಅವರನ್ನು ರಾಜ್ಯ ಪೊಲೀಸ್ ಡಿಎಸ್ಪಿ ಆಗಿ ನೇಮಕ ಮಾಡಿದೆ. ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಗೃಹ ಇಲಾಖೆಯ ಪ್ರಸ್ತಾವಕ್ಕೆ ಸಮ್ಮತಿ ನೀಡಲಾಗಿದೆ. ಫೋಗತ್ ಪದವೀಧರೆ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಅಥ್ಲೀಟ್. 2010ರಲ್ಲಿ ದಿಲ್ಲಿಯಲ್ಲಿ ನಡೆದಿದ್ದ ಕಾಮನ್ವೆಲ್ತ್ ಗೇಮ್ಸ್ನಲ್ಲಿ ಚಿನ್ನದ ಪದಕವನ್ನು ಜಯಿಸಿದ್ದರು.

167. ಈ ಕೆಳಗಿನ ಯಾವ ವರ್ಷ ಮೂಲಭೂತ ಕರ್ತವ್ಯಗಳನ್ನು(Fundamental Duties) ಭಾರತ ಸಂವಿಧಾನದಲ್ಲಿ ಅಳವಡಿಸಲಾಯಿತು?

ಅ) 1956

ಆ) 1976

ಇ) 1963

ಈ) 1975

1976

1976' ರಲ್ಲಿ ಸಂವಿಧಾನಕ್ಕೆ 42ನೇ ತಿದ್ದುಪಡಿ ತರುವ ಮೂಲಕ ಸಂವಿಧಾನಕ್ಕೆ "4A" ಎಂಬ ಭಾಗ ಮತ್ತು "51ಎ" ಎಂಬ ಪರಿಚ್ಛೇದದಡಿಯಲ್ಲಿ 10 ಮೂಲಭೂತ ಕರ್ತವ್ಯಗಳನ್ನು ಸೇರಿಸಲಾಯಿತು. ಮೂಲಭೂತ ಕರ್ತವ್ಯಗಳ ಪರಿಕಲ್ಪನೆಯನ್ನು ರಷ್ಯಾ ದೇಶದ ಸಂವಿಧಾನದಿಂದ ಎರವಲು ಪಡೆಯಲಾಗಿದೆ.

168. ವಿಶ್ವಸಂಸ್ಥೆಯ ನಿರಸ್ತ್ರೀಕರಣ ಅಧಿವೇಶನ (UN Conference on Disarmament)ದ ಭಾರತದ ರಾಯಭಾರಿಯಾಗಿ ಯಾರನ್ನು ನೇಮಕಮಾಡಲಾಗಿದೆ?

ಅ) ಸಂಜುಶಾಸ್ತ್ರಿ ಯಾದವ್

ಆ) ಅಮನ್ ದೀಪ್ ಸಿಂಗ್ ಗಿಲ್

ಇ) ನವೀನ್ ಕುಮಾರ್ ಸಿಂಗ್

ಈ) ಅಮರೇಶ್ ಗಿರಿಧರ್

ಅಮನ್ ದೀಪ್ ಸಿಂಗ್ ಗಿಲ್

ಹಿರಿಯ ಐಎಫ್ಎಸ್ ಅಧಿಕಾರಿ ಅಮನ್ ದೀಪ್ ಸಿಂಗ್ ಗಿಲ್ ಅವರು ವಿಶ್ವಸಂಸ್ಥೆಯ ನಿರಸ್ತ್ರೀಕರಣ ಅಧಿವೇಶನದ ಭಾರತ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ. ಗಿಲ್ ಅವರು 1982 ಬ್ಯಾಚ್ ಐಎಫ್ಎಸ್ ಅಧಿಕಾರಿ. ವಿಶ್ವಸಂಸ್ಥೆಯ ನಿರಸ್ತ್ರೀಕರಣ ಸಮ್ಮೇಳನ, ಜಿನೆವಾ, ಸ್ವಿಟ್ಜರ್ಲ್ಯಾಂಡ್ ನಲ್ಲಿದೆ.

www.karunaduexams.com

169. ಈ ಕೆಳಗಿನ ಯಾವ ಸಂದರ್ಭದಲ್ಲಿ ಸೂರ್ಯ ಗ್ರಹಣ ಸಂಭವಿಸುತ್ತದೆ?

ಅ) ಸೂರ್ಯ ಮತ್ತು ಭೂಮಿ ನಡುವೆ ಚಂದ್ರ ಬಂದಾಗ

ಆ) ಭೂಮಿ ಮತ್ತು ಚಂದ್ರನ ನಡುವೆ ಸೂರ್ಯ ಬಂದಾಗ

ಇ) ಸೂರ್ಯ ಮತ್ತು ಚಂದ್ರನ ನಡುವೆ ಭೂಮಿ ಬಂದಾಗ

ಈ) ಸೂರ್ಯ ಮತ್ತು ಚಂದ್ರನ ನಡುವೆ ಕ್ಷುದ್ರಗ್ರಹ ಬಂದಾಗ

ಸೂರ್ಯ ಮತ್ತು ಭೂಮಿ ನಡುವೆ ಚಂದ್ರ ಬಂದಾಗ

ಸೂರ್ಯ ಗ್ರಹಣವು ಸೌರಮಂಡಲದಲ್ಲಿ ನಡೆಯುವ ಭೂಮಿ, ಸೂರ್ಯ ಮತ್ತು ಚಂದ್ರರನ್ನೊಳಗೊಂಡ ಒಂದು ಖಗೋಳ ಪ್ರಕ್ರಿಯೆ. ಅಮಾವಾಸ್ಯೆಯ ದಿನ ಮಾತ್ರ ಸೂರ್ಯ ಗ್ರಹಣ ಸಂಭವಿಸಲು ಸಾಧ್ಯ. ಸೂರ್ಯ ಮತ್ತು ಭೂಮಿಯ ನಡುವೆ ಚಂದ್ರ ಬಂದಾಗ ಸೂರ್ಯ ಗ್ರಹಣ ಸಂಭವಿಸುತ್ತದೆ.

170. 21ನೇ ಭಾರತ ಕಾನೂನು ಆಯೋಗದ ಸದಸ್ಯ ಕಾರ್ಯದರ್ಶಿಯಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಸಂಜಯ್ ಸಿಂಗ್

ಆ) ಕರಣ್ ಶರ್ಮ

ಇ) ಚಂದ್ರಮೋಹನ್ ಬಾಬು

ಈ) ಕೃಷ್ಣ ದೀಕ್ಷಿತ್

ಸಂಜಯ್ ಸಿಂಗ್

ಮಾಜಿ ಶಾಸಕಾಂಗ ಕಾರ್ಯದರ್ಶಿ ಸಂಜಯಸಿಂಗ್, ಭಾರತದ ಕಾನೂನು ಆಯೋಗದ ಸದಸ್ಯ ಕಾರ್ಯ ದರ್ಶಿಯಾಗಿ ನೇಮಕಗೊಂಡಿದ್ದಾರೆ.ರಾಷ್ಟ್ರಪತಿ ಪ್ರಣವ್ ಮುಖರ್ಜಿ ಈ ನೇಮಕಾತಿ ಮಾಡಿದ್ದು, ಸಿಂಗ್ರ ಅಧಿಕಾರಾವಧಿ 2018ರ ಆ.31ರ ವರೆಗಿರಲಿದೆಯೆಂದು ಅಧಿಕೃತ ಆದೇಶ ತಿಳಿಸಿದೆ. ಭಾರತದ ಕಾನೂನು ಸೇವೆಯ ನಿವೃತ್ತ ಅಧಿಕಾರಿಯಾಗಿರುವ ಸಿಂಗ್, 2014ರ ಆಗಸ್ಟ್ ನಲ್ಲಿ ಶಾಸಕಾಂಗ ಕಾರ್ಯದರ್ಶಿಯಾಗಿ ನೇಮಕವಾಗಿದ್ದರು. 2015ರ ಸೆ.1ರಂದು ರಚನೆಯಾಗಿರುವ 21 ಕಾನೂನು ಆಯೋಗದ ಅವಧಿ 2018ರ ಆ.31ರ ವರೆಗಿದೆ.

171. 9ನೇ ಬ್ರಿಕ್ಸ್ ಶೃಂಗಸಭೆಯು ಸೆಪ್ಟೆಂಬರ್, 2017 ರಲ್ಲಿ ಯಾವ ದೇಶದಲ್ಲಿ ನಡೆಯಲಿದೆ?

ಅ) ಮಾಸ್ಕೊ, ರಷ್ಯಾ

ಆ) ಕ್ಸಿಯಾಮೆನ್, ಚೀನಾ

ಇ) ಜೋಹನ್ಸ್ ಬರ್ಗ್, ದಕ್ಷಿಣ ಆಫ್ರಿಕ

ಈ) ಬ್ರಸಿಲಿಯ, ಬ್ರೆಜಿಲ್

ಕ್ಸಿಯಾಮೆನ್, ಚೀನಾ

www.karunaduexams.com

ಬ್ರಿಕ್ಸ್ ರಾಷ್ಟ್ರಗಳ 9ನೇ ಶೃಂಗಸಭೆಯು ಸೆಪ್ಟೆಂಬರ್, 2017 ರಲ್ಲಿ ಚೀನಾದ ಕ್ಸಿಯಾಮೆನ್ ನಲ್ಲಿ ನಡೆಯಲಿದೆ. ಚೀನಾ ಅಧ್ಯಕ್ಷ ಕ್ಸಿ ಜಿನ್ ಪಿಂಗ್ ಅವರು ಈ ವಿಷಯವನ್ನು ಖಚಿತಪಡಿಸಿದ್ದಾರೆ. 8ನೇ ಬ್ರಿಕ್ಸ್ ಶೃಂಗಸಭೆಯು ಗೋವಾದಲ್ಲಿ ಇತ್ತೀಚೆಗೆ ಮುಕ್ತಾಯಗೊಂಡಿತು.

172. ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯ (ಐಒಸಿ) ಅಥ್ಲೀಟ್‌ಗಳ ಆಯೋಗದ ಸದಸ್ಯೆಯಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಪಿ ವಿ ಸಿಂಧು

ಆ) ಮೇರಿ ಕೋಮ್

ಇ) ಸೈನಾ ನೆಹ್ವಾಲ್

ಈ) ಸಾನಿಯಾ ಮಿರ್ಜಾ

ಸೈನಾ ನೆಹ್ವಾಲ್

ಖ್ಯಾತ ಬ್ಯಾಡ್ಮಿಂಟನ್ ತಾರೆ ಹಾಗೂ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದ ಸಾಧನೆ ಮಾಡಿರುವ ಸೈನಾ ನೆಹ್ವಾಲ್ ಅವರು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ (ಐಒಸಿ) ಅಥ್ಲೀಟ್‌ಗಳ ಆಯೋಗದ ಸದಸ್ಯೆಯಾಗಿ ನೇಮಕವಾಗಿದ್ದಾರೆ. ಐಒಸಿ ಅಧ್ಯಕ್ಷ ಥಾಮಸ್ ಬಾಕ್ ಅವರು ಸೈನಾಗೆ ಪತ್ರ ಬರೆದು ಈ ವಿಷಯವನ್ನು ತಿಳಿಸಿದ್ದಾರೆ. 'ಏಂಜೆಲಾ ರುಗೆಯಿರೊ ಅವರು ಆಯೋಗದ ಅಧ್ಯಕ್ಷರಾಗಿದ್ದು, ಒಂಬತ್ತು ಮಂದಿ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಆಯೋಗದಲ್ಲಿ ಒಟ್ಟು ಹತ್ತು ಮಂದಿ ಸದಸ್ಯರಿದ್ದಾರೆ.

173. ಪ್ರಧಾನಿ ಮೋದಿ ರವರು ರಾಷ್ಟ್ರೀಯ ಎಸ್.ಸಿ/ಎಸ್.ಟಿ ಹಬ್ ಗೆ ಯಾವ ನಗರದಲ್ಲಿ ಚಾಲನೆ ನೀಡಿದರು?

ಅ) ಲೂಧಿಯಾನ

ಆ) ಗುರುಗ್ರಾಮ

ಇ) ಸಾಂಗ್ಲಿ

ಈ) ಜಲಂಧರ್

ಲೂಧಿಯಾನ

ಪರಿಶಿಷ್ಠ ಪಂಗಡ ಹಾಗೂ ಪರಿಶಿಷ್ಠ ಜಾತಿ ಉದ್ಯಮಿಗಳಿಗೆ ನೆರವು ನೀಡುವ ಉದ್ದೇಶದಿಂದ ಪ್ರಾರಂಭಿಸಲಾಗಿರುವ ರಾಷ್ಟ್ರೀಯ ಎಸ್ ಸಿ/ ಎಸ್ ಟಿ ಹಬ್ ಗೆ ಪ್ರಧಾನಿ ನರೇಂದ್ರ ಮೋದಿ ಲೂದಿಯಾನ, ಪಂಜಾಬ್ ನಲ್ಲಿ ಚಾಲನೆ ನೀಡಿದ್ದಾರೆ. ಪ್ರಾರಂಭದಲ್ಲಿ 490 ಕೋಟಿ ರೂ ವೆಚ್ಚದಲ್ಲಿ ಪ್ರಾರಂಭವಾಗಿರುವ ರಾಷ್ಟ್ರೀಯ ಎಸ್ ಸಿ/ ಎಸ್ ಟಿ ಹಬ್, ಎಸ್ ಸಿ/ ಎಸ್ ಟಿ

www.karunaduexams.com

ಸಮುದಾಯಕ್ಕೆ ನೆರವಾಗುವ ನಿಟ್ಟಿನಲ್ಲಿ ಮಾರುಕಟ್ಟೆ ಪ್ರವೇಶ ಬಲಪಡಿಸುವ, ಆರ್ಥಿಕ ನೆರವಿನ ಯೋಜನೆಗಳು, ಸಮುದಾಯದ ಸಾಮರ್ಥ್ಯ ಹೆಚ್ಚಿಸುವುದಕ್ಕೆ ಉಪಯೋಗವಾಗಲಿದೆ.

174. ಈ ಕೆಳಗಿನ ರಾಜ್ಯಗಳನ್ನು ಗಮನಿಸಿ:

I) ಮಹಾರಾಷ್ಟ್ರ

II) ಹರಿಯಾಣ

III) ಗುಜರಾತ್

IV) ರಾಜಸ್ತಾನ್

ಸರ್ದಾರ್ ಸರೋವರ ಯೋಜನೆಯ ಫಲಾನುಭವಿ ರಾಜ್ಯಗಳು ಯಾವುವು?

ಅ) I & II

ಆ) II & III

ಇ) I, II & III

ಈ) I, III & IV

I, III & IV

ಸರ್ದಾರ್ ಸರೋವರ ಯೋಜನೆಯನ್ನು ನರ್ಮದಿ ನದಿ ಮೇಲೆ ನಿರ್ಮಿಸಲಾಗಿದೆ. ಈ ಯೋಜನೆ ಮೂಲಕ ಗುಜರಾತ್, ರಾಜಸ್ತಾನ ಮತ್ತು ಮಹಾರಾಷ್ಟ್ರದ ಆಯ್ದ ಭಾಗಗಳಿಗೆ ನೀರಾವರಿ ಕಲ್ಪಿಸಲಾಗಿದೆ.

175. ಮಾನವ ಹಕ್ಕು ಹೋರಾಟಗಾರ್ತಿ ಇರೋಮ್ ಶರ್ಮಿಳಾ ಅವರು ಆರಂಭಿಸಿದ ಹೊಸ ರಾಜಕೀಯ ಪಕ್ಷ _____?

ಅ) ಪೀಪಲ್ಸ್ ರಿಸರ್ಜನ್ಸ್ ಮತ್ತು ಜಸ್ಟಿಸ್ ಅಲಯನ್ಸ್

ಆ) ಪೀಪಲ್ಸ್ ಡಿಸರ್ವ್ಸ್ ಮತ್ತು ಜಸ್ಟಿಸ್ ಅಲಯನ್ಸ್

ಇ) ಫಾರ್ ಪೀಪಲ್ಸ್ ಮತ್ತು ಜಸ್ಟಿಸ್ ಅಲಯನ್ಸ್

ಈ) ಪೀಪಲ್ಸ್ ಜಸ್ಟಿಸ್ ಮತ್ತು ರಿಸರ್ಜನ್ಸ್ ಅಲಯನ್ಸ್

ಪೀಪಲ್ಸ್ ರಿಸರ್ಜನ್ಸ್ ಮತ್ತು ಜಸ್ಟಿಸ್ ಅಲಯನ್ಸ್

ಮಾನವ ಹಕ್ಕುಗಳ ಹೋರಾಟಗಾರ್ತಿ ಇರೋಮ್ ಶರ್ಮಿಳಾ ಅವರು "ಪೀಪಲ್ಸ್ ರಿಸರ್ಜನ್ಸ್ ಮತ್ತು ಜಸ್ಟಿಸ್ ಅಲಯನ್ಸ್' ಎಂಬ ಪಕ್ಷವನ್ನು ಆರಂಭಿಸಿದ್ದಾರೆ. ಮುಂದಿನ ವರ್ಷ ನಡೆಯುವ ವಿಧಾನಸಭೆ ಚುನಾವಣೆಯಲ್ಲಿ ಮುಖ್ಯಮಂತ್ರಿ ಒಕ್ರಮ್

www.karunaduexams.com

ಇಬೋಬಿ ಸಿಂಗ್ ವಿರುದ್ಧ ಥೌಬುಲ್ ಕ್ಷೇತ್ರದಲ್ಲಿ ಸ್ಪರ್ಧಿಸುವುದಾಗಿ ಇರೋಮ್ ಘೋಷಿಸಿದ್ದಾರೆ. ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಥೌಬುಲ್ ಮತ್ತು ಖುರೈ ಕ್ಷೇತ್ರಗಳಿಂದ ಸ್ಪರ್ಧಿಸಲು ನಿರ್ಧರಿಸಿದ್ದೇನೆ' ಎಂದು ಇರೋಮ್ ತಿಳಿಸಿದ್ದಾರೆ.

176. ಇತ್ತೀಚೆಗೆ ಫ್ರಾನ್ಸ್ ಉಭಯ ಸದನಗಳನ್ನು ಉದ್ದೇಶಿಸಿ ಮಾತನಾಡಿದ ಮೊದಲ ಭಾರತೀಯ ಯಾರು?

ಅ) ಶ್ರೀ ರವಿಶಂಕರ್ ಗುರೂಜಿ

ಆ) ಹಮೀದ್ ಅನ್ಸಾರಿ

ಇ) ನಿರ್ಮಲನಂದ ಸ್ವಾಮೀಜಿ

ಈ) ಅರುಣ್ ಜೇಟ್ಲಿ

ಶ್ರೀ ರವಿಶಂಕರ್ ಗುರೂಜಿ

ಆಧ್ಯಾತ್ಮಿಕ ಗುರು ಮತ್ತು ಆರ್ಟ್ ಆಫ್ ಲಿವಿಂಗ್‌ನ ಸ್ಥಾಪಕ ಶ್ರೀ ಶ್ರೀ ರವಿಶಂಕರ್ ಅವರು ಪ್ಯಾರಿಸ್‌ನಲ್ಲಿರುವ ಫ್ರೆಂಚ್ ಸಂಸತ್ತನ್ನು ಉದ್ದೇಶಿಸಿ ಮಾತನಾಡಿದರು. ಆ ಮೂಲಕ ಫ್ರಾನ್ಸ್‌ನ ಸಂಸದರನ್ನುದ್ದೇಶಿಸಿ ಮಾತನಾಡಿದ ಮೊದಲ ಭಾರತೀಯ ಎಂಬ ಗೌರವಕ್ಕೆ ಅವರು ಪಾತ್ರರಾಗಿದ್ದಾರೆ. ಅಕ್ಟೋಬರ್ 18ರಂದು ಸಂಸತ್ತಿನ ಕೆಳಮನೆಯಾದ 'ನ್ಯಾಷನಲ್ ಅಸೆಂಬ್ಲಿ'ಯಲ್ಲಿ ಮಾತನಾಡಿದ ಅವರು, ಅಕ್ಟೋಬರ್ 19 ರಂದು ಮೇಲ್ಮನೆಯಾದ 'ಸೆನೆಟ್ ಆಫ್ ಫ್ರಾನ್ಸ್' ಉದ್ದೇಶಿಸಿ ಮಾತನಾಡಲಿದ್ದಾರೆ. ಭಾರತ–ಫ್ರಾನ್ಸ್ ಪಾರ್ಲಿಮೆಂಟರಿ ಸಮಿತಿ ಅಧ್ಯಕ್ಷ ಪೌಲ್ ಗಿಯಾಕೊಬಿ ಮತ್ತು ಭಾರತ–ಫ್ರಾನ್ಸ್ ಸೆನೆಟರ್‌ಗಳ ಸಮಿತಿ ಅಧ್ಯಕ್ಷರಾದ ಫ್ರಾಂಕೊಯಿಸ್ ಮಾರ್ಕ್ ಅವರ ಕೋರಿಕೆ ಮೇರೆಗೆ ಶ್ರೀ ಶ್ರೀ ರವಿಶಂಕರ್ ಫ್ರಾನ್ಸ್ ಸಂಸತ್ ಉದ್ದೇಶಿಸಿ ಮಾತನಾಡಿದ್ದಾರೆ.

177. ಕಾಶ್ಮೀರದ "ದಚಿಗಮ್ ರಾಷ್ಟ್ರೀಯ ಉದ್ಯಾನವನ" ಈ ಕೆಳಗಿನ ಯಾವುದರ ಸಂರಕ್ಷಣೆಗೆ ಪ್ರಸಿದ್ದಿಯಾಗಿದೆ?

ಅ) ತೋಳ

ಆ) ಹಿಮ ಕರಡಿ

ಇ) ಕಾಶ್ಮೀರದ ಜಿಂಕೆ

ಈ) ಇಂಡಿಯನ್ ಬಸ್ಟರ್ಡ್

ಕಾಶ್ಮೀರದ ಜಿಂಕೆ

ದಚಿಗಮ್ ವನ್ಯಜೀವಿ ಅಭಯಾರಣ್ಯ ಕಾಶ್ಮೀರದ ಪ್ರಮುಖ ಆಕರ್ಷಣೆಗಳಲ್ಲಿ ಒಂದು. ಇದು ಸುಮಾರು 141 ಚದರ ಕಿಲೋಮೀಟರ್ ವಿಸ್ತಾರದಲ್ಲಿ ವ್ಯಾಪಿಸಿದೆ. ಇದನ್ನು 1951ರಲ್ಲಿ ರಾಷ್ಟ್ರೀಯ ಉದ್ಯಾನ ಎಂದು ಘೋಷಿಸಲಾಗಿದೆ. ಇದು

www.karunaduexams.com

ಅಳಿವಿನ ಅಂಚಿನಲ್ಲಿರುವ ಕಾಶ್ಮೀರದ ಜಿಂಕೆ ಅಥವಾ ಹಂಗುಲ್ ಸಂರಕ್ಷಣೆಗೆ ಪ್ರಸಿದ್ಧಿ ಹೊಂದಿದೆ. ಇದರ ಜೊತೆಗೆ ಇಲ್ಲಿ ಚಿರತೆ, ಕಪ್ಪು ಮತ್ತು ಕಂದು ಕರಡಿಗಳು, ಕಸ್ತೂರಿ ಮೃಗ ಮತ್ತು ಹಲವಾರು ವಲಸೆ ಬರುವ ಹಕ್ಕಿಗಳನ್ನು ಕಾಣಬಹುದಾಗಿದೆ.

178. ಯಾವ ಸಂಸ್ಥೆ ಇತ್ತೀಚೆಗೆ ಸ್ವದೇಶಿ ತಂತ್ರಜ್ಞಾನ ಬಳಸಿ ದೇಶದ ಮೊದಲ ವಿದ್ಯುತ್ ಚಾಲಿತ ಬಸ್ ಅನ್ನು ಮಾರುಕಟ್ಟೆಗೆ ಪರಿಚಯಿಸಿದೆ?

ಅ) ಮಹೀಂದ್ರ ಅಂಡ್ ಮಹೀಂದ್ರ

ಆ) ಅಶೋಕ್ ಲೇಲ್ಯಾಂಡ್

ಇ) ಟಾಟಾ ಮೋಟಾರ್ಸ್

ಈ) ವೊಲ್ವೊ

ಅಶೋಕ್ ಲೇಲ್ಯಾಂಡ್

ಹಿಂದುಜಾ ಸಮೂಹದ ಅಶೋಕ್ ಲೇಲ್ಯಾಂಡ್, ಸ್ವದೇಶಿ ತಂತ್ರಜ್ಞಾನದಲ್ಲಿ ತಯಾರಿಸಲಾಗಿರುವ ದೇಶದ ಮೊದಲ ವಿದ್ಯುತ್‌ಚಾಲಿತ ಬಸ್ ಮಾರುಕಟ್ಟೆಗೆ ಪರಿಚಯಿಸಿದೆ.'ಭಾರತದ ವಾತಾವರಣ, ಭೌಗೋಳಿಕ ಸ್ಥಿತಿಗೆ ಪೂರಕವಾಗಿ ಸ್ವದೇಶಿ ತಂತ್ರಜ್ಞಾನದಲ್ಲಿ ಈ ಬಸ್ ರೂಪಿಸಲಾಗಿದೆ. ಪರಿಸರ ಸ್ನೇಹಿ ಇಂಧನ ಬಳಸುವ ವಾಹನಗಳ ಬಗ್ಗೆ ಕೇಂದ್ರ ಸರ್ಕಾರ ತೋರುತ್ತಿರುವ ಕಾಳಜಿ, ಖಾಸಗಿ ಮತ್ತು ಸಾರ್ವಜನಿಕ ವಲಯಗಳಲ್ಲಿ ಕೇಳಿ ಬರುತ್ತಿರುವ ಮಾತುಗಳಿಂದ ಉತ್ತೇಜಿತವಾಗಿ ಕಂಪೆನಿಯು ಎಲೆಕ್ಟ್ರಿಕ್ ಬಸ್ ತಯಾರಿಸಿದೆ.

179. ಬಾಲ್ಟಿಕ್ ಮತ್ತು ಉತ್ತರ ಸಮುದ್ರವನ್ನು (North Sea) ಸಂಪರ್ಕಿಸುವ ಕಾಲುವೆ _____?

ಅ) ಕೀಲ್ ಕಾಲುವೆ

ಆ) ಪನಾಮ ಕಾಲುವೆ

ಇ) ಸೂಯೆಜ್ ಕಾಲುವೆ

ಈ) ಮೇಲಿನ ಯಾವುದು ಅಲ್ಲ

ಕೀಲ್ ಕಾಲುವೆ

ಕೀಲ್ ಕಾಲುವೆ ಉತ್ತರ ಸಮುದ್ರ ಮತ್ತು ಬಾಲ್ಟಿಕ್ ಕಡಲುಗಳನ್ನು ಕೂಡಿಸುವ ಕಾಲುವೆ. 1887-95ರಲ್ಲಿ ನಿರ್ಮಿತವಾದ ಇದನ್ನು 1907-14ರಲ್ಲಿ ವಿಸ್ತರಿಸಲಾಯಿತು. ಹೋಲ್ಟೆನೌ ಮತ್ತು ಬ್ರನ್ಸ್‌ಬುಟೆಲ್‌ಕೂಗ್ ಗಳೆಡೆಗಳಲ್ಲಿರುವ ತೂಬುಗಳು 1082.6' ಉದ್ದ, 147' ಅಗಲ ಮತ್ತು 45.9' ಎತ್ತರವಾಗಿವೆ. ಹೋಲ್ಟೆನೌ ಎಂಬುದು ಕೀಲ್‌ನ ಬಂದರು. ಬ್ರನ್ಸ್‌ಬುಟೆಲ್‌ಕೂಗ್ ಎಂಬುದು ಎಲ್ಬ್ ನದಿಯ ಮುಖ. ಕಾಲುವೆಯ ಉದ್ದ 53.3 ನಾವಿಕ ಮೈ., ಅಗಲ 338', ಆಳ 37.07'. ಪ್ರಾರಂಭದಲ್ಲಿ ಈ ಕಾಲುವೆಯನ್ನು ಸೈನಿಕರ ಸಾಗಾಣಿಕೆಗೆ ಮಾತ್ರ ಉಪಯೋಗಿಸಲಾಗುತ್ತಿತ್ತು. ಕಾಲಕ್ರಮೇಣ ಸರಕು ಸಾರಿಗೆಯೂ ಆರಂಭವಾಯಿತು.

www.karunaduexams.com

180. ಯಾವ ವರ್ಷದ ಅಂತ್ಯಕ್ಕೆ ಭಾರತ ಪ್ರಬಲ ಹಸಿರು ಮನೆ ಅನಿಲ ಹೈಡ್ರೋಫ್ಲೋರೋಕಾರ್ಬನ್ (HFC-23) ಬಳಕೆಯನ್ನು ತೊಡೆದುಹಾಕಲು ನಿರ್ಧರಿಸಿದೆ?

ಅ) 2045

ಆ) 2030

ಇ) 2034

ಈ) 2040

2030

2030 ರ ಒಳಗೆ ಪ್ರಬಲ ಹಸಿರು ಮನೆ ಅನಿಲ ಹೈಡ್ರೋಫ್ಲೋರೋಕಾರ್ಬನ್ (HFC-23) ಬಳಕೆಯನ್ನು ಸಂಪೂರ್ಣವಾಗಿ ತೊಡೆದುಹಾಕಲು ಭಾರತ ನಿರ್ಧರಿಸಿದೆ. ಹೆಚ್‌ಎಫ್ಸಿಯನ್ನು ರೆಫ್ರಿಜರೇಟರ್, ಹವಾನಿಯಂತ್ರಕ ಮತ್ತು ಏರ್ ಸ್ಪ್ರೇ ನಲ್ಲಿ ಬಳಸಲಾಗುತ್ತಿದೆ.

181. ರಿಯೋ ಒಲಂಪಿಕ್ ಪದಕ ವಿಜೇತೆ ಪಿ.ವಿ.ಸಿಂಧು ಅವರು ಯಾವ ಬ್ಯಾಂಕ್ ನ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ?

ಅ) ಭಾರತೀಯ ಸ್ಟೇಟ್ ಬ್ಯಾಂಕ್

ಆ) ಬ್ಯಾಂಕ್ ಆಫ್ ಬರೋಡ

ಇ) ಐಸಿಐಸಿಐ ಬ್ಯಾಂಕ್

ಈ) ಪಂಜಾಬ್ ನ್ಯಾಷನಲ್ ಬ್ಯಾಂಕ್

ಬ್ಯಾಂಕ್ ಆಫ್ ಬರೋಡ

ರಿಯೋ ಒಲಿಂಪಿಕ್ಸ್ ರಜತ ಪದಕ ವಿಜೇತೆ ಪಿವಿ ಸಿಂಧು ಅವರು ಬ್ಯಾಂಕ್ ಆಫ್ ಬರೋಡದ ಪ್ರಚಾರ ರಾಯಭಾರಿಯಾಗಿ ಸುಮಾರು 8 ಕೋಟಿ ರೂ.ಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಮಾಜಿ ಕ್ರಿಕೆಟಿಗ ರಾಹುಲ್ ದ್ರಾವಿಡ್ ನಂತರ ಬರೋಡ ಬ್ಯಾಂಕ್ ಜತೆ ಒಪ್ಪಂದ ಮಾಡಿಕೊಂಡ ಕೇವಲ 2ನೇ ಕ್ರೀಡಾಪಟು ಆಗಿದ್ದಾರೆ. ಸಿಂಧು ಮುಂದಿನ ಟೂರ್ನಿಗಳಲ್ಲಿ ಬ್ಯಾಂಕ್ ಆಫ್ ಬರೋಡ ಲಾಂಛನ ಗುರುತಿನ ಜೆರ್ಸಿಯನ್ನು ಧರಿಸಿ ಕಣಕ್ಕಿಳಿಯಲಿದ್ದಾರೆ. ಇವರೊಂದಿಗೆ ಬ್ಯಾಂಕ್, ಮತ್ತೋರ್ವ ಷಟ್ಲರ್ ಕಡಂಬಿ ಶ್ರೀಕಾಂತ್ ಜತೆಗೂ ಒಪ್ಪಂದ ಮಾಡಿಕೊಂಡಿದೆ.

182. “2016 ಸೆವೆನ್ ಸ್ಟಾರ್ ಲಕ್ಸುರಿ ಹಾಸ್ಪಿಟಲಿಟಿ ಅಂಡ್ ಲೈಫ್ ಸ್ಟೈಲ್ (Seven Star Luxury Hospitality and Lifestyle Awards)” ಪ್ರಶಸ್ತಿಗೆ ಪಡೆದ ಭಾರತೀಯ ರೈಲು ಯಾವುದು?

ಅ) ಮಹಾರಾಜ ಎಕ್ಸ್ ಪ್ರೆಸ್

ಆ) ರಾಜಧಾನಿ ಎಕ್ಸ್ ಪ್ರೆಸ್

ಇ) ಶತಾಬ್ದಿ ಎಕ್ಸ್ ಪ್ರೆಸ್

www.karunaduexams.com

ಈ) ಡುರಾಂಡ್ ಎಕ್ಸ್ ಪ್ರೆಸ್

ಮಹಾರಾಜ ಎಕ್ಸ್ ಪ್ರೆಸ್

ಭಾರತೀಯ ರೈಲ್ವೆಯ ಮಹಾರಾಜ ಎಕ್ಸ್ ಪ್ರೆಸ್ ರೈಲು ವಿಶ್ವದ ವಿಲಾಸಿ (ಲಕ್ಸುರಿ) ರೈಲು ಎಂಬ ಖ್ಯಾತಿಗೆ ಪಾತ್ರವಾಗಿದೆ. ಸ್ಪೇನ್ ನ ಮರ್ಬೆಲ್ಲದಲ್ಲಿ ಈ ರೈಲಿಗೆ 2016 ಸೆವೆನ್ ಸ್ಟಾರ್ ಲಕ್ಸುರಿ ಹಾಸ್ಪಿಟಲಿಟಿ ಅಂಡ್ ಲೈಫ್ ಸ್ಟೈಲ್ ಪ್ರಶಸ್ತಿಯನ್ನು ನೀಡಲಾಗಿದೆ.

183. "2016 ವಿಶ್ವ ರೈಲ್ವೆ ಶೂಟಿಂಗ್ ಚಾಂಪಿಯನ್ ಷಿಪ್" ಪ್ರಶಸ್ತಿಯನ್ನು ಪಡೆದುಕೊಂಡ ತಂಡ ____?

ಅ) ಭಾರತೀಯ ರೈಲ್ವೆ

ಆ) ಚೀನಾ ರೈಲ್ವೆ ಕಾರ್ಪೋರೇಷನ್

ಇ) ಕೆನಡಿಯನ್ ಫೆಸಿಫಿಕ್ ರೈಲ್ವೆ

ಈ) ಜಪಾನ್ ರೈಲ್ವೆ

ಫ್ರಾನ್ಸ್ ನಲ್ಲಿ ನಡೆದ "2016 ವಿಶ್ವ ರೈಲ್ವೆ ಶೂಟಿಂಗ್ ಚಾಂಪಿಯನ್ ಷಿಪ್ ಕಪ್" ಅನ್ನು ಭಾರತೀಯ ರೈಲ್ವೆ ಗೆದ್ದುಕೊಂಡಿದೆ. ಇದೇ ಮೊದಲ ಬಾರಿಗೆ ಭಾರತೀಯ ರೈಲ್ವೆ ಈ ಚಾಂಪಿಯನ್ ಷಿಪ್ ನಲ್ಲಿ ವಿಜಯಿಶಾಲಿಯಾಗಿದೆ. ಕಳೆದ ವರ್ಷ ರನ್ನರ್ ಅಪ್ ಆಗಿತ್ತು. ಐದು ಚಿನ್ನ, ಮೂರು ಬೆಳ್ಳಿ ಮತ್ತು ಎರಡು ಕಂಚಿನ ಪದಕ ಗೆಲ್ಲುವ ಮೂಲಕ ಒಟ್ಟು 10 ಪದಕಗಳೊಂದಿಗೆ 15ನೇ ವಿಶ್ವ ರೈಲ್ವೆ ಶೂಟಿಂಗ್ ಚಾಂಪಿಯನ್ ಷಿಪ್ ನಲ್ಲಿ ಅಗ್ರಸ್ಥಾನ ಪಡೆದುಕೊಂಡಿದೆ.

184. ಲ್ಯಾಟಿನ್ ಅಮೆರಿಕಾದ ಮೊದಲ "ಆನೆ ಅಭಯಾರಣ್ಯ"ವನ್ನು ಇತ್ತೀಚೆಗೆ ಯಾವ ದೇಶದಲ್ಲಿ ಆರಂಭಿಸಲಾಯಿತು?

ಅ) ಬ್ರೆಜಿಲ್

ಆ) ಮೆಕ್ಸಿಕೊ

ಇ) ಚಿಲಿ

ಈ) ಅರ್ಜೆಂಟೀನಾ

ಬ್ರೆಜಿಲ್

ಲ್ಯಾಟಿನ್ ಅಮೆರಿಕಾದಲ್ಲೇ ಮೊದಲ ಆನೆ ಅಭಯಾರಣ್ಯವನ್ನು ಬ್ರೆಜಿಲ್ ನಲ್ಲಿ ಆರಂಭಿಸಲಾಗಿದೆ. ಸರ್ಕಸ್ ನಲ್ಲಿ ಬಳಸಲಾದ ಸುಮಾರು 50ಕ್ಕೂ ಹೆಚ್ಚು ಆನೆಗಳನ್ನು ಇಲ್ಲಿ ಸಂರಕ್ಷಿಸಲಾಗುವುದು. ಅಮೆರಿಕ ಮೂಲದ ಲಾಭದಾಯಕಲ್ಲದ ಸಂಸ್ಥೆ "ಗ್ಲೋಬಲ್ ಸ್ಯಾಂಚುರಿ ಫಾರ್ ಎಲಿಫಂಟ್" ಈ ಅಭಯಾರಣ್ಯವನ್ನು ಆರಂಭಿಸಿದೆ.

185. "ಡ್ರಿವನ್-ದಿ ವಿರಾಟ್ ಕೊಹ್ಲಿ ಸ್ಟೋರಿ (Driven – The Virat Kohli Story) ಪುಸ್ತಕದ ಲೇಖಕರು ___?

ಅ) ಅಮೃತರಾಜ್ ಸಿಂಗ್

www.karunaduexams.com

ಆ) ವಿಜಯ್ ಲೋಕಪಲ್ಲಿ

ಇ) ಸುದೀಂದ್ರ ಜಾಧವ್

ಈ) ತರುಣ್ ವಿಜಯ್

ವಿಜಯ್ ಲೋಕಪಲ್ಲಿ

ಹಿಂದೂ ಪತ್ರಿಕೆ ಬಳಗದವರಾದ ವಿಜಯ್ ಲೋಕಪಲ್ಲಿ "ಡ್ರಿವನ್-ದಿ ವಿರಾಟ್ ಕೊಹ್ಲಿ ಸ್ಟೋರಿ" ಪುಸ್ತಕದ ಲೇಖಕರು. ಜೂನಿಯರ್ ಕ್ರಿಕೆಟ್ ಆಟಗಾರನಿಂದ ಭಾರತ ಟೆಸ್ಟ್ ಕ್ರಿಕೆಟ್ ತಂಡದ ನಾಯಕರಾಗುವ ವಿರಾಟ್ ಕೊಹ್ಲಿ ಅವರ ಯಶಸ್ಸಿನ ಪ್ರಯಾಣವನ್ನು ಪುಸ್ತಕದಲ್ಲಿ ವಿವರಿಸಲಾಗಿದೆ. 221 ಪುಟಗಳನ್ನು ಒಳಗೊಂಡಿರುವ ಈ ಪುಸ್ತಕವನ್ನು ಬ್ಲೂಮ್ಸ್ ಬರಿ ಹೊರತಂದಿದೆ. ಇತ್ತೀಚೆಗೆ ಈ ಪುಸ್ತಕವನ್ನು ಭಾರತ ಕ್ರಿಕೆಟ್ ದಿಗ್ಗಜರುಗಳಾದ ಅನಿಲ್ ಕುಂಬ್ಳೆ, ವಿರೇಂದ್ರ ಸೆಹ್ವಾಗ್, ಕಪಿಲ್ ದೇವ್, ರವಿ ಶಾಸ್ತ್ರಿ ಮತ್ತು ಕೊಹ್ಲಿ ರವರ ತರಭೇತುದಾರ ರಾಜಕುಮಾರ್ ಶರ್ಮಾ ಬಿಡುಗಡೆಗೊಳಿಸಿದರು.

186. U-17 ವಿಶ್ವ ಫುಟ್ಬಾಲ್ ಟೂರ್ನಿಯನ್ನು ಆಯೋಜಿಸಲು ಫಿಫಾದಿಂದ ಅಧಿಕೃತ ಅನುಮತಿ ಪಡೆದ ಮೊದಲ ನಗರ ಯಾವುದು?

ಅ) ನವ ದೆಹಲಿ

ಆ) ಕೊಚ್ಚಿ

ಇ) ಬೆಂಗಳೂರು

ಈ) ಮುಂಬೈ

2017 ರಲ್ಲಿ ಭಾರತದಲ್ಲಿ ನಡೆಯಲಿರುವ 17 ವರ್ಷದೊಳಗಿನವರು ವಿಶ್ವ ಫುಟ್ಬಾಲ್ ಕಪ್ ಆಯೋಜಿಸಲು ಕೊಚ್ಚಿ ಜವಹರ್ ಲಾಲ್ ನೆಹರೂ ಕ್ರೀಡಾಂಗಣಕ್ಕೆ ಫಿಫಾ ಅಧಿಕೃತ ಅನುಮತಿ ನೀಡಿದೆ. ಆ ಮೂಲಕ ವಿಶ್ವ ಫುಟ್ಬಾಲ್ ಕಪ್ ಆಯೋಜಿಸಲು ಅನುಮತಿ ಪಡೆದ ದೇಶದ ಮೊದಲ ನಗರವೆಂಬ ಖ್ಯಾತಿಗೆ ಕೊಚ್ಚಿ ಪಾತ್ರವಾಗಿದೆ. ಇದೇ ಮೊದಲ ಬಾರಿಗೆ ಭಾರತ ವಿಶ್ವಕಪ್ ಫುಟ್ಬಾಲ್ನ ಅತಿಥ್ಯವಹಿಸಿದ್ದು, ವಿವಿಧ ನಗರಗಳಲ್ಲಿ ಪಂದ್ಯಗಳು ನಡೆಯಲಿವೆ.

187. ಈ ಕೆಳಗಿನ ಯಾರು "ಅಂತಾರಾಜ್ಯ ಮಂಡಳಿ (Interstate Council)"ಯ ಅಧ್ಯಕ್ಷರಾಗಿರುತ್ತಾರೆ?

ಅ) ಪ್ರಧಾನ ಮಂತ್ರಿ

ಆ) ರಾಷ್ಟ್ರಪತಿ

ಇ) ಕೇಂದ್ರ ಗೃಹ ಸಚಿವರು

ಈ) ಉಪ ರಾಷ್ಟ್ರಪತಿ

ಪ್ರಧಾನ ಮಂತ್ರಿ

ರಾಜ್ಯ ಮತ್ತು ಕೇಂದ್ರ ಸರ್ಕಾರದ ನಡುವೆ ಸಮನ್ವಯ ಸ್ಥಾಪಿಸುವ ನಿಟ್ಟಿನಲ್ಲಿ 1990ರಲ್ಲಿ ಅಂತಾರಾಜ್ಯ ಮಂಡಳಿ ಸ್ಥಾಪಿಸಲಾಗಿದೆ. ಪ್ರಧಾನಿ ನೇತೃತ್ವದ ಈ ಮಂಡಳಿಯಲ್ಲಿ 6 ಸಚಿವರು, ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು

www.karunaduexams.com

ಸದಸ್ಯರಾಗಿರುತ್ತಾರೆ. ಜೊತೆಗೆ ಕೇಂದ್ರ ಸಂಪುಟದ 10 ಸಚಿವರು ಇದಕ್ಕೆ ಕಾಯಂ ಆಹ್ವಾನಿತರಾಗಿರುತ್ತಾರೆ. ಮಂಡಳಿಯು, ರಾಜ್ಯ- ರಾಜ್ಯಗಳ ನಡುವೆ, ರಾಜ್ಯ ಮತ್ತು ಕೇಂದ್ರದ ನಡುವೆ ಉದ್ಭವಿಸುವ ಬಿಕ್ಕಟ್ಟಿನ ಸಂದರ್ಭದಲ್ಲಿ ಪರಿಹಾರ ಕೈಗೊಳ್ಳಲು ಸಲಹೆ ನೀಡುತ್ತದೆ. 2006ರ ನಂತರ ಈ ಮಂಡಳಿ ಸಭೆ ಸೇರಿಯೇ ಇರಲಿಲ್ಲ. ಕಳೆದ ಜುಲೈನಲ್ಲಷ್ಟೇ ಪ್ರಧಾನಿ ಮೋದಿ ಈ ಮಂಡಳಿಯ ಸಭೆ ನಡೆಸಿದ್ದರು.

188. ಏಪ್ಯಾ ಫುಟ್ಬಾಲ್ ಕಪ್ (ಎಎಫ್ಸಿ) ನಲ್ಲಿ ಫೈನಲ್ ತಲುಪಿದ ಭಾರತದ ಮೊಟ್ಟಮೊದಲ ಫುಟ್ಬಾಲ್ ಕ್ಲಬ್ ಯಾವುದು?

ಅ) ಪುಣೆ ಫುಟ್ಬಾಲ್ ಕ್ಲಬ್

ಆ) ಬೆಂಗಳೂರು ಫುಟ್ಬಾಲ್ ಕ್ಲಬ್

ಇ) ಮೊಹುನ್ ಬಾಗನ್ ಫುಟ್ಬಾಲ್ ಕ್ಲಬ್

ಈ) ಈಸ್ಟ್ ಬೆಂಗಾಲ್ ಫುಟ್ಬಾಲ್ ಕ್ಲಬ್

ಬೆಂಗಳೂರು ಫುಟ್ಬಾಲ್ ಕ್ಲಬ್

ಏಷ್ಯನ್ ಫುಟ್ ಬಾಲ್(ಎಎಫ್ಸಿ) ಕಪ್ ನಲ್ಲಿ ಫೈನಲ್ ತಲುಪಿದ ಭಾರತದ ಮೊಟ್ಟಮೊದಲ ಕ್ಲಬ್ ಎಂಬ ಹಿರಿಮೆಗೆ ಬೆಂಗಳೂರು ಫುಟ್ ಬಾಲ್ ಕ್ಲಬ್(ಬಿಎಫ್ಸಿ) ಪಾತ್ರವಾಗಿದೆ. ಬೆಂಗಳೂರಿನ ಕಂಠೀರವ ಸ್ಟೇಡಿಯಂನಲ್ಲಿ ನಡೆದ ಎಎಫ್ಸಿ ಕಪ್ ಸೆಮಿಫೈನಲ್ ನ 2ನೇ ಪಂದ್ಯದಲ್ಲಿ ಬಿಎಫ್ಸಿ 3-1 ಗೋಲುಗಳಿಂದ ಹಾಲಿ ಚಾಂಪಿಯನ್ ಮಲೇಷ್ಯಾದ ಜೋಹರ್ ದಾರುಲ್ ತಜೀಮ್(ಜೆಡಿಟಿ) ತಂಡವನ್ನು ಸೋಲಿಸಿದೆ. ಎಎಫ್ಸಿ ಕಪ್ ಫೈನಲ್ ಪಂದ್ಯ ನವೆಂಬರ್ 5 ರಂದು ನಡೆಯಲಿದ್ದು ಬಿಎಫ್ಸಿ ತಂಡ ಇರಾಕ್ ನ ಅಲ್ ಕ್ಯುವಾ ಅಲ್ ಜಾವಿಯಾ ತಂಡವನ್ನು ಎದುರಿಸಲಿದೆ.

189. ಇತ್ತೀಚೆಗೆ ಈ ಕೆಳಗಿನ ಯಾವ ದೇಶ "ಸೂರ್ಯ ಬಲ ಸಂಗ್ರಮಯ (Surya Bala Sangramaya)" ಹೆಸರಿನ ಸಾರ್ವಜನಿಕ ವಿದ್ಯುತ್ ಉತ್ಪಾದನ ಕಾರ್ಯಕ್ರಮವನ್ನು ಆರಂಭಿಸಿತು?

ಅ) ಶ್ರೀಲಂಕಾ

ಆ) ನೇಪಾಳ

ಇ) ಮಾರಿಷಸ್

ಈ) ಭೂತಾನ್

ಶ್ರೀಲಂಕಾ

ಶ್ರೀಲಂಕಾದ ಅಧ್ಯಕ್ಷ ಮೈತ್ರಿಪಾಲ ಸಿರಿಸೇನಾ ರವರು "ಸೂರ್ಯ ಬಲ ಸಂಗ್ರಮಯ" ಸಾರ್ವಜನಿಕ ವಿದ್ಯುತ್ ಉತ್ಪಾದನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಯೋಜನೆಯಡಿ ಸುಮಾರು 10 ಲಕ್ಷ ಕುಟುಂಬಗಳಿಗೆ ಸೌರ ವಿದ್ಯುತ್ ಸೌಲಭ್ಯವನ್ನು ನೀಡಲಾಗುವುದು.



www.karunaduexams.com

190. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳ ಸಂಖ್ಯೆಯನ್ನು ಈ ಮೂಲಕ ಬದಲಿಸಬಹುದು ____?

ಅ) ರಾಷ್ಟ್ರಪತಿಗಳ ಆದೇಶ

ಆ) ಸಂಸತ್ತಿನ ಕಾನೂನು

ಇ) ಸರ್ವೋಚ್ಚ ನ್ಯಾಯಾಲದ ಅಧಿಸೂಚನೆ

ಈ) ಕೇಂದ್ರ ಸರ್ಕಾರದ ಅಧಿಸೂಚನೆ

ಸಂಸತ್ತಿನ ಕಾನೂನು

ಸರ್ವೋಚ್ಚ ನ್ಯಾಯಾಲದ ನ್ಯಾಯಾಧೀಶರುಗಳ ಸಂಖ್ಯೆಯನ್ನು ಹೆಚ್ಚಿಸುವ ಅಥವಾ ಕಡಿಮೆ ಮಾಡುವ ಪ್ರಕ್ರಿಯೆಯನ್ನು ಸಂಸತ್ತಿನಲ್ಲಿ ಕಾನೂನು ಜಾರಿಗೆ ತರುವ ಮೂಲಕ ಮಾಡಬಹುದು. ಪ್ರಸ್ತುತ ಸರ್ವೋಚ್ಚ ನ್ಯಾಯಾಲದ ನ್ಯಾಯಾಧೀಶರುಗಳ ಸಂಖ್ಯೆ ಮುಖ್ಯ ನ್ಯಾಯಾಧೀಶರನ್ನು ಒಳಗೊಂಡು 31 ಇದೆ.

191. ಈ ಕೆಳಗಿನ ಯಾವ ಒಕ್ಕೂಟ ಇತ್ತೀಚೆಗೆ ಸ್ವತಂತ್ರ "ಕ್ರೆಡಿಟ್ ರೇಟಿಂಗ್ ಏಜೆನ್ಸಿ" ಸ್ಥಾಪಿಸಲು ನಿರ್ಧರಿಸಿದೆ?

ಅ) ಅಸಿಯಾನ್

ಆ) ಬ್ರಿಕ್ಸ್

ಇ) ಸಾರ್ಕ್

ಈ) ಬಿಮ್ಸ್ ಸ್ಟೆಕ್

ಬ್ರಿಕ್ಸ್

ಬ್ರಿಕ್ಸ್ ದೇಶಗಳು ಸ್ವತಂತ್ರ ಕ್ರೆಡಿಟ್ ರೇಟಿಂಗ್ ಏಜೆನ್ಸಿ ರೂಪಿಸಲು ನಿರ್ಧರಿಸಿವೆ. ಗೋವಾದಲ್ಲಿ ನಡೆದ 8ನೇ ಬ್ರಿಕ್ಸ್ ಸಮ್ಮೇಳನದಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ. ಮಾರುಕಟ್ಟೆ ಆಧರಿತ ಸಿದ್ಧಾಂತಗಳ ಮೇಲೆ ಈ ಏಜೆನ್ಸಿ ರೂಪಿಸಲಾಗುತ್ತಿದ್ದು, ಜಾಗತಿಕ ಆರ್ಥಿಕ ಸ್ಥಿತಿಗತಿಗಳಿಗೆ ಇದು ಪೂರಕವಾಗಿರಲಿದೆ. ಸದ್ಯ ಪಾರದರ್ಶಕತೆ ಮತ್ತು ಪಾಲುದಾರಿಕೆ ಆಧರಿಸಿ ಕ್ರೆಡಿಟ್ ರೇಟಿಂಗ್ ಏಜೆನ್ಸಿಗಳು ಕಾರ್ಯನಿರ್ವಹಿಸುತ್ತಿವೆ. ಹೀಗಾಗಿವಿಭಿನ್ನ ಮಾದರಿಯ ಸಂಸ್ಥೆ ಇದಾಗಿರಲಿದೆ. ಈ ಕಲ್ಪನೆಯನ್ನು ಮೊದಲು ಎಕ್ಸಿಮ ಬ್ಯಾಂಕ್ ರೂಪಿಸಿತ್ತು. ನಂತರದಲ್ಲಿ ಕ್ರಿಸಿಲ್ ಭಾರತದಲ್ಲಿ ಅಧ್ಯಯನ ನಡೆಸಿ ಈ ಬಗ್ಗೆ ಸಮಗ್ರ ವರದಿ ರೂಪಿಸಿತ್ತು. ಇದನ್ನು ಇತರ ದೇಶಗಳೊಂದಿಗೆ ಹಂಚಿಕೊಳ್ಳಲಾಗಿತ್ತಾದರೂ, ಚೀನಾ ಇದಕ್ಕೆ ವಿರೋಧಿಸಿತ್ತು.

192. ಪ್ರಪ್ರಥಮ ಅಂತಾರಾಷ್ಟ್ರೀಯ ಸಂಖ್ಯಾಶಾಸ್ತ್ರ (International Prize in Statistics) ಪ್ರಶಸ್ತಿಯನ್ನು ಯಾರಿಗೆ ನೀಡಲಾಗಿದೆ?

ಅ) ಸರ್ ಡೇವಿಡ್ ಕಾಕ್ಸ್

ಆ) ಪೀಟರ್ ಹೆನ್ರಿಸನ್

www.karunaduexams.com

ಇ) ಸುರೇಶ್ ಶಾಸ್ತ್ರಿ

ಈ) ಸರ್ ಹೆಮ್ಲಸ್ ಬೆಥ್ಲೆಮ್

ಸರ್ ಡೇವಿಡ್ ಕಾಕ್ಸ್

ಖ್ಯಾತ ಬ್ರಿಟಿಷ್ ಸಂಖ್ಯಾಶಾಸ್ತ್ರಜ್ಞ ಸರ್ ಡೇವಿಡ್ ಕಾಕ್ಸ್ ಅವರಿಗೆ ಪ್ರಪ್ರಥಮ ಅಂತಾರಾಷ್ಟ್ರೀಯ ಸಂಖ್ಯಾಶಾಸ್ತ್ರ ಪ್ರಶಸ್ತಿಯನ್ನು ನೀಡಲಾಗಿದೆ. ಸರ್ ಡೇವಿಡ್ ಕಾಕ್ಸ್ ಅಭಿವೃದ್ಧಿಪಡಿಸಿರುವ ಸರ್ವೇವಲ್ ಅನಾಲಿಸಿಸ್ ಮಾಡೆಲ್ ಅಥವಾ ಕಾಕ್ಸ್ ಮಾಡೆಲ್ ಗಾಗಿ ಪ್ರಶಸ್ತಿಯನ್ನು ನೀಡಲಾಗಿದೆ. ಕಾಕ್ಸ್ ಮಾಡೆಲ್ ವೈದ್ಯಕೀಯ, ವಿಜ್ಞಾನ ಮತ್ತು ಇಂಜನಿಯರಿಂಗ್ ಕ್ಷೇತ್ರದಲ್ಲಿ ಬಳಕೆಯಾಗುತ್ತಿದೆ.

193. ಇತ್ತೀಚೆಗೆ ನಿಧನರಾದ "ಮೆಹರ್ ಮಿತ್ತಲ್" ಯಾವ ಭಾಷೆ ಸಿನಿಮಾದ ಪ್ರಸಿದ್ದ ಹಾಸ್ಯನಟ?

ಅ) ಮಲೆಯಾಳಂ

ಆ) ತಮಿಳು

ಇ) ಪಂಜಾಬಿ

ಈ) ಮರಾಠಿ

ಪಂಜಾಬಿ

ಪಂಜಾಬ್ ಸಿನಿಮಾದ ಖ್ಯಾತ ಹಾಸ್ಯನಟ ಮೆಹರ್ ಮಿತ್ತಲ್ ನಿಧನರಾಗಿದ್ದಾರೆ. ಅವರಿಗೆ 81 ವರ್ಷ ವಯಸ್ಸಾಗಿತ್ತು. ಮಿತ್ತಲ್ ಸುಮಾರು ನಾಲ್ಕು ದಶಕಗಳ ಕಾಲ ಜನರನ್ನು ರಂಜಿಸಿದ್ದರು. 100ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸಿದ್ದ ಅವರು ಕಿರುತೆರೆಯಲ್ಲೂ ಅಭಿನಯಿಸಿ ಜನಮನ ಗೆದ್ದಿದ್ದರು.

194. "ವಿಶ್ವ ವೈದ್ಯಕೀಯ ಸಂಘಟನೆ (World Medical Association)" ಅಧ್ಯಕ್ಷರಾಗಿ ಯಾರು ನೇಮಕಗೊಂಡರು?

ಅ) ಕೇತನ್ ದೇಸಾಯಿ

ಆ) ಕುಣಾಲ್ ಷಾಹ

ಇ) ಸುಧೀಂದ್ರ ಚಟರ್ಜಿ

ಈ) ಪರಮೇಶ್ ಕನ್ವ

ಕೇತನ್ ದೇಸಾಯಿ

ಭಾರತೀಯ ವೈದ್ಯಕೀಯ ಮಂಡಳಿಯ ಮಾಜಿ ಅಧ್ಯಕ್ಷರಾದ ಕೇತನ್ ದೇಸಾಯಿರವರು ವಿಶ್ವ ವೈದ್ಯಕೀಯ ಸಂಘಟನೆಯ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ದೇಸಾಯಿ ಅವರು 2016-17 ಅವಧಿ ವರೆಗೆ ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ಆದರೆ ಇವರನ್ನು ಅಧ್ಯಕ್ಷರನ್ನಾಗಿ ಆಯ್ಕೆಮಾಡಿರುವುದಕ್ಕೆ ತೀವ್ರ ವಿರೋಧ ವ್ಯಕ್ತವಾಗಿದೆ. ಭ್ರಷ್ಟಾಚಾರ ನಡೆಸಿದ ಆರೋಪ ಇವರ ಮೇಲಿದೆ.

www.karunaduexams.com

195. ಮುಂಬೈ ಪತ್ರಕರ್ತರ ಸಂಘದ ಜೀವಮಾನ ಸಾಧನೆ ಪ್ರಶಸ್ತಿಗೆ ಯಾರನ್ನು ಆಯ್ಕೆಮಾಡಲಾಗಿದೆ?

ಅ) ಸೌರವ್ ಗಂಗೂಲಿ

ಆ) ಸುನೀಲ್ ಗವಾಸ್ಕರ್

ಇ) ಸಚಿನ್ ತೆಂಡುಲ್ಕರ್

ಈ) ರಾಹುಲ್ ದ್ರಾವಿಡ್

ಸುನೀಲ್ ಗವಾಸ್ಕರ್

ಮಾಜಿ ಕ್ರಿಕೆಟ್ ಆಟಗಾರ ಸುನೀಲ್ ಗವಾಸ್ಕರ್ ಅವರನ್ನು ಮುಂಬೈ ಪತ್ರಕರ್ತರ ಸಂಘದ ಜೀವಮಾನ ಸಾಧನೆ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಡಿಸೆಂಬರ್ 11 ರಂದು ಪ್ರಶಸ್ತಿಯನ್ನು ಗವಾಸ್ಕರ್ ಅವರಿಗೆ ನೀಡಲಾಗುವುದು. ಮುಂಬೈ ಪತ್ರಕರ್ತರ ಸಂಘದ ಮೊದಲ ಪ್ರಶಸ್ತಿಯನ್ನು 2013ರಲ್ಲಿ ಬ್ಯಾಡ್ಮಿಂಟನ್ ದಂತಕತೆ ನಂದು ನಟೇಕರ್ ಅವರಿಗೆ ನೀಡಲಾಗಿತ್ತು.

196. ಈ ಕೆಳಗಿನ ಯಾವ ರಾಜ್ಯ ಐಟಿ@ಸ್ಕೂಲ್ ಯೋಜನೆಯಡಿ 10 ಸಾವಿರ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಶಾಲೆಗಳಿಗೆ ಅಂತರ್ಜಾಲ ಸೌಲಭ್ಯ ಒದಗಿಸಲಿದೆ?

ಅ) ಕೇರಳ

ಆ) ತೆಲಂಗಣ

ಇ) ಗೋವಾ

ಈ) ಮಹಾರಾಷ್ಟ್ರ

ಕೇರಳ

ಕೇರಳದ 10 ಸಾವಿರ ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಶಾಲೆಗಳು ಹೈಟೆಕ್ ಆಗಲಿದ್ದು, ನವೆಂಬರ್ 1ರಿಂದ ಅಂತರ್ಜಾಲ ಸೌಲಭ್ಯ ಪಡೆಯಲಿವೆ. ಇಂಥ ಯೋಜನೆ ಇದೇ ಮೊದಲು. ‘ಐಟಿ@ಸ್ಕೂಲ್’ ಯೋಜನೆ ಅಂಗವಾಗಿ ಬಿಎಸ್ ಎನ್ಎಲ್ ಬ್ರಾಡ್‌ಬ್ಯಾಂಡ್ ಸಂಪರ್ಕವನ್ನು ನೀಡುತ್ತಿದ್ದು, 2 ಎಂಬಿಪಿಎಸ್ ವೇಗದಲ್ಲಿ ಅನಿಯಮಿತ ಡೇಟಾ ಬಳಸಬಹುದು.

197. ದೇಶದ ಮೊದಲ ರೈಲ್ವೆ ವಿಶ್ವವಿದ್ಯಾಲಯ ಎಲ್ಲಿ ಸ್ಥಾಪನೆಯಾಗಲಿದೆ?

ಅ) ವಡೋದರ, ಗುಜರಾತ್

ಆ) ಜೈಪುರ, ರಾಜಸ್ತಾನ

ಇ) ಪುಣೆ, ಮಹಾರಾಷ್ಟ್ರ

ಈ) ಗುಂಟೂರು, ಆಂಧ್ರಪ್ರದೇಶ

ವಡೋದರ, ಗುಜರಾತ್

www.karunaduexams.com

ಗುಜಾರಾತ್ನ ವಡೋದರದಲ್ಲಿ ದೇಶದ ಮೊದಲ ರೈಲ್ವೆ ವಿಶ್ವವಿದ್ಯಾಲಯ ಸ್ಥಾಪನೆಯಾಗಲಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ. ರೈಲ್ವೆ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ಇದು ಸಹಾಯವಾಗಲಿದೆ.

198. ಇತ್ತೀಚೆಗೆ "ಐರೋಪ್ಯ ಒಕ್ಕೂಟ-ಭಾರತ ನವೋದ್ಯಮ ಶೃಂಗಸಭೆ"ಯನ್ನು ಯಾವ ನಗರದಲ್ಲಿ ಆಯೋಜಿಸಲಾಗಿತ್ತು?

ಅ) ಹೈದ್ರಾಬಾದ್

ಆ) ಬೆಂಗಳೂರು

ಇ) ಮುಂಬೈ

ಈ) ನವ ದೆಹಲಿ

ಬೆಂಗಳೂರು

ಮೊದಲ ಐರೋಪ್ಯ ಒಕ್ಕೂಟ-ಭಾರತ ನವೋದ್ಯಮ ಶೃಂಗಸಭೆಯನ್ನು ಬೆಂಗಳೂರಿನಲ್ಲಿ ಅಕ್ಟೋಬರ್ 20 ರಂದು ಆಯೋಜಿಸಲಾಗಿತ್ತು. ಯುರೋಪ್ ಮತ್ತು ಭಾರತದ ನವೋದ್ಯಮಗಳನ್ನು ಒಂದೇ ವೇದಿಕೆಗೆ ತರುವುದು ಈ ಶೃಂಗಸಭೆಯ ಉದ್ದೇಶವಾಗಿದೆ. ಈ ಶೃಂಗಸಭೆಯಲ್ಲಿ ಅನೇಕ ಉದ್ಯಮಿಗಳು, ತಜ್ಞರು ಭಾಗವಹಿಸಿದ್ದು, ಭಾರತದ ನವೋದ್ಯಮಗಳ ಗುಣಮಟ್ಟದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

199. ರಷ್ಯಾದಲ್ಲಿ ನಡೆಯಲಿರುವ 2018 ಫುಟ್ಬಾಲ್ ವಿಶ್ವಕಪ್ ಟೂರ್ನಿಯ ಲಾಂಛನವಾಗಿ (Mascot) ಯಾವುದನ್ನು ಆಯ್ಕೆಮಾಡಲಾಗಿದೆ?

ಅ) ಬೆಕ್ಕು

ಆ) ತೋಳ

ಇ) ಸಿಂಹ

ಈ) ಇಲಿ

ತೋಳ

2018ರಲ್ಲಿ ರಷ್ಯಾದಲ್ಲಿ ನಡೆಯಲಿರುವ ಫುಟ್ಬಾಲ್ ವಿಶ್ವಕಪ್ ಟೂರ್ನಿಯ ಲಾಂಛನವಾಗಿ ಬಾಹ್ಯಾಕಾಶದ ವಸ್ತ್ರ ತೊಟ್ಟಿರುವ ರೂಪದಲ್ಲಿರುವ ತೋಳವನ್ನು ಆಯ್ಕೆ ಮಾಡಲಾಗಿದೆ. ಈ ತೋಳವನ್ನು ಜಬಿವಕ (Zabivaka) ಎಂದು ಕರೆಯಲಾಗಿದೆ. ಕೊನೆಯ ಸುತ್ತಿನಲ್ಲಿ ತೋಳ, ಹುಲಿ ಮತ್ತು ಬೆಕ್ಕಿನ ಪ್ರತಿಮೆಯ ಚಿತ್ರದ ಲಾಂಛನದಲ್ಲಿ ಒಂದು ಲಾಂಛನವನ್ನು ಅಂತಿಮಗೊಳಿಸುವ ಉದ್ದೇಶದಿಂದ ಸಾರ್ವಜನಿಕರಿಗೆ ಮತದಾನ ಅವಕಾಶ ನೀಡಲಾಗಿತ್ತು. ತೋಳದ ಲಾಂಛನಕ್ಕೆ ಶೇ.53 ಮತ ಚಲಾವಣೆಯಾದರೆ, ಹುಲಿ ಪ್ರತಿಮೆಯ ಲಾಂಛನ ಶೇ.27 ಮತ್ತು ಬೆಕ್ಕಿನ ಪ್ರತಿಮೆಯ ಲಾಂಛನ ಶೇ.20 ರಷ್ಟು ಮತ ಪಡೆದಿದೆ. ಸುಮಾರು 10 ಲಕ್ಷ ಜನರು ಮತಚಲಾವಣೆ ಮಾಡಿದ್ದಾರೆ. ಫಿಫಾ ಫುಟ್ಬಾಲ್ ವಿಶ್ವಕಪ್ ಟೂರ್ನಿ

www.karunaduexams.com

2018ರಲ್ಲಿ ಜೂನ್ ಮತ್ತು ಜುಲೈನಲ್ಲಿ ನಡೆಯಲಿದೆ. ರಷ್ಯಾದ ಮಾಸ್ಕೋ, ಸೇಂಟ್ ಪೀಟರ್ಬರ್ಗ್, ಸೋಚಿ ಸೇರಿದಂತೆ ಒಟ್ಟು 11 ಸ್ಥಳಗಳಲ್ಲಿ ಪಂದ್ಯಗಳು ನಡೆಯಲಿವೆ.

200. ಇತ್ತೀಚೆಗೆ ನಿಧನರಾದ ಮೌಂಟ್ ಎವರೆಸ್ಟ್ ಶಿಖರವನ್ನು ಏರಿದ ಮೊದಲ ಮಹಿಳೆ "ಜಂಕೊ ತಾಬಿ" ಯಾವ ದೇಶದವರು?

ಅ) ರಷ್ಯಾ

ಆ) ಜಪಾನ್

ಇ) ನೇಪಾಳ

ಈ) ಚೀನಾ

ಜಪಾನ್

ಮೌಂಟ್ ಎವರೆಸ್ಟ್ ಶಿಖರವನ್ನು ಏರಿದ ಮೊದಲ ಮಹಿಳೆ ಜಪಾನ್ನ ಜಂಕೊ ತಾಬಿ ನಿಧನರಾಗಿದ್ದಾರೆ. ಅವರು 1975ರಲ್ಲಿ ಮೌಂಟ್ ಎವರೆಸ್ಟ್ ಶಿಖರವನ್ನು ಆಗ್ನೇಯ ದಿಕ್ಕಿನಿಂದ ಏರಿದರು ಹಾಗೂ ಈ ಸಾಧನೆಗೈದ ಜಗತ್ತಿನ ಮೊದಲ ಮಹಿಳೆಯಾಗಿ ದಾಖಲಾದರು. ಬಳಿಕ ಅವರು ಜಗತ್ತಿನ ಇತರ ಎತ್ತರದ ಶಿಖರಗಳನ್ನೂ ಏರಿದರು. ತಾಂಝಾನಿಯದ ಕಿಲಿಮಾಂಜರೊ, ಅಮೆರಿಕದ ಮೌಂಟ್ ಮೆಕಿನ್ಲೆ ಮತ್ತು ಅಂಟಾರ್ಕ್ಟಿಕದ ವಿನ್ಸನ್ ಮಾಸಿಫ್- ಅವರು ಏರಿದ ಇತರ ಪ್ರಮುಖ ಶಿಖರಗಳು.

201. ಜಗತ್ತಿನ ಅತಿ ಹೆಚ್ಚು ಅಲ್ಯೂಮಿನಿಯಂ ಉತ್ಪಾದಿಸುವ ರಾಷ್ಟ್ರ ಯಾವುದು?

ಅ) ಭಾರತ

ಆ) ಚೀನಾ

ಇ) ಅಮೆರಿಕ

ಈ) ರಷ್ಯಾ

ಚೀನಾ

ಚೀನಾ ವಿಶ್ವದ ಅತಿದೊಡ್ಡ ಅಲ್ಯೂಮಿನಿಯಂ ಉತ್ಪಾದಿಸುವ ರಾಷ್ಟ್ರವಾಗಿದೆ. ಚೀನಾದಲ್ಲಿ ವಾರ್ಷಿಕ 23,000 ಟನ್ ಅಲ್ಯೂಮಿನಿಯಂ ಉತ್ಪಾದಿಸಲಾಗುತ್ತಿದೆ. ಚೀನಾ ನಂತರ ರಷ್ಯಾ ಮತ್ತು ಕೆನಡಾ ವಿಶ್ವದ ಅತಿ ಹೆಚ್ಚು ಅಲ್ಯೂಮಿನಿಯಂ ಉತ್ಪಾದಿಸುವ ದೇಶಗಳು.

202. ಕೇಂದ್ರ ಸರ್ಕಾರ ಇತ್ತೀಚೆಗೆ ಜಾರಿಗೆ ತಂದ "ಉಡಾನ್" ಯೋಜನೆಯ ಉದ್ದೇಶ ____?

ಅ) ಪ್ರಾದೇಶಿಕ ವಿಮಾನ ಸಂಪರ್ಕ ಕಲ್ಪಿಸುವುದು

ಆ) ಮೀನುಗಾರರಿಗೆ ಜಿಪಿಎಸ್ ಸೌಲಭ್ಯ ನೀಡುವುದು

www.karunadueyams.com

ಇ) ಗಣಿಗಾರಿಕೆ ಮೇಲೆ ನಿಗಾ ಇಡುವುದು

ಈ) ಡ್ರೋನ್ ಮೂಲಕ ವನ್ಯಜೀವಗಳನ್ನು ಕಾಯುವುದು

ಪ್ರಾದೇಶಿಕ ವಿಮಾನ ಸಂಪರ್ಕ ಕಲ್ಪಿಸುವುದು

ಸಣ್ಣಪುಟ್ಟ ನಗರಗಳಿಗೆ ವಿಮಾನಯಾನ ಸಂಪರ್ಕ ಕಲ್ಪಿಸಲು ಹಾಗೂ ಜನಸಾಮಾನ್ಯರಿಗೆ ವಿಮಾನ ಸಂಚಾರ ಭಾಗ್ಯ ಒದಗಿಸಲು ಕೇಂದ್ರ ಸರ್ಕಾರ ಉಡಾನ್ (ಉಡೇ ದೇಶ್ ಕಾ ಆಮ್ ನಾಗರಿಕ್- ಜನಸಾಮಾನ್ಯರ ವಿಮಾನ ಹಾರಾಟಕ್ಕೆ ನೆರವು) ಹೆಸರಿನ ಯೋಜನೆ ಘೋಷಿಸಿದೆ. ಜನವರಿಯಿಂದ ಜಾರಿಗೆ ಬರುವ ಸಂಭಾವ್ಯತೆ ಇರುವ "ಉಡಾನ್" ಎಂಬ ಈ ಯೋಜನೆಯಡಿ ಒಂದು ತಾಸಿನ ಅವಧಿಯಲ್ಲಿ ಮುಗಿಯಬಹುದಾದ ವಿಮಾನ ಪ್ರಯಾಣಕ್ಕೆ ಗರಿಷ್ಠ 2500 ರೂ. ಪ್ರಯಾಣ ದರ ನಿಗದಿ ಮಾಡಲಾಗುತ್ತದೆ.

203. ಯಾವ ರಾಜ್ಯ ಇತ್ತೀಚೆಗೆ ವಿದ್ಯಾರ್ಥಿಗಳಿಗಾಗಿ "ಕೌಶಲ್ಯ ಸೇತು" ಎಂಬ ಕೌಶಲ್ಯ ಅಭಿವೃದ್ಧಿ ಯೋಜನೆ ಜಾರಿಗೊಳಿಸಿದೆ?

ಅ) ಮಹಾರಾಷ್ಟ್ರ

ಆ) ಕರ್ನಾಟಕ

ಇ) ಗುಜರಾತ್

ಈ) ಮಧ್ಯ ಪ್ರದೇಶ

ಮಹಾರಾಷ್ಟ್ರ

ಮಹಾರಾಷ್ಟ್ರ ಸರ್ಕಾರ "ಕೌಶಲ್ಯ ಸೇತು (Kaushalya SETU (Self-Employment and Talent Utilisation))" ಹೆಸರಿನಡಿ ಕೌಶಲ್ಯ ಅಭಿವೃದ್ಧಿ ಯೋಜನೆಯನ್ನು ಆರಂಭಿಸಿದೆ. ವಿದ್ಯಾರ್ಥಿಗಳಲ್ಲಿ ಕೌಶಲ್ಯ ಅಭಿವೃದ್ಧಿಪಡಿಸುವುದು ಯೋಜನೆಯ ಮುಖ್ಯ ಉದ್ದೇಶ. ಇದರಿಂದ ರಾಜ್ಯದಲ್ಲಿ ಸುಮಾರು 7.5 ಲಕ್ಷ ಉದ್ಯೋಗ ಸೃಷ್ಟಿಯಾಗಲಿದೆ. ಇದಕ್ಕಾಗಿ ಮಹಾರಾಷ್ಟ್ರ ಸರ್ಕಾರ 22 ಕೈಗಾರಿಕೆಗಳೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ.

204. ಇತ್ತೀಚೆಗೆ ನಿಧನರಾದ ಪ್ರಸಿದ್ಧ ಗಾಂಧಿವಾದಿ "ಮೆವ ರಾಮ್ಗೊಬಿನ್" ಯಾವ ದೇಶದವರು?

ಅ) ಭೂತಾನ್

ಆ) ದಕ್ಷಿಣ ಆಫ್ರಿಕಾ

ಇ) ಬಾಂಗ್ಲದೇಶ

ಈ) ಚೀನಾ

ದಕ್ಷಿಣ ಆಫ್ರಿಕಾ

www.karunaduexams.com

ದಕ್ಷಿಣ ಆಫ್ರಿಕಾದ ಹೋರಾಟಗಾರ ಮತ್ತು ಮಾಜಿ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಸಂಸತ್ತ್ ಸದಸ್ಯ ಮೆವ ರಾಮ್ಗೊಬಿನ್ ನಿಧನರಾದರು. ರಾಮ್ಗೊಬಿನ್ ಅವರು ಮಹಾತ್ಮಗಾಂಧಿ ಅವರ ಮೊಮ್ಮಗಳಾದ ಇಳಾ ಗಾಂಧಿ ಅವರ ಪತಿ. ಮಹಾತ್ಮ ಗಾಂಧಿ ಸ್ಥಾಪಿಸಿದ್ದ ಫಿನಿಕ್ಸ್ ಸೆಟ್ಲಮೆಂಟ್ ಟ್ರಸ್ಟ್ ನ ಅಧ್ಯಕ್ಷರಾಗಿದ್ದರು.

205. 2017 ಫಿಫಾ 17 ವರ್ಷದಳೊಗಿನವರ ಮಹಿಳಾ ವಿಶ್ವಕಪ್ ಗೆದ್ದ ದೇಶ ಯಾವುದು?

ಅ) ದಕ್ಷಿಣ ಕೊರಿಯಾ

ಆ) ಉತ್ತರ ಕೊರಿಯಾ

ಇ) ಜಪಾನ್

ಈ) ಸ್ಪೇನ್

ಉತ್ತರ ಕೊರಿಯಾ

ಉತ್ತರ ಕೊರಿಯಾ 2017 ಫಿಫಾ 17 ವರ್ಷದಳೊಗಿನವರ ಮಹಿಳಾ ವಿಶ್ವಕಪ್ ತನ್ನದಾಗಿಸಿಕೊಂಡಿತು. ಫೈನಲ್ ಪಂದ್ಯದಲ್ಲಿ ಉತ್ತರ ಕೊರಿಯಾ ತಂಡ ಜಪಾನ್ ತಂಡವನ್ನು ಮಣಿಸಿ ಪ್ರಶಸ್ತಿಯನ್ನು ಗೆದ್ದಿತು. ಆ ಮೂಲಕ ಎರಡು ಬಾರಿ ಪ್ರಶಸ್ತಿ ಗೆದ್ದ ಮೊದಲ ತಂಡ ಎಂಬ ಗೌರವಕ್ಕೆ ಉತ್ತರ ಕೊರಿಯಾ ಪಾತ್ರವಾಯಿತು. 2008 ರಲ್ಲಿ ಚೊಚ್ಚಲ ವಿಶ್ವಕಪ್ ಅನ್ನು ಈ ತಂಡ ಪಡೆದುಕೊಂಡಿತ್ತು.

206. ಇತ್ತೀಚೆಗೆ ಬಿಡುಗಡೆಗೊಂಡ ಫಿಫಾ ಶ್ರೇಣಿಯಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) 113

ಆ) 137

ಇ) 133

ಈ) 145

137

ಫಿಫಾ ಶ್ರೇಣಿಯಲ್ಲಿ ಭಾರತ 137ನೇ ಸ್ಥಾನವನ್ನು ಪಡೆದುಕೊಂಡಿದೆ. ಕಳೆದ ಆರು ವರ್ಷಗಳಲ್ಲಿ ಭಾರತ ಪಡೆದುಕೊಂಡ ಅತ್ಯುತ್ತಮ ಸ್ಥಾನ ಇದಾಗಿದೆ.

207. ಎರಡನೇ ಭಾರತ ಮತ್ತು ಚೀನಾ ಜಂಟಿ ಅಭ್ಯಾಸ ಇತ್ತೀಚೆಗೆ ಎಲ್ಲಿ ನಡೆಯಿತು?

ಅ) ಲಡಾಕ್

ಆ) ಕಚ್

ಇ) ಡೆಹ್ರಾಡೂನ್

ಈ) ಜೈಸ್ಲ್ಮೇರ್



www.karunaduexams.com

ಲಡಾಕ್

ಲಡಾಕ್‌ನಲ್ಲಿ ಇದೇ ಮೊದಲ ಬಾರಿಗೆ ಭಾರತ ಮತ್ತು ಚೀನಾ ಜಂಟಿ ಅಭ್ಯಾಸ ನಡೆಸಲಾಗಿದೆ. ಲಡಾಕ್ ಎರಡೂ ದೇಶಗಳ ನಡುವೆ ಸಂಘರ್ಷಕ್ಕೆ ಕಾರಣವಾಗುವ ಪ್ರದೇಶವಾಗಿದೆ. ಇದೇ ಪ್ರದೇಶದಲ್ಲಿ 1962ರ ಭಾರತ–ಚೀನಾ ಯುದ್ಧ ನಡೆದಿತ್ತು. ಭಾರತ–ಚೀನಾ ನಡುವಣ ವಿವಾದಾತ್ಮಕ ಗಡಿಯನ್ನು ವಾಸ್ತವ ನಿಯಂತ್ರಣ ರೇಖೆ ಎಂದು ಗುರುತಿಸಲಾಗುತ್ತದೆ. ನಿಖರವಾದ ಗಡಿ ಗುರುತುಗಳು ಇಲ್ಲದಿರುವುದರಿಂದ ಪೂರ್ವ ಲಡಾಕ್‌ನಲ್ಲಿ ಭಾರತ ಮತ್ತು ಚೀನಾ ಸೈನಿಕರ ನಡುವೆ ಸಂಘರ್ಷ ನಡೆಯುವುದು ಸಾಮಾನ್ಯವಾಗಿದೆ. ಅದೇ ಪ್ರದೇಶದಲ್ಲಿ ಜಂಟಿ ಅಭ್ಯಾಸ ನಡೆಸಲಾಯಿತು. ಭಾರತದ ಗಡಿ ಗ್ರಾಮವೊಂದರಲ್ಲಿ ಎರಡೂ ಸೇನೆಯ ಯೋಧರು ಭೂಕಂಪ ರಕ್ಷಣೆಯ ಅಣಕು ಕಾರ್ಯಾಚರಣೆ ನಡೆಸಿದರು ಎಂದು ರಕ್ಷಣಾ ಸಚಿವಾಲಯದ ಮೂಲಗಳು ತಿಳಿಸಿವೆ.

208. ಪೊಲೀಸ್ ಸ್ಮರಣೋತ್ಸವ ದಿನ (Police Commemoration Day)ವನ್ನು ಎಂದು ಆಚರಿಸಲಾಗುತ್ತದೆ?

ಅ) ಅಕ್ಟೋಬರ್ 20

ಆ) ಅಕ್ಟೋಬರ್ 21

ಇ) ಅಕ್ಟೋಬರ್ 22

ಈ) ಅಕ್ಟೋಬರ್ 23

ಅಕ್ಟೋಬರ್ 21

ಪೊಲೀಸ್ ಸ್ಮರಣೋತ್ಸವ ದಿನವನ್ನು ಅಕ್ಟೋಬರ್ 21ರಂದು ಆಚರಿಸಲಾಗುವುದು. 1959ರಲ್ಲಿ ಭಾರತ-ಚೀನಾ ಗಡಿ ಭಾಗದಲ್ಲಿ ಪೊಲೀಸ್ ತುಕಡಿಯ ಮೇಲೆ ಚೀನಾ ಹಠಾತ್ ದಾಳಿ ನಡೆಸಿದಾಗ ಹತ್ತಕ್ಕೂ ಹೆಚ್ಚು ಪೊಲೀಸರು ಮರಣ ಹೊಂದಿದರು. ಅವರ ಸ್ಮರಣಾರ್ಥ ಈ ದಿನವನ್ನು ಆಚರಿಸಲಾಗುತ್ತದೆ. 1961 ಚೀನಾ-ಭಾರತ ನಂತರ ಇದುವರೆಗೂ ಸುಮಾರು 33,000 ಪೊಲೀಸರು ದೇಶಕ್ಕಾಗಿ ಪ್ರಾಣ ಬಿಟ್ಟಿದ್ದಾರೆ.

209. ಭಾರತೀಯ ಸೇನೆಯ ಗೋರ್ಖಾ ರೈಫಲ್ಸ್ ವಿಭಾಗ ಬ್ರಿಟಿಷ್ ಸೇನೆ ಆಯೋಜಿಸಿದ್ದ ವಿಶ್ವದ ಅತ್ಯಂತ ಯುದ್ಧ ಕೌಶಲ್ಯ ಪ್ರದರ್ಶನ ಕಾರ್ಯಾಚರಣೆಯಲ್ಲಿ ಯಾವ ಪದಕ ಪಡೆದುಕೊಂಡಿತು?

ಅ) ಚಿನ್ನ

ಆ) ಬೆಳ್ಳಿ

ಇ) ಕಂಚು

ಈ) ಅ & ಆ

ಚಿನ್ನ

www.karunaduexams.com

ಭಾರತೀಯ ಸೇನೆಯ ಗೋರ್ಖಾ ರೈಫಲ್ಸ್ ವಿಭಾಗ ಬ್ರಿಟಿಷ್ ಸೇನೆ ಆಯೋಜಿಸಿದ್ದ ವಿಶ್ವದ ಅತ್ಯಂತ ಯುದ್ಧ ಕೌಶಲ್ಯ ಪ್ರದರ್ಶನ ಕಾರ್ಯಾಚರಣೆಯಲ್ಲಿ ಸ್ವರ್ಣ ಪದಕ ಗೆದ್ದಿದೆ. ವಾರ್ಷಿಕವಾಗಿ ನಡೆಸಲಾಗುವ ಅಂತಾರಾಷ್ಟ್ರೀಯ ಮಟ್ಟದ ಸೇನಾ ಗಸ್ತು ಕವಾಯತು ಕ್ಯಾಂಬ್ರಿಯನ್ ಪ್ಯಾಟ್ರೋಲ್ ನ್ನು ಬ್ರಿಟಿಷ್ ಸೇನೆ ಆಯೋಜಿಸಿತ್ತು. ವಿಶ್ವದ ಅತ್ಯಂತ ಕಠಿಣ ಸಮರಾಭ್ಯಾಸ ಅಥವಾ ಗಸ್ತು ಕಾರ್ಯಾಚರಣೆಯಲ್ಲಿ ಭಾರತೀಯ ಸೇನೆಯ ಗೋರ್ಖಾ ರೈಫಲ್ಸ್ ವಿಭಾಗದ 2/8 ತಂಡ ಭಾಗವಹಿಸಿ ಸ್ವರ್ಣ ಪದಕ ಪಡೆದಿದೆ.

210. ಯಾವ ದೇಶದ ಸಂಸತ್ತು ಮದ್ಯ ಮಾರಾಟ, ಆಮದು ಮತ್ತು ಉತ್ಪಾದನೆ ಮೇಲೆ ನಿಷೇಧ ಹೇರುವ ಸಲುವಾಗಿ ಕಾನೂನು ಜಾರಿಗೆ ತಂದಿದೆ?

ಅ) ಇರಾನ್

ಆ) ಇರಾಕ್

ಇ) ಈಜಿಪ್ಟ್

ಈ) ಸಿಂಗಾಪುರ

ಇರಾಕ್

ಇರಾಕ್ ಸಂಸತ್ತು ಮದ್ಯ ಮಾರಾಟ, ಆಮದು ಮತ್ತು ಉತ್ಪಾದನೆ ಮೇಲೆ ನಿಷೇಧ ಹೇರುವ ಸಲುವಾಗಿ ಕಾನೂನು ಜಾರಿಗೆ ತಂದಿದೆ. ಸರ್ಕಾರದ ಈ ನಿರ್ಣಯವನ್ನು ಕೆಲವರು ವಿರೋಧಿಸಿದರೆ ಕೆಲವರು ಸ್ವಾಗತಿಸಿದ್ದಾರೆ. ಮದ್ಯ ಸೇವನೆ ಇಸ್ಲಾಂ ಧರ್ಮಕ್ಕೆ ವಿರುದ್ದವಾಗಿದ್ದು, ಈ ಕಾನೂನು ಜಾರಿಗೆ ತರಲಾಗಿದೆ ಎಂದು ಸರ್ಕಾರ ತಿಳಿಸಿದೆ.

211. ಈ ಕೆಳಗಿನ ಯಾರು ರಾಷ್ಟ್ರಪತಿಗಳಿಂದ ನೇಮಕಗೊಳ್ಳುತ್ತಾರೆ?

ಅ) ಮುಖ್ಯ ಚುನಾವಣಾಧಿಕಾರಿ

ಆ) ಲೋಕಸಭಾ ಸ್ಪೀಕರ್

ಇ) ರಾಜ್ಯಸಭಾದ ಉಪಸಭಾಪತಿ

ಈ) ಮೇಲಿನ ಎಲ್ಲರೂ

ಮುಖ್ಯ ಚುನಾವಣಾಧಿಕಾರಿ

212. ಈ ಕೆಳಗಿನ ಯಾವುದು ಭಾರತದ ಮೊದಲ "ನವೋದ್ಯಮ ನಿಯತಕಾಲಿಕೆ (Startup Magzine)" ಆಗಿದೆ?

ಅ) ಕೋಫೌಂಡರ್

ಆ) ನ್ಯೂಇಂಡಿಯಾ

ಇ) ವಿಷನ್

ಈ) ಸ್ಟಾರ್ಟ್ ಆಫ್ ಕಿಂಗ್

ಕೋಫೌಂಡರ್

ಭಾರತದ ಮೊದಲ ನವೋದ್ಯಮ ನಿಯತಕಾಲಿಕೆ "ಕೋಫೌಂಡರ್ (Cofounder)" ಆದೀಶ್ ವರ್ಮಾ ಮತ್ತು ಅರುಣ್ ರಾಜ್ ರಾಜೇಂದ್ರನ್ ಹೊರತಂದಿದ್ದಾರೆ. ನವೋದ್ಯಮ ಮತ್ತು ಹೊಸ ಉದ್ದಿಮೆಗಳ ಯಶಸ್ಸಿನ ಕಥೆಗಳನ್ನು ಈ ನಿಯತಕಾಲಿಕೆ ಒಳಗೊಂಡಿರಲಿದೆ. ಹೊಸದಾಗಿ ನವೋದ್ಯಮ ಆರಂಭಿಸಲಿರುವ ಸಿಇಓ ಮತ್ತು ಸಿಐಓ ಗಳಿಗೆ ನವೋದ್ಯಮದ ಬಗ್ಗೆ ಅಗತ್ಯ ಮಾಹಿತಿಯನ್ನು ನೀಡಲು ಇದು ಸಹಕಾರಿಯಾಗಲಿದೆ.

213. ಸಾಫ್ಟ್ವೇರ್ ದಿಗ್ಗಜ ಮೈಕ್ರೋಸಾಫ್ಟ್ ದೇಶದ ಮೊದಲ ಸೈಬರ್ ಭದ್ರತೆ ಕೇಂದ್ರವನ್ನು ಎಲ್ಲಿ ಸ್ಥಾಪಿಸಿದೆ?

ಅ) ಬೆಂಗಳೂರು

ಆ) ಮುಂಬೈ

ಇ) ಪುಣೆ

ಈ) ನವದೆಹಲಿ

ನವದೆಹಲಿ

ಮೈಕ್ರೋಸಾಫ್ಟ್ ತನ್ನ ಮೊದಲ ಸೈಬರ್ ಭದ್ರತೆ ಕೇಂದ್ರವನ್ನು ನವದೆಹಲಿಯಲ್ಲಿ ಇತ್ತೀಚೆಗೆ ಸ್ಥಾಪಿಸಿದೆ. ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳು ಸೈಬರ್ ದಾಳಿ ಎದುರಿಸಲು ಇದು ಅನುಕೂಲವಾಗಿದೆ. ಇತ್ತೀಚಿನ ದಿನಗಳಲ್ಲಿ ದೊಡ್ಡ ಮಟ್ಟದಲ್ಲಿ ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್ ವಂಚನೆಯಂತಹ ಸೈಬರ್ ಪ್ರಕರಣಗಳು ದೇಶದಲ್ಲಿ ಗಣನೀಯವಾಗಿ ಹೆಚ್ಚಿದ್ದು, ಈ ಕೇಂದ್ರದ ಸ್ಥಾಪನೆ ಭಾರತಕ್ಕೆ ಅತ್ಯಂತ ಅವಶ್ಯಕವಾಗಿದೆ.

214. ವೈದ್ಯಕೀಯ ಕ್ಷೇತ್ರದಲ್ಲಿ ಶ್ರೇಷ್ಠ ಸಾಧನೆ ಮಾಡಿದವರಿಗೆ ಕೊಡಲಾಗುವ ಡಾ. ಬಿಧಾನ್ ಚಂದ್ರ ರಾಯ್ (ಬಿ ಸಿ ರಾಯ್) ಪ್ರಶಸ್ತಿಯನ್ನು ಪ್ರಸ್ತುಕ ಸಾಲಿನಲ್ಲಿ ಯಾರಿಗೆ ನೀಡಲಾಗಿದೆ?

ಅ) ಡಾ. ಗಂಗರಾಮ್ ಬಡೇರಿಯ

ಆ) ಡಾ. ರಣದೀಪ್ ಗುಲೇರಿಯ

ಇ) ಡಾ. ನವೀನ್ ಕಿರಣ್

ಈ) ಡಾ. ಗುರ್ಜಿತ್ ಸಿಂಗ್

ಡಾ. ರಣದೀಪ್ ಗುಲೇರಿಯ

ಎಐಐಎಮ್ಎಸ್ ನ ಶ್ವಾಸಕೋಶ ವಿಭಾಗದ ಮುಖ್ಯಸ್ಥ ಡಾ. ರಣದೀಪ್ ಗುಲೇರಿಯ ಮತ್ತು ಗಂಗಾ ರಾಮ್ ಆಸ್ಪತ್ರೆಯ ಮೂಳೆ ಚಿಕಿತ್ಸೆ ವಿಭಾಗದ ಡಾ ಸಿ ಎಸ್ ಯಾಧವ್ ಅವರನ್ನು ಪ್ರಸ್ತಕ ಸಾಲಿನ ಡಾ. ಬಿಧಾನ್ ಚಂದ್ರ ರಾಯ್ (ಬಿ ಸಿ ರಾಯ್) ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.

215. 2016 ಅಮೆರಿಕ ಗ್ರ್ಯಾನ್ ಪ್ರಿ ಫಾರ್ಮುಲಾ ಒನ್ ರೇಸ್‌ನಲ್ಲಿ ಪ್ರಶಸ್ತಿಯನ್ನು ಗೆದ್ದವರು ____?


www.karunaduexams.com

ಅ) ಲೂಯಿಸ್ ಹ್ಯಾಮಿಲ್ಟನ್

ಆ) ಸರ್ಜಿಯೊ ಪೆರೆಜ್

ಇ) ನಿಕೋ ರೋಸ್ಬರ್ಗ್

ಈ) ಸೆಬಾಸ್ಟಿಯನ್ ವೆಟಾಲ್

ಲೂಯಿಸ್ ಹ್ಯಾಮಿಲ್ಟನ್

ಬ್ರಿಟನ್‌ನ ಲೂಯಿಸ್ ಹ್ಯಾಮಿಲ್ಟನ್ ಅವರು ಇಲ್ಲಿ ನಡೆದ ಅಮೆರಿಕ ಗ್ರ್ಯಾನ್ ಪ್ರಿ ಫಾರ್ಮುಲಾ ಒನ್ ರೇಸ್‌ನಲ್ಲಿ ಚಾಂಪಿಯನ್ ಆಗಿದ್ದಾರೆ. ಈ ಮೂಲಕ ವೃತ್ತಿ ಜೀವನದ 50ನೇ ಪ್ರಶಸ್ತಿ ಎತ್ತಿ ಹಿಡಿದರು. ಹ್ಯಾಮಿ ಲ್ಟನ್ ಈ ಋತುವಿನಲ್ಲಿ ಗೆದ್ದ ಏಳನೇ ಪ್ರಶಸ್ತಿ ಇದಾಗಿದೆ. ರೋಸ್‌ಬರ್ಗ್ ಎರಡನೇ ಸ್ಥಾನ ಗಳಿಸಿದರೆ, ರೆಡ್‌ಬುಲ್ ತಂಡದ ಆಸ್ಟ್ರೇಲಿಯಾದ ಚಾಲಕ ಡೇನಿಯಲ್ ರಿಕಿಯಾರ್ಡೊ ಮೂರನೇ ಸ್ಥಾನಕ್ಕೆ ತೃಪ್ತಿ ಪಟ್ಟರು.

216. ಈ ಕೆಳಗಿನ ದೇಶಗಳನ್ನು ಗಮನಿಸಿ:

I) ಸ್ವಿಟ್ಜರ್ಲ್ಯಾಂಡ್

II) ಐಸ್ ಲ್ಯಾಂಡ್

III) ನಾರ್ವೆ

IV) ಲಿಚ್ಟೆನ್ಸ್ಟಿನ್

ಈ ಮೇಲಿನ ಯಾವ ರಾಷ್ಟ್ರಗಳು ಐರೋಪ್ಯ ಮುಕ್ತ ವ್ಯಾಪಾರ ಒಕ್ಕೂಟ (EFTA)ದ ಸದಸ್ಯ ರಾಷ್ಟ್ರಗಳಾಗಿವೆ?

ಅ) I, II & III

ಆ) II, III & IV

ಇ) I, III & IV

ಈ) I, II, III & IV

I, II, III & IV

ಐರೋಪ್ಯ ಮುಕ್ತ ವ್ಯಾಪಾರ ಒಕ್ಕೂಟ ಪ್ರಾದೇಶಿಕ ವ್ಯಾಪಾರ ಸಂಘಟನೆಯಾಗಿದ್ದು, ಯುರೋಪ್ನ ನಾಲ್ಕು ರಾಷ್ಟ್ರಗಳಾದ ಸ್ವಿಟ್ಜರ್ಲ್ಯಾಂಡ್, ಐಸ್ ಲ್ಯಾಂಡ್, ನಾರ್ವೆ ಮತ್ತು ಲಿಚ್ಟೆನ್ಸ್ಟಿನ್ ಇದರ ಸದಸ್ಯ ರಾಷ್ಟ್ರಗಳು.

217. ಯಾವ ದೇಶವನ್ನು ಮಣಿಸಿ ಭಾರತ ವಿಶ್ವಕಪ್ ಕಬಡ್ಡಿಯಲ್ಲಿ ಪ್ರಶಸ್ತಿಯನ್ನು ಪಡೆದುಕೊಂಡಿತು?

ಅ) ಜಪಾನ್

ಆ) ಆಸ್ಟ್ರೇಲಿಯಾ

ಇ) ಇರಾನ್

www.karunaduexams.com

ಈ) ಥಾಯ್ಲೆಂಡ್

ಇರಾನ್

ವಿಶ್ವಕಪ್ ಕಬಡ್ಡಿ ಫೈನಲ್ ಪಂದ್ಯದಲ್ಲಿ ಭಾರತ–ಇರಾನ್ ನಡುವಿನ ಸೆಣಸಾಟದಲ್ಲಿ ಇರಾನ್ ತಂಡವನ್ನು ಬಗ್ಗುಬಡಿದ ಭಾರತದ ಆಟಗಾರರು ವಿಶ್ವಕಪ್ ಕಬಡ್ಡಿ ಚಾಂಪಿಯನ್ ಮುಡಿಗೇರಿಸಿಕೊಂಡರು. ಈ ಮೂಲಕ ಐತಿಹಾಸಿಕ ಸಾಧನೆ ತೋರಿದರು. ಇದರೊಂದಿಗೆ 2004, 2007 ಹಾಗೂ 2016ರಲ್ಲಿ ಇರಾನ್ ವಿರುದ್ಧ ನಡೆದ ಮೂರೂ ಫೈನಲ್‌ನಲ್ಲೂ ವಿಶ್ವಕಪ್ ಗೆದ್ದ ಹ್ಯಾಟ್ರಿಕ್ ಸಾಧನೆ ಭಾರತದ್ದಾಗಿದೆ.

218. ರಾಜ್ಯ ನಿರ್ದೇಶಕ ತತ್ವಗಳು, ರಾಜ್ಯಸಭೆಗೆ ಸದಸ್ಯರ ನಾಮಕರಣ, ರಾಷ್ಟ್ರಧ್ಯಕ್ಷರ ಚುನಾವಣಾ ವಿಧಾನ ಯಾವ ದೇಶದ ಸಂವಿಧಾನದಿಂದ ಎರವರಲು ಪಡೆಯಲಾಗಿದೆ?

ಅ) ಬ್ರಿಟನ್ ಸಂವಿಧಾನ

ಆ) ಅಮೆರಿಕಾ ಸಂವಿಧಾನ

ಇ) ಐರ್ಲೆಂಡ್ ಸಂವಿಧಾನ

ಈ) ಕೆನಡಾ ಸಂವಿಧಾನ

ಐರ್ಲೆಂಡ್ ಸಂವಿಧಾನ

ರಾಜ್ಯ ನಿರ್ದೇಶಕ ತತ್ವಗಳು, ರಾಜ್ಯಸಭೆಗೆ ಸದಸ್ಯರ ನಾಮಕರಣ, ರಾಷ್ಟ್ರಧ್ಯಕ್ಷರ ಚುನಾವಣಾ ವಿಧಾನವನ್ನು ಐರ್ಲೆಂಡ್ ಸಂವಿಧಾನದಿಂದ ಎರವಲು ಪಡೆಯಲಾಗಿದೆ.

219. "2016 ಹಾರ್ಟ್ ಆಫ್ ಏಷ್ಯಾ" ಸಮ್ಮೇಳನ ಡಿಸೆಂಬರ್ 2016 ರಲ್ಲಿ ಭಾರತದ ಯಾವ ನಗರದಲ್ಲಿ ನಡೆಯಲಿದೆ?

ಅ) ನವದೆಹಲಿ

ಆ) ಅಮೃತಸರ

ಇ) ಕೊಚ್ಚಿ

ಈ) ಲೂಧಿಯಾನ

ಅಮೃತಸರ

ಡಿಸೆಂಬರ್ ಮೊದಲ ವಾರದಲ್ಲಿ ಭಾರತದ ಅಮೃತ ಸರದಲ್ಲಿ ನಡೆಯುವ ಹಾರ್ಟ್ ಆಫ್ ಏಷ್ಯಾ ಸಮ್ಮೇಳನ ನಡೆಯಲಿದೆ. ಈ ಸಮ್ಮೇಳನದಲ್ಲಿ ಪಾಕಿಸ್ತಾನ ಭಾಗವಹಿಸುವುದಾಗಿ ಪಾಕಿಸ್ತಾನ ವಿದೇಶಾಂಗ ವ್ಯವಹಾರಗಳ ಕಾರ್ಯದರ್ಶಿ ಸತ್ರಾಜ್ ಆಜೀಜ್ ಹೇಳಿದ್ದಾರೆ. ರಷ್ಯಾ, ಚೀನಾ, ಟರ್ಕಿ ಸೇರಿದಂತೆ ಒಟ್ಟುನ 14 ರಾಷ್ಟ್ರಗಳ ವಿದೇಶಾಂಗ ಸಚಿವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

www.karunaduexams.com

220. ಯಾವ ರಾಜ್ಯದಲ್ಲಿ ಇತ್ತೀಚೆಗೆ ಪ್ರಧಾನಿ ಮೋದಿ ಅವರು 2540 ಕಿ.ಮೀ ಉದ್ದದ "ಉರ್ಜ ಗಂಗಾ" ಕೊಳವೆ ಅನಿಲ ಯೋಜನೆಗೆ ಚಾಲನೆ ನೀಡಿದರು?

ಅ) ಉತ್ತರಖಂಡ

ಆ) ಹಿಮಾಚಲ ಪ್ರದೇಶ

ಇ) ಉತ್ತರ ಪ್ರದೇಶ

ಈ) ಜಾರ್ಖಂಡ್

ಉತ್ತರ ಪ್ರದೇಶ

ನರೇಂದ್ರ ಮೋದಿ ಅವರು ಉತ್ತರ ಪ್ರದೇಶದ ವಾರಣಾಸಿಯಲ್ಲಿ 2540 ಕಿ.ಮೀ ಉದ್ದದ ಕೊಳವೆ ಅನಿಲ ಯೋಜನೆಗೆ ಚಾಲನೆ ನೀಡಿದರು. ಈ ಯೋಜನೆಯ ಮೂಲಕ ಶುದ್ದ ಮತ್ತು ಪರಿಸರ ಸ್ನೇಹಿ ಅಡುಗೆ ಅನಿಲವನ್ನು ವಾರಣಾಸಿ, ಪಾಟ್ನ, ಜೇಮ್ ಶೆಡ್ಪುರ, ಕೊಲ್ಕತ್ತ, ರಾಂಚಿ, ಭುಬನೇಶ್ವರ ಮತ್ತು ಕಟಕ್ ನಗರಗಳಿಗೆ ಪೂರೈಸಲಾಗುವುದು. ಈ ಯೋಜನೆಯು 2020ರ ವೇಳೆಗೆ ಪೂರ್ಣಗೊಳ್ಳಲಿದೆ.

221. ಸುಮಾರು 15,300 ಕಿ.ಮೀ ನಿಲುಗಡೆ ರಹಿತ ಹಾರಾಟ ನಡೆಸಿ ದಾಖಲೆ ನಿರ್ಮಿಸಿದ ವಿಮಾನ ಸಂಸ್ಥೆ ಯಾವುದು?

ಅ) ಏರ್ ಇಂಡಿಯಾ

ಆ) ಜೆಟ್ ಏರ್ವೇಸ್

ಇ) ಬ್ರಿಟಿಷ್ ಏರ್ವೇಸ್

ಈ) ಕಿಂಗ್ ಫಿಷರ್

ಏರ್ ಇಂಡಿಯಾ

ಭಾರತ ಸರ್ಕಾರ ಸ್ವಾಮ್ಯದ ಏರ್ ಇಂಡಿಯಾ ಸಂಸ್ಥೆಯ ಹಿರಿಮೆಗೆ ಮತ್ತೊಂದು ಗರಿ ಸೇರ್ಪಡೆಯಾಗಿದ್ದು, ನವದೆಹಲಿಯಿಂದ ಸ್ಯಾನ್ ಫ್ರಾನ್ಸಿಸ್ ಕೋ ಗೆ ನಿಲುಗಡೆ ರಹಿತ ಪ್ರಯಾಣ ಮಾಡುವ ಮೂಲಕ ದಾಖಲೆ ಬರೆದಿದೆ.ದೆಹಲಿಯಿಂದ-ಸ್ಯಾನ್ ಫ್ರಾನ್ಸಿಸ್ಕೋ ನಡುವಿನ ಸುಮಾರು 15,300 ಕಿ.ಮೀ. ದೂರವನ್ನು ಯಾವುದೇ ನಿಲುಗಡೆ ಇಲ್ಲದೇ ಕೇವಲ 14.5 ಗಂಟೆಯಲ್ಲಿ ಪ್ರಯಾಣಿಸುವ ಮೂಲಕ ಏರ್ ಇಂಡಿಯಾ ವಿಮಾನಯಾನ ಸಂಸ್ಥೆ ಹೊಸ ದಾಖಲೆ ಬರೆದಿದೆ. ಆ ಮೂಲಕ ಈ ಹಿಂದೆ ಎಮಿರೇಟ್ಸ್ ಸಂಸ್ಥೆಯ ಹೆಸರಿನಲ್ಲಿದ್ದ ವಿಶ್ವದಾಖಲೆಯನ್ನು ಏರ್ ಇಂಡಿಯಾ ತನ್ನ ಹೆಸರಿಗೆ ಬರೆಸಿಕೊಂಡಿದೆ. ಈ ಹಿಂದೆ ಎಮಿರೇಟ್ಸ್ ಸಂಸ್ಥೆ ದುಬೈನಿಂದ ಆಕ್ಲೆಂಡ್‌ಗೆ 14,120 ಕಿ.ಮೀ. ದೂರ ನಿಲುಗಡೆ ರಹಿತ ಹಾರಾಟ ನಡೆಸುತಿತ್ತು. ಏರ್ ಇಂಡಿಯಾ ಕೂಡ ನಿಲುಗಡೆ ರಹಿತ ದೂರ ಪ್ರಯಾಣ ಮಾಡುತ್ತಿತ್ತಾದರೂ ಇಷ್ಟು ಪ್ರಮಾಣದ ದೂರವನ್ನು ಕ್ರಮಿಸಿರಲಿಲ್ಲ. ಈ ಮುನ್ನ ದೆಹಲಿಯಿಂದ ಸ್ಯಾನ್ ಫ್ರಾನ್ಸಿಸ್ಕೋಗೆ ಏರ್ ಇಂಡಿಯಾ ಅಟ್ಲಾಂಟಿಕ್ ಸಾಗರ ಮೇಲ್ಭಾಗದಿಂದ ವಿಮಾನ ಹಾರಾಟ ನಡೆಸುತ್ತಿತ್ತು. ಈ ಮಾರ್ಗ 13,900 ಕಿ.ಮೀ. ದೂರ ಇದ್ದು, ವಿಶ್ವದ ಎರಡನೇ ಅತಿ ದೂರದ ನಿಲುಗಡೆ ರಹಿತ ಮಾರ್ಗ ಎಂಬ ಹೆಗ್ಗಳಿಕೆ ಪಡೆದಿತ್ತು.

www.karunaduexams.com

222. 2016 ಹೂಗೇವೀನ್ ಇಂಟರ್ನ್ಯಾಶನಲ್ ಚೆಸ್ ಟೂರ್ನಮೆಂಟ್ನಲ್ಲಿ ಸತತ ಎರಡನೆ ಬಾರಿ ಪ್ರಶಸ್ತಿ ಗೆದ್ದು ಈ ಸಾಧನೆ ಮಾಡಿದ ಭಾರತದ ಮೊದಲ ಚೆಸ್ ಆಟಗಾರ ಯಾರು?

ಅ) ವಿಶ್ವನಾಥನ್ ಆನಂದ್

ಆ) ಅಭಿಜಿತ್ ಗುಪ್ತಾ

ಇ) ಹರಿಕಾ ದ್ರೋಣವಳ್ಳಿ

ಈ) ಎಂ ಆರ್ ಲಲಿತ್ ಬಾಬು

ಅಭಿಜಿತ್ ಗುಪ್ತಾ

ಗ್ರಾಂಡ್ಮ್ಯಾಸ್ಟರ್ ಹಾಗೂ ಕಾಮನ್ವೆಲ್ತ್ ಗೇಮ್ಸ್ ಚಾಂಪಿಯನ್ ಅಭಿಜಿತ್ ಗುಪ್ತಾ ಹೂಗೇವೀನ್ ಇಂಟರ್ನ್ಯಾಶನಲ್ ಚೆಸ್ ಟೂರ್ನಮೆಂಟ್ನಲ್ಲಿ ಐತಿಹಾಸಿಕ ಸಾಧನೆ ಮಾಡಿದ್ದಾರೆ. ಹಾಲೆಂಡ್ನ ಹೂಗೇವೀನ್ನಲ್ಲಿ ನಡೆದ ಫಿಡೆ ಓಪನ್ನಲ್ಲಿ ಸತತ ಎರಡನೆ ಬಾರಿ ಪ್ರಶಸ್ತಿ ಎತ್ತಿ ಹಿಡಿದ ಅಭಿಜಿತ್ ಈ ಸಾಧನೆ ಮಾಡಿದ ಮೊದಲ ಚೆಸ್ ಪಟು ಎಂಬ ಕೀರ್ತಿಗೆ ಭಾಜನರಾಗಿದ್ದಾರೆ. ಭಾರತೀಯರ ಪ್ರಾಬಲ್ಯಕ್ಕೆ ಸಾಕ್ಷಿಯಾದ ಪ್ರಸ್ತುತ ಚೆಸ್ ಟೂರ್ನಿಯಲ್ಲಿ ಗ್ರಾಂಡ್ಮ್ಯಾಸ್ಟರ್ ಸಂದೀಪನ್ ಚಂದ್ ಎರಡನೆ ಸ್ಥಾನ ಪಡೆದರು. ಮೂರನೆ ಹಾಗೂ ನಾಲ್ಕನೆ ಸ್ಥಾನವನ್ನು ಕ್ರಮವಾಗಿ ಜಿಎಂ ಎಂ.ಆರ್. ಲಲಿತ್ ಬಾಬು ಹಾಗೂ ಜಿಎಂ ಎಂ.ಶ್ಯಾಮ್ ಸುಂದರ್ ಪಡೆದಿದ್ದಾರೆ.

223. ಈ ಕೆಳಗಿನ ಯಾರು “2016 ಮಿಸ್ಟರ್. ಏಷ್ಯಾ ಪ್ರಶಸ್ತಿ”ಯನ್ನು ಮುಡಿಗೇರಿಸಿಕೊಂಡರು?

ಅ) ಸುಧೀಂದ್ರ ಕೃಷ್ಣನ್

ಆ) ಅರ್ಮಿಂದರ್ ಸಿಂಗ್

ಇ) ಜಿ ಬಾಲಕೃಷ್ಣ

ಈ) ರಮೇಶ್ ಕುಮಾರ್

ಜಿ ಬಾಲಕೃಷ್ಣ

ಬೆಂಗಳೂರಿನ ವೈಟ್ ಫೀಲ್ಡ್ ಮೂಲದ ಜಿ.ಬಾಲಕೃಷ್ಣ (25) ಅವರು ಇತ್ತೀಚೆಗೆ ಫಿಲಿಪ್ಪೈನ್ಸ್ ನಲ್ಲಿ ನಡೆದ ಫಿಲಿ-ಏಷ್ಯಾ ಚಾಂಪಿಯನ್ ಷಿಪ್ ನಲ್ಲಿ ಮಿಸ್ಟರ್ ಏಷ್ಯಾ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಬೆಂಗಳೂರಿನ ಆರ್ನಾಲ್ಡ್ ಎಂದೇ ಕರೆಯಪ್ಪಡುವ ಬಾಲಕೃಷ್ಣ ಅವರು ಇತ್ತೀಚೆಗೆ ಜರ್ಮನಿಯಲ್ಲಿ ನಡೆದ ಅಂಡರ್-24 ಕೆಟಗಿರಿಯಲ್ಲಿ ಮಿಸ್ಟರ್ ಯುನಿವರ್ಸ್ ಆಗಿ ಆಯ್ಕೆಯಾಗಿದ್ದರು.

224. “2016 ವಿಶ್ವಸಂಸ್ಥೆ ದಿನ (United Nations Day)”ದ ಧ್ಯೇಯವಾಕ್ಯ _____?

ಅ) Freedom First

ಆ) For Better World

ಇ) Together Towards Peace

www.karunaduexams.com

ಈ) On UN and One World

Freedom First

ವಿಶ್ವಸಂಸ್ಥೆ ದಿನವನ್ನು ಅಕ್ಟೋಬರ್ 24ರಂದು ಪ್ರತಿವರ್ಷ ಆಚರಿಸಲಾಗುವುದು. 1945 ಅಕ್ಟೋಬರ್ 24ರಂದು ವಿಶ್ವಸಂಸ್ಥೆ ಉದಯವಾಯಿತು. ಅದರ ಸ್ಮರಣಾರ್ಥ ಅಕ್ಟೋಬರ್ 24ರಂದು ವಿಶ್ವಸಂಸ್ಥೆ ದಿನವನ್ನಾಗಿ ಆಚರಿಸಲಾಗುತ್ತಿದೆ. "ಸ್ವಾತಂತ್ರ ಮೊದಲು (Freedom First)" ಇದು ಈ ವರ್ಷದ ಧ್ಯೇಯವಾಕ್ಯ.

225.ಪ್ರಪ್ರಥಮ "ರಾಷ್ಟ್ರೀಯ ಬುಡಕಟ್ಟು ಉತ್ಸವಕ್ಕೆ (National Tribal Carnival)" ಯಾವ ನಗರದಲ್ಲಿ ಚಾಲನೆ ನೀಡಲಾಯಿತು?

ಅ) ನವದೆಹಲಿ

ಆ) ವಡೋದರ

ಇ) ನಾಸಿಕ್

ಈ) ಪಾಟ್ನಾ

ನವದೆಹಲಿ

ಮೊಟ್ಟಮೊದಲ ರಾಷ್ಟ್ರೀಯ ಬುಡಕಟ್ಟು ಉತ್ಸವಕ್ಕೆ ನವದೆಹಲಿಯಲ್ಲಿ ಪ್ರಧಾನಿ ಮೋದಿ ಅವರು ಚಾಲನೆ ನೀಡಿದರು. ನಾಲ್ಕು ದಿನಗಳ ಕಾಲ ನಡೆಯುವ ಈ ಉತ್ಸವದಲ್ಲಿ ಬುಡಕಟ್ಟು ಜನರ ನಡುವೆ ಒಳಗೊಳ್ಳುವಿಕೆಯನ್ನು ಉತ್ತೇಜಿಸುವುದು ಹಾಗೂ ಬುಡಕಟ್ಟು ಸಂಸ್ಕೃತಿಯ ವಿವಿಧ ಆಯಾಮಗಳನ್ನು ದೊಡ್ಡಮಟ್ಟದಲ್ಲಿ ಪ್ರದರ್ಶಿಸಲಾಗುವುದು. ಸುಮಾರು 1600 ಬುಡಕಟ್ಟು ಕಲಾವಿದರು ಮತ್ತು 8000 ಕ್ಕೂ ಅಧಿಕ ಬುಡಕಟ್ಟು ಪ್ರತಿನಿಧಿಗಳು ಈ ಉತ್ಸವದಲ್ಲಿ ಭಾಗವಹಿಸಲಿದ್ದಾರೆ.

226. "ಇಂಡೋ-ಟಿಬೆಟ್ ಗಡಿ ಪೊಲೀಸ್ (ITBP)" ಸಂಸ್ಥಾಪನ ದಿನವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಅಕ್ಟೋಬರ್ 22

ಆ) ಅಕ್ಟೋಬರ್ 23

ಇ) ಅಕ್ಟೋಬರ್ 24

ಈ) ಅಕ್ಟೋಬರ್ 25

ಅಕ್ಟೋಬರ್ 24

ಇಂಡೋ-ಟಿಬೆಟ್ ಗಡಿ ಪೊಲೀಸ್ (ITBP)" ಸಂಸ್ಥಾಪನ ದಿನವನ್ನು ಅಕ್ಟೋಬರ್ 24 ರಂದು ಆಚರಿಸಲಾಗುತ್ತದೆ. ಐಟಿಬಿಪಿ ಯನ್ನು 1962, ಅಕ್ಟೋಬರ್ 24ರಂದು ಭಾರತ-ಚೀನಾ ಯುದ್ಧದ ನಂತರ ಸ್ಥಾಪಿಸಲಾಯಿತು. ಐಟಿಬಿಪಿಯನ್ನು ಲಡಾಕ್ ನ ಕಾರಕೋರಂ ಪಾಸ್ ನಿಂದ ಅರುಣಚಲ ಪ್ರದೇಶದ ಜಚೆಪ್ ಲಾ ವರೆಗೆ 3488 ಕಿ.ಮೀ ಉದ್ದದ ಗಡಿಭಾಗವನ್ನು ಕಾಯಲು ನಿಯೋಜಿಸಲಾಗಿದೆ.

www.karunaduexams.com

227.“ಇಂಟರ್ನಾಶನಲ್ ಕಮೀಷನ್ ಆನ್ ಫೈನಾನ್ಸಿಂಗ್ ಗ್ಲೋಬಲ್ ಎಜುಕೇಷನ್ ಅಪರ್ಚುನಿಟಿ” ಪ್ರಕಾರ ಮಹಿಳಾ ಸಾಕ್ಷರತೆಯಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) 25

ಆ) 38

ಇ) 43

ಈ) 46

38

ನ್ಯೂಯಾರ್ಕ್ ಮೂಲದ ಇಂಟರ್ನಾಶನಲ್ ಕಮೀಷನ್ ಆನ್ ಫೈನಾನ್ಸಿಂಗ್ ಗ್ಲೋಬಲ್ ಎಜುಕೇಷನ್ ಅಪರ್ಚುನಿಟಿ ಪ್ರಕಾರ ಮಹಿಳಾ ಸಾಕ್ಷರತೆಯಲ್ಲಿ ಭಾರತ 38ನೇ ಸ್ಥಾನದಲ್ಲಿದೆ. ವರದಿಯ ಪ್ರಕಾರ ಭಾರತದ ಶೈಕ್ಷಕಣಿಕ ವ್ಯವಸ್ಥೆಯು ಗುಣಮಟ್ಟದಲ್ಲಿ ನೆರೆಹೊರೆ ರಾಷ್ಟ್ರಗಳಾದ ಪಾಕಿಸ್ತಾನ ಮತ್ತು ಬಾಂಗ್ಲದೇಶಕ್ಕಿಂತ ಕಡಿಮೆ ಇದೆ ಎನ್ನಲಾಗಿದೆ.

228. ಇತ್ತೀಚೆಗೆ ನಿಧನರಾದ ವಿಯಟ್ನಾಂ ಯುದ್ದ ವಿರೋಧಿ ಕಾರ್ಯಕರ್ತ “ಟಾಮ್ ಹೇಡನ್” ಅವರು ಯಾವ ದೇಶದವರು?

ಅ) ಅಮೆರಿಕ

ಆ) ವಿಯೆಟ್ನಾಂ

ಇ) ಸಿಂಗಾಪುರ

ಈ) ಸಿರಿಯಾ

ಅಮೆರಿಕ

ಪ್ರಮುಖ ಯುದ್ಧ ವಿರೋಧಿ ಹೋರಾಟಗಾರ ಟಾಂ ಹೇಡನ್ ಅಮೆರಿಕದಲ್ಲಿ ನಿಧನರಾಗಿದರು. ಅವರಿಗೆ 76 ವರ್ಷ ವಯಸ್ಸಾಗಿತ್ತು. ವಿಯಟ್ನಾಂ ಯುದ್ಧದ ವಿರುದ್ಧ ಧ್ವನಿಯೆತ್ತುವ ಮೂಲಕ ಹೇಡನ್ ಜಗತ್ತಿನ ಗಮನ ಸೆಳೆದಿದ್ದರು. ಯುದ್ಧ ವಿರುದ್ಧದ ಸಂಚಿನಲ್ಲಿ ಭಾಗವಹಿಸಿದ್ದಾರೆ ಎಂದು ಆರೋಪವನ್ನು ಹೊರಿಸಲಾಗಿದ್ದ ಶಿಕಾಗೊ ಸೆವೆನ್ನ ಸದಸ್ಯರಾಗಿದ್ದ ಅವರು ಕ್ಯಾಲಿಫೋರ್ನಿಯ ಸ್ಟೇಟ್ ಅಸೆಂಬ್ಲಿ ಮತ್ತು ಸೆನೆಟ್ನು ಎರಡು ದಶಕಗಳ ಕಾಲ ಪ್ರತಿನಿಧಿಸಿದ್ದರು.

229. ಈ ಕೆಳಗಿನ ಯಾವ ರಾಜ್ಯ ಬಾಲ್ಯವಿವಾಹ ಪದ್ದತಿ ಮುಕ್ತಗೊಳಿಸಲು “ಸಾಝ್ ಅಭಿಯಾನ”ಕ್ಕೆ ಚಾಲನೆ ನೀಡಿದೆ?

ಅ) ಮಧ್ಯ ಪ್ರದೇಶ

ಆ) ರಾಜಸ್ತಾನ

ಇ) ಗುಜರಾತ್

www.karunaduexams.com

ಈ) ಹರಿಯಾಣ

ರಾಜಸ್ತಾನ

ಬಾಲ್ಯವಿವಾಹ ಮುಕ್ತ ರಾಜಸ್ತಾನದ ಉದ್ದೇಶದಿಂದ ದೌಸಾದಲ್ಲಿ ಜಿಲ್ಲಾ ಮಟ್ಟದ ಸಾಝ್' ಅಭಿಯಾನ ಯಾತ್ರೆಗೆ ಚಾಲನೆ ನೀಡಲಾಯಿತು. 'ಸಾಝ್' ಅಭಿಯಾನವನ್ನು ರಾಜಸ್ತಾನ ಸರ್ಕಾರ, ವಿಶ್ವಸಂಸ್ಥೆ ಜನಸಂಖ್ಯಾನಿಧಿ (ಯುಎನ್ಎಫ್ಪಿಎ) ಮತ್ತು ವಿಶ್ವಸಂಸ್ಥೆ ಮಕ್ಕಳ ನಿಧಿ (ಯುನಿಸೆಫ್) ಜಂಟಿಯಾಗಿ ಕೈಗೊಂಡಿವೆ. ರಾಜಸ್ತಾನದಲ್ಲಿ ಬಾಲ್ಯ ವಿವಾಹವು ರಾಷ್ಟ್ರೀಯ ಸರಾಸರಿ ಮಟ್ಟಕ್ಕಿಂತ ಹೆಚ್ಚಿದೆ. 2011ರ ವಾರ್ಷಿಕ ಆರೋಗ್ಯ ಸಮೀಕ್ಷೆ ಪ್ರಕಾರ ರಾಜಸ್ತಾನದ ನಾಲ್ಕು ಬಾಲಕಿಯರ ಪೈಕಿ ಒಬ್ಬ ಹುಡುಗಿ ಬಾಲ್ಯ ವಿವಾಹಕ್ಕೆ ಒಳಗಾಗುತ್ತಿದ್ದಾಳೆ. 20ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಶೇ 32ರಷ್ಟು ಬಾಲ್ಯ ವಿವಾಹಗಳು ದಾಖಲಾಗುತ್ತಿವೆ. ಈ ಅಭಿಯಾನವು ಜಿಲ್ಲೆಯ 50 ಗ್ರಾಮ ಪಂಚಾಯಿತಿಗಳಲ್ಲಿ ಮುಂದಿನ 25 ದಿನಗಳಲ್ಲಿ ಸಂಚರಿಸಿ ಬಾಲ್ಯ ವಿವಾಹದ ಅಪಾಯದ ಬಗ್ಗೆ ಜನರಲ್ಲಿ ಜಾಗೃತಿ ಮೂಡಸಲಿದೆ. ಬಾಲ್ಯವಿವಾಹದಿಂದ ದೂರವುಳಿಯುವ ನಿರ್ಣಯ ಪತ್ರಕ್ಕೆ ಸಹಿ ಸಂಗ್ರಹಿಸುವುದು, ಅಭಿಯಾನದ ಗೀತೆ ಹಾಡುವುದು, ಕಿರುಚಿತ್ರವನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸುವುದು ಅಭಿಯಾನದ ಇತರೆ ಕಾರ್ಯಕ್ರಮಗಳು.

230. ಅಂತಾರಾಷ್ಟ್ರೀಯ ಹಾಕಿ ಫೆಡರೇಷನ್ ನ ಮುಖ್ಯಕಾರ್ಯನಿರ್ವಾಹಣಾಧಿಕಾರಿಯಾಗಿ ಯಾರು ನೇಮಕಗೊಂಡರು?

ಅ) ಕೆಲ್ಲಿ ಫೆರ್ವೆದರ್

ಆ) ಜೇಸನ್ ಮ್ಯಾಕ್ಯಾನ್

ಇ) ಡೇವಿಡ್ ಕೊಲ್ಲಿ

ಈ) ಕೇವಿನ್ ಹಡಸನ್

ಜೇಸನ್ ಮ್ಯಾಕ್ಯಾನ್

ಜೇಸನ್ ಮ್ಯಾಕ್ಯಾನ್ ಅವರನ್ನು ಅಂತಾರಾಷ್ಟ್ರೀಯ ಹಾಕಿ ಫೆಡರೇಷನ್ ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯಾಗಿ ನೇಮಕ ಮಾಡಲಾಗಿದೆ.

231. ಆಫ್ರಿಕಾ ಖಂಡದ ಉತ್ತರದ ತುದಿ ಪ್ರದೇಶ "ರಸ್ ಬೆನ್ ಸಕ್ಕ (Ras Ben Sakka)" ಯಾವ ದೇಶದಲ್ಲಿದೆ?

ಅ) ಟುನಿಷಿಯಾ

ಆ) ಈಜಿಪ್ಟ್

ಇ) ಅಲ್ಜೀರಿಯಾ

ಈ) ಮೊರಾಕೊ

ಟುನಿಷಿಯಾ



www.karunaduexams.com

232. ಈ ಕೆಳಗಿನ ಯಾವ ರಾಜ್ಯ 2017ನೇ ವರ್ಷವನ್ನು "ಗರೀಬ್ ಕಲ್ಯಾಣ ವರ್ಷ(Garib Kalyan Varsh)"ವೆಂದು ಆಚರಿಸಲಿದೆ?

ಅ) ರಾಜಸ್ತಾನ

ಆ) ಹರಿಯಾಣ

ಇ) ಅಸ್ಸಾಂ

ಈ) ಬಿಹಾರ

ಹರಿಯಾಣ

ಹರಿಯಾಣ ಸರ್ಕಾರ 2017ನೇ ವರ್ಷವನ್ನು ಗರೀಬ್ ಕಲ್ಯಾಣ ವರ್ಷ (ಬಡವರ ಕಲ್ಯಾಣ ವರ್ಷ)ವೆಂದು ಆಚರಿಸಲು ನಿರ್ಧರಿಸಿದೆ. ಇದಕ್ಕಾಗಿ ಅನೇಕ ಬಡವರ ಪರ ಯೋಜನೆಗಳನ್ನು ಮುಂದಿನ ವರ್ಷ ಘೋಷಿಸುವುದಾಗಿ ಹರಿಯಾಣ ಮುಖ್ಯಮಂತ್ರಿ ಮನೋಹರ್ ಲಾಲ್ ಖತ್ತರ್ ಹೇಳಿದ್ದಾರೆ. 1966 ರಲ್ಲಿ ಪಂಜಾಬ್ ನಿಂದ ಬೇರ್ಪಡಿಸಿ ಹರಿಯಾಣ ರಾಜ್ಯವನ್ನು ಸ್ಥಾಪಿಸಲಾಗಿದ್ದು, ಈ ವರ್ಷ ಹರಿಯಾಣ ಸರ್ಕಾರ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದೆ.

233."ಕುರಿಲ್ ದ್ವೀಪ (Kuril Island)" ಪ್ರದೇಶ ಯಾವ ಎರಡು ರಾಷ್ಟ್ರಗಳ ನಡುವಿನ ವಿವಾದತ್ಮಾಕ ಪ್ರದೇಶ?

ಅ) ಜಪಾನ್ ಮತ್ತು ಚೀನಾ

ಆ) ರಷ್ಯಾ ಮತ್ತು ಜಪಾನ್

ಇ) ರಷ್ಯಾ ಮತ್ತು ಚೀನಾ

ಈ) ದಕ್ಷಿಣ ಕೊರಿಯಾ ಮತ್ತು ಉತ್ತರ ಕೊರಿಯಾ

ರಷ್ಯಾ ಮತ್ತು ಜಪಾನ್

234. "ಮಿತ್ರ ಶಕ್ತಿ 2016" ಜಂಟಿ ಮಿಲಿಟರಿ ಅಭ್ಯಾಸ ಭಾರತ ಮತ್ತು ಯಾವ ರಾಷ್ಟ್ರದ ನಡುವೆ ಆರಂಭಗೊಂಡಿದೆ?

ಅ) ಶ್ರೀಲಂಕಾ

ಆ) ಬಾಂಗ್ಲದೇಶ

ಇ) ಮಲೇಷಿಯಾ

ಈ) ರಷ್ಯಾ

ಶ್ರೀಲಂಕಾ

ಭಾರತ ಮತ್ತು ಶ್ರೀಲಂಕಾ ನಡುವಿನ ಜಂಟಿ ಮಿಲಿಟರಿ ಅಭ್ಯಾಸ "ಮಿತ್ರ ಶಕ್ತಿ" ಶ್ರೀಲಂಕಾದ ಅಂಬೆಪುಸ್ಸದಲ್ಲಿ ಅಕ್ಟೋಬರ್ 24ರಂದು ಆರಂಭಗೊಂಡಿದ್ದು, ನವೆಂಬರ್ 6 ರವರೆಗೆ ನಡೆಯಲಿದೆ. ಉಭಯ ದೇಶಗಳ ನಡುವೆ ನಡೆಯುತ್ತಿರುವ ನಾಲ್ಕನೇ ಆವೃತ್ತಿಯ ಸಮರಭ್ಯಾಸ ಇದಾಗಿದೆ.

www.karunaduexams.com

235. 2015-16ನೇ ಸಾಲಿನ ಲಾ ಲಿಗಾ ಶ್ರೇಷ್ಠ ಆಟಗಾರ ಪ್ರಶಸ್ತಿಯನ್ನು ಯಾರಿಗೆ ನೀಡಲಾಗಿದೆ?

ಅ) ನೇಮರ್

ಆ) ಆಯಂಟೊಯಿನ್ ಗ್ರೀಜ್ಮನ್

ಇ) ಲಿಯೊನೆಲ್ ಮೆಸ್ಸಿ

ಈ) ಕ್ರಿಸ್ಟಿಯಾನೊ ರೊನಾಲ್ಡೊ

ಆಯಂಟೊಯಿನ್ ಗ್ರೀಜ್ಮನ್

ಅಟ್ಲೆಟಿಕೊ ಮ್ಯಾಡ್ರಿಡ್ ತಂಡದ ಮುಂಚೂಣಿ ಆಟಗಾರ ಆಯಂಟೊಯಿನ್ ಗ್ರೀಜ್ಮನ್ ಅವರು 2015-16ನೇ ಸಾಲಿನ ಲಾ ಲಿಗಾ ಶ್ರೇಷ್ಠ ಆಟಗಾರ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಆಯಂಟೊಯಿನ್ ಅವರು ಬಾರ್ಸಿಲೋನಾದ ಲಿಯೊನೆಲ್ ಮೆಸ್ಸಿ ಮತ್ತು ರಿಯಲ್ ಮ್ಯಾಡ್ರಿಡ್ ತಂಡದ ಕ್ರಿಸ್ಟಿಯಾನೊ ರೊನಾಲ್ಡೊ ಅವರನ್ನು ಹಿಂದಿಕ್ಕಿ ಈ ಪ್ರಶಸ್ತಿ ಗೆದ್ದಿದ್ದಾರೆ. ಅಟ್ಲೆಟಿಕೊ ತಂಡದ ಕೋಚ್ ಡಿಯೆಗೊ ಸಿಮೊಯೆನ್ ಅವರು ಶ್ರೇಷ್ಠ ಕೋಚ್ ಗೌರವಕ್ಕೆ ಭಾಜನವಾಗಿದ್ದು, ಬಾರ್ಸಿಲೋನಾ ಪರ ಆಡುವ ಉರುಗ್ವೆಯ ಸ್ಟ್ರೈಕರ್ ಲೂಯಿಸ್ ಸ್ವಾರೆಜ್ ಅವರು ಯುರೋಪ್ಖಂಡಕ್ಕೆ ಸೇರದಿರುವ ದೇಶದ ಆಟಗಾರನಿಗೆ ನೀಡುವ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಲಿಯೊನೆಲ್ ಮೆಸ್ಸಿ ಅವರು ವರ್ಷದ ಶ್ರೇಷ್ಠ ಫಾರ್ವರ್ಡ್ ಆಟಗಾರ ಗೌರವ ಗಳಿಸಿದ್ದಾರೆ.

236. ವಿಶ್ವ ಪೋಲೀಯೊ ದಿನ (World Polio Day) ________?

ಅ) ಅಕ್ಟೋಬರ್ 23

ಆ) ಅಕ್ಟೋಬರ್ 24

ಇ) ಅಕ್ಟೋಬರ್ 25

ಈ) ಅಕ್ಟೋಬರ್ 26

ಅಕ್ಟೋಬರ್ 26

ವಿಶ್ವ ಪೋಲೀಯೊ ದಿನವನ್ನು ಅಕ್ಟೋಬರ್ 24 ರಂದು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ವಿಶ್ವ ಆರೋಗ್ಯ ಸಂಸ್ಥೆ ಮತ್ತು ಇದರ ಅಂಗ ಸಂಸ್ಥೆಗಳು ಪೋಲೀಯೊ ರೋಗದ ವಿರುದ್ದ ಹೋರಾಡಲು ಈ ದಿನವನ್ನು ಹಮ್ಮಿಕೊಳ್ಳುತ್ತವೆ. ಜಗತ್ತನ್ನು ಪೋಲೀಯೊ ಮುಕ್ತವನ್ನಾಗಿಸುವುದು ಈ ದಿನದ ಪ್ರಮುಖ ಉದ್ದೇಶ.

237. ಇತ್ತೀಚೆಗೆ ಯಾವ ನಗರದ ಭಾರತದ ಮೊದಲ ಆಸ್ಟ್ರೋಬಯಾಲಾಜಿ ಸಮ್ಮೇಳನ- ಲೈಫ್ ಇನ್ ಸ್ಪೇಸ್ (India's Astrobiology Conference - Life in Space) ಆಯೋಜಿಸಿತ್ತು?

ಅ) ಬೆಂಗಳೂರು

ಆ) ಮುಂಬೈ

ಇ) ಹೈದ್ರಾಬಾದ್

ಈ) ತಿರುವನಂತಪುರ

ಮುಂಬೈ

ಭಾರತದ ಮೊದಲ ಆಸ್ಟ್ರೋಬಯಾಲಾಜಿ ಸಮ್ಮೇಳನ- ಲೈಫ್ ಇನ್ ಸ್ಪೇಸ್ ಮುಂಬೈನಲ್ಲಿ ಹಮ್ಮಿಕೊಳ್ಳಲಾಗಿತ್ತು. ಮುಂಬೈ ಮೂಲದ ಇಂಡಿಯನ್ ಅಸ್ಟ್ರೋಬಯಾಲಾಜಿ ರಿಸರ್ಚ್ ಸೆಂಟರ್ ಮತ್ತು ನೆಹರು ಸೈನ್ಸ್ ಸೆಂಟರ್ ಈ ಸಮ್ಮೇಳನವನ್ನು ಜಂಟಿಯಾಗಿ ಆಯೋಜಿಸಿದ್ದವು. ವಿಶ್ವದ ಮೂಲ, ವಿಕಾಸ ಮತ್ತು ಜೀವಿಗಳ ಉಗಮದ ಬಗ್ಗೆ ಅಧ್ಯಾಯನ ನಡೆಸುವುದೇ ಅಸ್ಟ್ರೋಬಯಾಲಾಜಿ.

238. ಇತ್ತೀಚೆಗೆ ನಿಧನರಾದ “ರಾಜ್ ಬೇಗಂ” ಯಾವ ಭಾಷೆಯ ಪ್ರಸಿದ್ದ ಗಾಯಕಿ?

ಅ) ಹಿಂದಿ

ಆ) ಉರ್ದು

ಇ) ಕಾಶ್ಮೀರಿ

ಈ) ಮರಾಠಿ

ಕಾಶ್ಮೀರಿ

ಜಮ್ಮು- ಕಾಶ್ಮೀರದ ಖ್ಯಾತ ಗಾಯಕಿ ರಾಜ್ ಬೇಗಂ ನಿಧನರಾಗಿದ್ದಾರೆ. ರಾಜ್ ಬೇಗಂ ಅವರು ತಮ್ಮ ಮಧುರ ಸ್ವರದಿಂದ ಕಾಶ್ಮೀರದ ಸಂಗೀತ ಪ್ರೇಮಿಗಳನ್ನು ದಶಕಗಳ ಕಾಲ ರಂಜಿಸಿದ್ದರು. ಮದುವೆ ಸಮಾರಂಭಗಳಲ್ಲಿ ಹಾಡುವುದರೊಂದಿಗೆ ತಮ್ಮ ವೃತ್ತಿ ಆರಂಭಿಸಿದ ರಾಜ್ ಬೇಗಂ ಕ್ರಮೇಣ ಕಾಶ್ಮೀರದ ಪ್ರಭಾವಿ ಗಾಯಕರಲ್ಲಿ ಒಬ್ಬರಾಗಿ ಗುರುತಿಸಿಕೊಂಡಿದ್ದರು. ರಾಜ್ ಬೇಗಂ ಅವರಿಗೆ 2002ರಲ್ಲಿ ಪದ್ಮಶ್ರೀ ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸಲಾಗಿತ್ತು. 2013ರಲ್ಲಿ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಗೆ ಪಾತ್ರರಾಗಿದ್ದರು. ಜಮ್ಮು- ಕಾಶ್ಮೀರ ಸರ್ಕಾರ 2009ರಲ್ಲಿ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿತ್ತು.

239. ಸರ್ಕಾರಿ ಶಾಲೆಗಳ ಪಠ್ಯಕ್ರಮದಲ್ಲಿ ಸಿಖ್ಖರ ಇತಿಹಾಸ ಮತ್ತು ಸಂಸ್ಕೃತಿಯನ್ನು ಭೋದಿಸಲು ನಿರ್ಣಯಿಸಿರುವ ಅಮೆರಿಕಾದ ಎರಡನೇ ರಾಜ್ಯ ಯಾವುದು?

ಅ) ಇಂಡಿಯಾನ

ಆ) ಫ್ಲೋರಿಡ

ಇ) ಟೆಕ್ಸಾಸ್

ಈ) ಜಾರ್ಜಿಯ

ಇಂಡಿಯಾನ

www.karunaduexams.com

ಅಮೆರಿಕಾದ ಇಂಡಿಯಾನ ರಾಜ್ಯದ ಸರ್ಕಾರಿ ಶಾಲೆಗಳ ಪಠ್ಯಕ್ರಮದಲ್ಲಿ ಸಿಖ್ಖರ ಇತಿಹಾಸ ಮತ್ತು ಸಂಸ್ಕೃತಿಯನ್ನು ಪರಿಚಯಿಸಲು ನಿರ್ಧರಿಸಲಾಗಿದೆ. ಆ ಮೂಲಕ ಸಿಖ್ಖರ ಇತಿಹಾಸ ಮತ್ತು ಸಂಸ್ಕೃತಿಯನ್ನು ಭೋದಿಸಲು ನಿರ್ಣಯಿಸಿರುವ ಅಮೆರಿಕಾದ ಎರಡನೇ ರಾಜ್ಯ ಇಂಡಿಯಾನ.

240. 2016 ಯುರೋಪಿಯನ್ ಗೋಲ್ಡನ್ ಬಾಯ್ (European Golden Boy) ಪ್ರಶಸ್ತಿ ಪಡೆದವರು _____?

ಅ) ರೆನಾಟೊ ಸಂಚೆಸ್

ಆ) ಅಂಥೋನಿ ಮಾರ್ಟಿಯಲ್

ಇ) ರಹೀಮ್ ಸ್ಟೆರ್ಲಿಂಗ್

ಈ) ಮರ್ಕಸ್ ಸ್ವಾನ್ ಫೋರ್ಡ್

ರೆನಾಟೊ ಸಂಚೆಸ್

ಪೋರ್ಚಗಲ್ ನ ಉದಯೋನ್ಮುಖ ಪುಟ್ಬಾಲ್ ಆಟಗಾರ ರೆನಾಟೊ ಸಂಚೆಸ್ ಅವರಿಗೆ 2016 ಯುರೋಪಿಯನ್ ಗೋಲ್ಡನ್ ಬಾಯ್ ಪ್ರಶಸ್ತಿಯನ್ನು ನೀಡಲಾಗಿದೆ. ಸಂಚೆಸ್ ಅವರು ಜರ್ಮನ್ ಕ್ಲಬ್ ಬಯೆರ್ನ್ ಮುನಿಚ್ ಮತ್ತು ಪೋರ್ಚಗಲ್ ರಾಷ್ಟ್ರೀಯ ತಂಡಗಳಲ್ಲಿ ಮಿಡ್ ಫೀಲ್ಡರ್ ಆಟಗಾರರಾಗಿ ಪ್ರಸಿದ್ದರಾಗಿದ್ದಾರೆ. ಯುರೋಪಿಯನ್ ಗೋಲ್ಡನ್ ಬಾಯ್ ಪ್ರಶಸ್ತಿಯನ್ನು ಸ್ಪೋರ್ಟ್ ಜರ್ನಲಿಸ್ಟ್ ನೀಡುತ್ತಿದ್ದು, ಯುರೋಪ್ನ ಯುವ ಪುಟ್ಬಾಲ್ ಆಟಗಾರನಿಗೆ ನೀಡಲಾಗುತ್ತದೆ.

241. ಈ ಕೆಳಗಿನ ಗ್ರಹಗಳನ್ನು ಗಮನಿಸಿ:

I) ಶನಿ

II) ಗುರು

III) ಯುರೇನಸ್

IV) ನೆಪ್ಚೂನ್

ಈ ಮೇಲಿನ ಯಾವ ಗ್ರಹ/ಗ್ರಹಗಳು ತಮ್ಮದೇ ಆದ ಉಂಗುರ ವ್ಯವಸ್ಥೆಯನ್ನು ಹೊಂದಿವೆ?

ಅ) I & II

ಆ) II & III

ಇ) I, II & III

ಈ) I, II, III & IV

I, II, III & IV

242. "ಗ್ಲೋಬಲ್ ಸಿಸ್ಟಂ ಮೊಬೈಲ್ ಅಸೋಸಿಯೇಷನ್ (GSMA)" ಅಧ್ಯಕ್ಷರಾಗಿ ಯಾರು ನೇಮಕಗೊಂಡಿದ್ದಾರೆ?



www.karunaduexams.com

ಅ) ಸುನೀಲ್ ಭಾರ್ತಿ ಮಿತ್ತಲ್

ಆ) ಆದಿತ್ಯಾ ಬಿರ್ಲಾ

ಇ) ಮುಖೇಶ್ ಅಂಬಾನಿ

ಈ) ಅನಿಲ್ ಅಂಬಾನಿ

ಸುನೀಲ್ ಭಾರ್ತಿ ಮಿತ್ತಲ್

ಟೆಲಿಕಾಂ ದಿಗ್ಗಜ ಸುನೀಲ್ ಭಾರ್ತಿ ಮಿತ್ತಲ್ ಅವರು ಗ್ಲೋಬಲ್ ಸಿಸ್ಟಂ ಮೊಬೈಲ್ ಅಸೋಸಿಯೇಷನ್ (GSMA)ನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಜಿಎಸ್ಎಂಎ ವಿಶ್ವದಾದ್ಯಂತ ಮೊಬೈಲ್ ನಿರ್ವಾಹಕ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಒಕ್ಕೂಟವಾಗಿದೆ. ಸುನೀಲ್ ಭಾರ್ತಿ ಅವರು ಜನವರಿ 2017 ರಿಂದ ಎರಡು ವರ್ಷಗಳ ಕಾಲ ಅಧ್ಯಕ್ಷ ಹುದ್ದೆಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ಮಿತ್ತಲ್ ಜೊತೆಗೆ ಒಟ್ಟು 26 ಸದಸ್ಯರನ್ನು ಮಂಡಳಿಗೆ ಆಯ್ಕೆ ಮಾಡಲಾಗಿದೆ.

243. ಉದ್ಯಮ ವಹಿವಾಟುಗಳನ್ನು ಸುಲಭವಾಗಿ ಆರಂಭಿಸಿ (Easy of Doing Business)ನಿರ್ವಹಿಸುವ ದೇಶಗಳ ಜಾಗತಿಕ ಸೂಚ್ಯಂಕ ಪಟ್ಟಿಯಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) 125

ಆ) 130

ಇ) 134

ಈ) 141

130

ಉದ್ಯಮ ವಹಿವಾಟುಗಳನ್ನು ಸುಲಭವಾಗಿ ಆರಂಭಿಸಿ ನಿರ್ವಹಿಸಲು ನೆರವಾಗುವ ವಿಷಯದಲ್ಲಿ ಭಾರತ, ಜಾಗತಿಕ ಸೂಚ್ಯಂಕ ಪಟ್ಟಿಯಲ್ಲಿ 130ನೆ ಸ್ಥಾನದಲ್ಲಿದೆ. ಉದ್ದಿಮೆ ವಹಿವಾಟು ಆರಂಭಿಸಲು ಅನುಕೂಲತೆ ಒದಗಿಸುವುದಕ್ಕೆ ಸಂಬಂಧಿಸಿದಂತೆ ಹಲವಾರು ಮಾನದಂಡಗಳನ್ನು ಆಧರಿಸಿ ಸಿದ್ಧಪಡಿಸಿರುವ 190 ದೇಶಗಳ ಆರ್ಥಿಕತೆಗಳ ಸೂಚ್ಯಂಕದಲ್ಲಿ ಭಾರತ 130ನೆ ಸ್ಥಾನದಲ್ಲಿಯೇ ಇದೆ. ಸೂಚ್ಯಂಕದಲ್ಲಿ ನ್ಯೂಜಿಲ್ಯಾಂಡ್ ಮೊದಲ ಸ್ಥಾನದಲ್ಲಿದೆ. ಸಿಂಗಾಪುರ, ಡೆನ್ಮಾರ್ಕ್, ಹಾಂಕ್ ಕಾಂಗ್ ಮತ್ತು ದಕ್ಷಿಣ ಕೊರಿಯಾ ಟಾಪ್ ಐದರಲ್ಲಿರುವ ರಾಷ್ಟ್ರಗಳಾಗಿವೆ.

244. ಇತ್ತೀಚೆಗೆ ನಿಧನರಾದ "ಕಾರ್ಲೋಸ್ ಆಲ್ಬರ್ಟೊ" ಯಾವ ದೇಶದ ಪ್ರಸಿದ್ಧ ಫುಟ್ಬಾಲ್ ಆಟಗಾರ?

ಅ) ಬ್ರೆಜಿಲ್

ಆ) ಸ್ಪೇನ್

ಇ) ಫ್ರಾನ್ಸ್

ಈ) ಜರ್ಮನಿ

ಬ್ರೆಜಿಲ್

www.karunaduexams.com

ಸರ್ವಕಾಲಿಕ ಶ್ರೇಷ್ಠ ಫುಟ್ಬಾಲ್ ಆಟಗಾರರ ಪೈಕಿ ಓರ್ವರಾಗಿದ್ದ ಬ್ರೆಝಿಲ್ನ ಮಾಜಿ ನಾಯಕ ಕಾರ್ಲೋಸ್ ಆಲ್ಬರ್ಟೊ(72 ವರ್ಷ) ನಿಧನರಾಗಿದ್ದಾರೆ. 1970ರ ವಿಶ್ವಕಪ್ ಟ್ರೋಫಿ ವಿಜೇತ ಬ್ರೆಝಿಲ್ ತಂಡದ ನಾಯಕರಾಗಿದ್ದ ಆಲ್ಬರ್ಟೊ 1970ರ ವಿಶ್ವಕಪ್ ಫೈನಲ್ನಲ್ಲಿ ಇಟಲಿ ತಂಡವನ್ನು 4-1 ಗೋಲುಗಳ ಅಂತರದಿಂದ ಮಣಿಸುವಲ್ಲಿ ತಂಡಕ್ಕೆ ಮಾರ್ಗದರ್ಶನ ನೀಡಿದ್ದರು. ಆಲ್ಬರ್ಟೊಗೆ ಪೀಲೆ, ಟಾಸ್ತಾವೊ, ಜೈರ್ಝಿನೊಹೊ ಸಾಥ್ ನೀಡಿದ್ದರು. 1944ರಲ್ಲಿ ಕ್ಯಾಪಿಟಾವೊದಲ್ಲಿ ಜನಿಸಿರುವ ಆಲ್ಬರ್ಟೊ 1996 ರಿಂದ 1974ರ ತನಕ ಪೀಲೆ ಅವರೊಂದಿಗೆ ಸ್ಯಾಂಟೊಸ್ ತಂಡದಲ್ಲಿ ಆಡಿದ್ದರು. 1977 ರಿಂದ 1980ರ ತನಕ ನ್ಯೂಯಾರ್ಕ್ ಕಾಸ್ಮೊಸ್ ತಂಡವನ್ನು ಪ್ರತಿನಿಧಿಸಿದ್ದರು. ಬ್ರೆಝಿಲ್ನ ಪರ 50ಕ್ಕೂ ಅಧಿಕ ಪಂದ್ಯಗಳನ್ನು ಆಡಿರುವ ಆಲ್ಬರ್ಟೊ ಗಾಯದ ಸಮಸ್ಯೆಯಿಂದಾಗಿ 1974ರ ವಿಶ್ವಕಪ್ನಿಂದ ವಂಚಿತರಾಗಿದ್ದರು. 2004ರಲ್ಲಿ ಫಿಫಾ ಬಿಡುಗಡೆ ಮಾಡಿರುವ ಶ್ರೇಷ್ಠ 100 ಆಟಗಾರರ ಪಟ್ಟಿಯಲ್ಲಿ ಆಲ್ಬರ್ಟೊ ಸ್ಥಾನ ಪಡೆದಿದ್ದರು.

245. "ಮೌಂಟ್ ಸರಮತಿ" ಭಾರತ ಮತ್ತು ಯಾವ ದೇಶದ ನಡುವಿನ ನೈಸರ್ಗಿಕ ಗಡಿ ಭಾಗ ಎನಿಸಿದೆ?

ಅ) ನೇಪಾಳ

ಆ) ಭೂತಾನ್

ಇ) ಮ್ಯಾನ್ಮಾರ್

ಈ) ಬಾಂಗ್ಲದೇಶ

ಮೌಂಟ್ ಸರಮತಿ ನಾಗಲ್ಯಾಂಡ್ ರಾಜ್ಯ ಅತಿ ಎತ್ತರದ ಶಿಖರ. ಮೌಂಟ್ ಸರಮತಿ ಶಿಖರದ ಎತ್ತರ 3,8490 ಮೀ ಇದೆ. ಮೌಂಟ್ ಸರಮತಿಯು ನಾಗಲ್ಯಾಂಡ್ ಮತ್ತು ಮ್ಯಾನ್ಮಾರ್ ನಡುವೆ ನೈಸರ್ಗಿಕ ಗಡಿ ಭಾಗವಾಗಿದೆ.

246. ಈ ಕೆಳಗಿನ ಯಾರನ್ನು ಆಸ್ಟ್ರೇಲಿಯಾದಲ್ಲಿ ಭಾರತದ ಹೈಕಮೀಷನರ್ ಆಗಿ ನೇಮಕ ಮಾಡಲಾಗಿದೆ?

ಅ) ಎ.ಎಸ್.ರಾವ್

ಆ) ಅಜಯ್ ಎಂ ಗೊಂಡಾನೆ

ಇ) ಸುನೀಲ್ ಶೆಟ್ಟಿ

ಈ) ಕರ್ನಲ್ ಸಿಂಗ್

ಅಜಯ್ ಎಂ ಗೊಂಡಾನೆ

ಹಿರಿಯ ಐಎಫ್ಎಸ್ (1985ನೇ ಬ್ಯಾಚ್) ಅಧಿಕಾರಿ ಅಜಯ್ ಎಂ ಗೊಂಡಾನೆ ಅವರು ಆಸ್ಟ್ರೇಲಿಯಾದಲ್ಲಿ ಭಾರತದ ಹೈಕಮೀಷನರ್ ಆಗಿ ನೇಮಕಗೊಂಡಿದ್ದಾರೆ. ಇದಕ್ಕೂ ಮುಂಚೆ ಅವರು ಪಾಪ್ ನ್ಯೂ ಗಿನಿಯಾದ ಹೈಕಮೀಷನರ್ ಮತ್ತು ನ್ಯೂಯಾರ್ಕ್ ನಲ್ಲಿ ಭಾರತದ ಡೆಪ್ಯೂಟಿ ಕೌನ್ಸಲ್ ಆಫ್ ಜನರಲ್ ಆಗಿ ಸೇವೆ ಸಲ್ಲಿಸಿದ್ದರು.

247. ಯಾವ ದೇಶದಲ್ಲಿ ಇತ್ತೀಚೆಗೆ ಅಕ್ಟೋಬರ್ ತಿಂಗಳನ್ನು ಹಿಂದೂ ಪಾರಂಪರಿಕ ತಿಂಗಳನ್ನಾಗಿ ಆಚರಿಸಲು ಮಸೂದೆಯನ್ನು ಮಂಡಿಸಲಾಗಿದೆ?



www.karunaduexams.com

ಅ) ಅಮೆರಿಕ

ಆ) ಕೆನಡಾ

ಇ) ಆಸ್ಟ್ರೇಲಿಯಾ

ಈ) ರಷ್ಯಾ

ಕೆನಡಾ

ಕೆನಡಾ ದೇಶದ ಆಂಟಾರಿಯೋ ರಾಜ್ಯದದಲ್ಲಿ ಅಕ್ಟೊಬರ್ ತಿಂಗಳನ್ನು ಹಿಂದೂ ಪಾರಂಪರಿಕ ತಿಂಗಳನ್ನಾಗಿ ಆಚರಿಸುವ ಮಸೂದೆಯನ್ನು ಮಂಡಿಸಲಾಗಿದೆ. ಪ್ರಾದೇಶಿಕ ಸಂಸತ್ ನಲ್ಲಿ ಮಸೂದೆಯನ್ನು ಅಂಗೀಕರಿಸಲಾಗಿದ್ದು ವಾರ್ಷಿಕವಾಗಿ ಅಕ್ಟೊಬರ್ ತಿಂಗಳನ್ನು ಹಿಂದೂ ಪಾರಂಪರಿಕ ತಿಂಗಳನ್ನಾಗಿ ಆಚರಿಸಲಾಗುತ್ತದೆ. ಕೆನಡಾದ ಆಂಟಾರಿಯೋ ರಾಜ್ಯದಲ್ಲಿ 700,000 ಕ್ಕೂ ಹೆಚ್ಚು ಜನ ಭಾರತೀಯ ಮೂಲದ ಕೆನೆಡಿಯನ್ನರಿದ್ದು, ಈ ಮಸೂದೆಯನ್ನು ಕೆನಡಾದ ಅಭಿವೃದ್ಧಿಗೆ ಶ್ರಮಿಸಿರುವ ಭಾರತೀಯರಿಗೆ ಸಮರ್ಪಿಸಲಾಗಿದೆ ಎಂದು ಸಂಸತ್ ನ ಸದಸ್ಯ ಜೋ ಡಿಕ್ಸನ್ ತಿಳಿಸಿದ್ದಾರೆ.

248. ಜಾರಿ ನಿರ್ದೇಶನಾಲಯ(Enforcement Directorate)ದ ನೂತನ ನಿರ್ದೇಶಕರಾಗಿ ಯಾರನ್ನು ನೇಮಕ ಮಾಡಲಾಗಿದೆ?

ಅ) ಕರ್ನಲ್ ಸಿಂಗ್

ಆ) ನರೇಶ್ ಬಾಬು

ಇ) ಹರಿಪ್ರಸಾದ್ ಚೌರಿಯ

ಈ) ಜಗತ್ ಸಿಂಗ್ ಚೌವ್ಹಣ್

ಕರ್ನಲ್ ಸಿಂಗ್

ಹಿರಿಯ ಐಪಿಎಸ್ ಅಧಿಕಾರಿ ಕರ್ನಲ್ ಸಿಂಗ್ ಅವರು ಜಾರಿ ನಿರ್ದೇಶನಾಲಯದ ನೂತನ ನಿರ್ದೇಶಕರಾಗಿ ನೇಮಕಗೊಂಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ನೇಮಕಾತಿ ಸಮಿತಿ ಇವರ ನೇಮಕಾತಿಯನ್ನು ಅನುಮೋದಿಸಿದೆ. ಸಿಂಗ್ ಅವರ ಅಧಿಕಾರವಧಿ ಆಗಸ್ಟ್ 31, 2017 ರವರೆಗೆ ಇರಲಿದೆ.

249. "ಇಂಟರ್ನ್ಯಾಶನಲ್ ಮ್ಯಾಥಮೆಟಿಕಲ್ ಯೂನಿಯನ್" ನೂತನ ನಿರ್ದೇಶಕರಾಗಿ ಆಯ್ಕೆಯಾದ ಸಮೀರಾ ಅಝೀಝ್ ಯಾವ ದೇಶದವರು?

ಅ) ಇರಾನ್

ಆ) ಇರಾಕ್

ಇ) ಸೌದಿ ಅರೇಬಿಯಾ

ಈ) ಈಜಿಪ್ಟ್

ಸೌದಿ ಅರೇಬಿಯಾ

www.karunaduexams.com

ಗಣಿತ ಕ್ಷೇತ್ರದಲ್ಲಿ ಸಮನ್ವಯ ಸಾಧಿಸಲು ಮುಡುಪಾಗಿರುವ ಅಂತಾರಾಷ್ಟ್ರೀಯ ಸರಕಾರೇತರ ಸಂಘಟನೆ 'ಇಂಟರ್ನ್ಯಾಶನಲ್ ಮ್ಯಾಥಮೆಟಿಕಲ್ ಯೂನಿಯನ್ (ಐಎಂಯು)ನ ನೂತನ ನಿರ್ದೇಶಕರಾಗಿ ಸೌದಿ ಅರೇಬಿಯದ ಮಾಧ್ಯಮ ಕ್ಷೇತ್ರದ ಮಹಿಳೆ ಸಮೀರಾ ಅಝೀಝ್ ಆಯ್ಕೆಯಾಗಿದ್ದಾರೆ. 158 ದೇಶಗಳನ್ನು ಪ್ರತಿನಿಧಿಸುವ 158 ಅಭ್ಯರ್ಥಿಗಳ ಪೈಕಿ ಅಂತಿಮವಾಗಿ ಸಮೀರಾರನ್ನು ಈ ಸಂಘಟನೆಗೆ ಆಯ್ಕೆ ಮಾಡಲಾಯಿತು. ಅವರ ಅಧಿಕಾರಾವಧಿ ಮೂರು ವರ್ಷಗಳು.

250. ಇತ್ತೀಚೆಗೆ ವಿರಾಟ್ ಕೊಹ್ಲಿ ಅವರು ಅಂತಾರಾಷ್ಟ್ರೀಯ ಏಕದಿನ ಕ್ರಿಕೆಟ್ ನಲ್ಲಿ ವೇಗವಾಗಿ 7500 ರನ್ ಪೂರೈಸಿ ಸಾಧನೆ ಮಾಡುವ ಮೂಲಕ ಯಾವ ಆಟಗಾರನ ದಾಖಲೆಯನ್ನು ಅಳಿಸಿ ಹಾಕಿದರು?

ಅ) ಸಚಿನ್ ತೆಂಡುಲ್ಕರ್

ಆ) ಎಬಿ ಡಿವಿಲಿಯರ್ಸ್

ಇ) ಶಾಹಿದ್ ಅಫ್ರಿದಿ

ಈ) ವಿರೇಂದ್ರ ಸೆಹ್ವಾಗ್

ಎಬಿ ಡಿವಿಲಿಯರ್ಸ್

ಸ್ಫೋಟಕ ಬ್ಯಾಟ್ಸ್ ಮನ್ ವಿರಾಟ್ ಕೊಹ್ಲಿ ಅವರು ನ್ಯೂಜಿಲೆಂಡ್ ವಿರುದ್ಧದ ನಾಲ್ಕನೇ ಪಂದ್ಯದಲ್ಲಿ 45 ರನ್ ಸಿಡಿಸಿದ್ದು, ಈ ಮೂಲಕ ಅಂತಾರಾಷ್ಟ್ರೀಯ ಏಕದಿನ ಕ್ರಿಕೆಟ್ ನಲ್ಲಿ ವೇಗವಾಗಿ 7500 ರನ್ ಪೂರೈಸಿದ ಸಾಧನೆ ಮಾಡಿದ್ದಾರೆ. ದಕ್ಷಿಣ ಆಫ್ರಿಕಾದ ಸ್ಫೋಟಕ ಬ್ಯಾಟ್ಸ್ ಮನ್ ಎಬಿ ಡಿವಿಲಿಯರ್ಸ್ 174 ಇನ್ನಿಂಗ್ಸ್ ನಲ್ಲಿ 7500 ರನ್ ಪೂರೈಸಿದ್ದರೆ, ವಿರಾಟ್ ಕೊಹ್ಲಿ ಕೇವಲ 167 ಇನ್ನಿಂಗ್ಸ್ ನಲ್ಲಿ ಈ ಸಾಧನೆ ಮಾಡಿದ್ದು ವಿಲಿಯರ್ಸ್ ದಾಖಲೆಯನ್ನು ಅಳಿಸಿ ಹಾಕಿದರು.

251. ಈ ಕೆಳಗಿನ ಯಾವುದು ನಾಗಲ್ಯಾಂಡ್ ನ ಅಧಿಕೃತ ಭಾಷೆಯಾಗಿದೆ?

ಅ) ಚಾಂಗ್

ಆ) ಇಂಗ್ಲೀಷ್

ಇ) ಅಸ್ಸಾಮಿಸ್

ಈ) ನಾಗಮಿಸ್

ಇಂಗ್ಲೀಷ್ ನಾಗಲ್ಯಾಂಡ್ನ ಅಧಿಕೃತ ಭಾಷೆಯಾಗಿದೆ.

252. ಭಾರತದಲ್ಲಿ ಪಾರ್ಶ್ವವಾಯು ತಡೆ ಮತ್ತು ಜಾಗೃತಿ ಮೂಡಿಸಲು ಈ ಕೆಳಗಿನ ಯಾರನ್ನು ರಾಯಭಾರಿಯನ್ನಾಗಿ ನೇಮಿಸಲಾಗಿದೆ?

ಅ) ಸಚಿನ್ ತೆಂಡುಲ್ಕರ್

ಆ) ಸುನೀಲ್ ಗವಾಸ್ಕರ್

www.karunaduexams.com

ಇ) ಮೇರಿ ಕೋಮ್

ಈ) ಸುನೀಲ್ ಚೆತ್ರಿ

ಸುನೀಲ್ ಗವಾಸ್ಕರ್

ಭಾರತದ ಮಾಜಿ ಕ್ರಿಕೆಟ್ ಆಟಗಾರ ಸುನಿಲ್ ಗಾವಸ್ಕರ್ ಅವರನ್ನು ಪಾರ್ಶ್ವವಾಯು ತಡೆಗೆ ಮತ್ತು ಆ ಬಗ್ಗೆ ಜಾಗೃತಿ ಮೂಡಿಸಲು ಭಾರತದಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳಿಗೆ ರಾಯಭಾರಿಯನ್ನಾಗಿ ನೇಮಿಸಲಾಗಿದೆ.

253.1957 ರಲ್ಲಿ ಸ್ಥಾಪಿಸಲಾದ "ಇಂಡಿಯನ್ ಸೊಸೈಟಿ ಆಫ್ ಲೇಬರ್ ಎಕಾನಮಿಕ್ಸ್"ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಭಾರತದ ರಾಷ್ಟ್ರಪತಿ ಯಾರು?

ಅ) ವಿ ವಿ ಗಿರಿ

ಆ) ಝಾಕೀರ್ ಹುಸೇನ್

ಇ) ಬಿ ಡಿ ಜತ್ತಿ

ಈ) ನೀಲಂ ಸಂಜೀವ ರೆಡ್ಡಿ

ವಿ ವಿ ಗಿರಿ

254. 2016 ಅಂತಾರಾಷ್ಟ್ರೀಯ ಡಬ್ಲಿನ್ ಸಾಹಿತ್ಯ ಪ್ರಶಸ್ತಿ ಪಡೆದ "ಫ್ಯಾಮಿಲಿ ಲೈಫ್ (Family Life)" ಪುಸ್ತಕದ ಲೇಖಕರು ___?

ಅ) ನಿರುಪಮ್ ಸೇನ್

ಆ) ಅಖಿಲ್ ಶರ್ಮಾ

ಇ) ಶರತ್ ಚಟರ್ಜಿ

ಈ) ರವೀಂದ್ರ ಜೈನ್

ಅಖಿಲ್ ಶರ್ಮಾ

ಭಾರತೀಯ ಮೂಲದ ಅಮೆರಿಕ ಪ್ರಜೆ ಅಖಿಲ್ ಶರ್ಮಾ ಅವರು "ಫ್ಯಾಮಿಲಿ ಲೈಫ್" ಪುಸ್ತಕದ ಲೇಖಕರು. ಈ ಪುಸ್ತಕ ಲೇಖಕರ ಆತ್ಮಚರಿತ್ರೆಯಾಗಿದ್ದು, ತಮ್ಮ ಬಾಲ್ಯದಲ್ಲೇ ಭಾರತದಿಂದ ಅಮೆರಿಕಾಗೆ ಹೋದಾಗ ಆದ ಅನುಭವವನ್ನು ಪ್ರತಿಬಿಂಬಿಸಲಾಗಿದೆ. ಈ ಪುಸ್ತಕಕ್ಕೆ ಜೂನ್ 2016 ರಲ್ಲಿ ಅಂತಾರಾಷ್ಟ್ರೀಯ ಡಬ್ಲಿನ್ ಸಾಹಿತ್ಯ ಪ್ರಶಸ್ತಿ ನೀಡಲಾಗಿದೆ.

255.ಕೇಂದ್ರ ಸರ್ಕಾರ ಇತ್ತೀಚೆಗೆ ಸಣ್ಣ ಮತ್ತು ರೈತ ಮಹಿಳಾಯರನ್ನು ಪ್ರೋತ್ಸಾಹಿಸಲು "Biotech-KISAN" ಯೋಜನೆ ಜಾರಿಗೊಳಿಸಿದೆ. ಅಂದಹಾಗೆ KISAN ವಿಸ್ತ್ರತ ರೂಪ ___?

www.karunaduexams.com

ಅ) Krishi Innovation Significant Application Network

ಆ) Krishi Innovation Scientific Application Network

ಇ) Krishi Innovation Structural Application Network

ಈ) Krishi Innovation Science Application Network

Krishi Innovation Scientific Application Network

ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಹರ್ಷ ವರ್ಧನ್ ಅವರು ಸಣ್ಣ ಮತ್ತು ರೈತ ಮಹಿಳೆಯರಿಗೆ ನೆರವಾಗುವ ಸಲುವಾಗಿ "Biotech-KISAN (Krishi Innovation Scientific Application Network)" ಯೋಜನೆಗೆ ನವದೆಹಲಿಯಲ್ಲಿ ಚಾಲನೆ ನೀಡಿದರು. ಈ ಯೋಜನೆಯಡಿ ಬೇಸಾಯ ಪದ್ಧತಿಯಲ್ಲಿ ತರಭೇತಿ ಮತ್ತು ಶಿಕ್ಷಣ ಪಡೆಯುವ ರೈತ ಮಹಿಳೆಯರಿಗೆ ಫೆಲೋಶಿಪ್ ನೀಡಲಾಗುವುದು. ರೈತರು, ವಿಜ್ಞಾನಿಗಳು ಮತ್ತು ಕೃಷಿ ವಿಜ್ಞಾನ ಸಂಸ್ಥೆಗಳನ್ನು ಒಗ್ಗೂಡಿಸುವುದು ಈ ಯೋಜನೆಯ ಮುಖ್ಯ ಉದ್ದೇಶ. ಜೊತೆಗೆ ಸಣ್ಣ ರೈತರು ಎದುರಿಸುತ್ತಿರುವ ಸಮಸ್ಯೆಗಳಿಗೆ ವೈಯುಕ್ತಿಕವಾಗಿ ಪರಿಹಾರವನ್ನು ನೀಡಲಾಗುವುದು.

256. "2016 ವಿಶ್ವ ಪಾರ್ಶ್ವವಾಯು ಸಮಾವೇಶ (World Stroke Congress)" ಇದೇ ಮೊದಲ ಬಾರಿಗೆ ಭಾರತದ ಯಾವ ನಗರ ಆತಿಥ್ಯವಹಿಸಿತ್ತು?

ಅ) ಹೈದ್ರಾಬಾದ್

ಆ) ಚೆನ್ನೈ

ಇ) ಧಾರಾವಾಡ

ಈ) ಮುಂಬೈ

ಹೈದ್ರಾಬಾದ್

ಪ್ರತಿವರ್ಷ ಅಕ್ಟೋಬರ್ 29 ರಂದು 'ವಿಶ್ವ ಪಾರ್ಶ್ವವಾಯು ದಿನಾಚರಣೆ' ಆಚರಿಸಲಾಗುತ್ತದೆ. ವಿಶ್ವ ಪಾರ್ಶ್ವವಾಯು ಸಮಾವೇಶ (ಡಬ್ಲ್ಯುಎಸ್‌ಸಿ) ಎರಡು ವರ್ಷಗಳಿಗೊಮ್ಮೆ ಆಯೋಜಿಸಲಾಗುತ್ತದೆ. ಈ ವರ್ಷ ಹೈದ್ರಾಬಾದ್ ನಲ್ಲಿ ಸಮಾವೇಶವನ್ನು ಆಯೋಜಿಸಲಾಗಿತ್ತು. ಈ ಸಮಾವೇಶಕ್ಕೆ ಭಾರತದ ನಗರವೊಂದು ಆತಿಥ್ಯ ವಹಿಸಿದ್ದು ಇದೇ ಮೊದಲು.

257. ಕೈರೋದಲ್ಲಿ ನಡೆದ 6ನೇ ಕ್ಯಾಮ್ (ಕಲ್ಚರ್, ಮೀಡಿಯಾ ಅಂಡ್ ಆರ್ಟ್ಸ್- ಸಿಎಎಂ) ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಸಾಕ್ಷ್ಯಚಿತ್ರ ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿದ ಚಿತ್ರ ಯಾವುದು?

ಅ) ಇಂಡಿಯಾಸ್ ಡಾಟರ್

www.karunaduexams.com

ಆ) ಡಾಟರ್ಸ್ ಆಫ್ ಮದರ್ ಇಂಡಿಯಾ

ಇ) ದಿ ಕೋರ್ಟ್

ಈ) ತಿಥಿ

ಡಾಟರ್ಸ್ ಆಫ್ ಮದರ್ ಇಂಡಿಯಾ

ಕೈರೋ, ಈಜಿಪ್ಟ್ ನಲ್ಲಿ ನಡೆದ 6ನೇ ಕ್ಯಾಮ್ (ಕಲ್ಚರ್, ಮೀಡಿಯಾ ಅಂಡ್ ಆರ್ಟ್ಸ್- ಸಿಎಎಂ) ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ 'ಡಾಟರ್ಸ್ ಆಫ್ ಮದರ್ ಇಂಡಿಯಾ' ಸಾಕ್ಷ್ಯಚಿತ್ರವು ಸಾಕ್ಷ್ಯಚಿತ್ರ ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿದೆ. ಸಾಕ್ಷ್ಯಚಿತ್ರ ವಿಭಾಗದಲ್ಲಿ 33 ದೇಶಗಳ ಒಟ್ಟು 92 ಚಿತ್ರಗಳು ಸ್ಪರ್ಧೆಯಲ್ಲಿದ್ದವು. 'ಡಾಟರ್ಸ್ ಆಫ್ ಮದರ್ ಇಂಡಿಯಾ' ಭಾರತದ ಲಿಂಗ ಅಸಮಾನತೆ ವಸ್ತುವುಳ್ಳ ಸಾಕ್ಷ್ಯಚಿತ್ರ. ವಿಭಾ ಬಕ್ಷಿ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ನಿರ್ಲಕ್ಷ್ಯ, ಬಡತನ ಮತ್ತು ಭಯೋತ್ಪಾದನೆ ವಿರುದ್ಧದ ಹೋರಾಟದ ಭಾಗವಾಗಿ ಸಿನಿಮಾಗಳನ್ನು ಉತ್ತೇಜಿಸುವುದಕ್ಕಾಗಿ ಈಜಿಪ್ಟ್ ಸರ್ಕಾರ ಈ ಚಿತ್ರೋತ್ಸವವನ್ನು ಆಯೋಜಿಸುತ್ತದೆ.

258.ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರ ವ್ಯಕ್ತಿಯೊಬ್ಬರು ಪ್ರತಿದಿನ ಸೇವಿಸಬಹುದಾದ ಗರಿಷ್ಠ ಉಪ್ಪಿನ ಮಟ್ಟ ___?

ಅ) 5 ಗ್ರಾಂ

ಆ) 10 ಗ್ರಾಂ

ಇ) 12 ಗ್ರಾಂ

ಈ) 15 ಗ್ರಾಂ

5 ಗ್ರಾಂ

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ವ್ಯಕ್ತಿಯೊಬ್ಬರು ದಿನವೊಂದಕ್ಕೆ ಗರಿಷ್ಠ 5 ಗ್ರಾಂ ಉಪ್ಪನ್ನು ಸೇವಿಸಬಹುದು. ಆದರೆ ಇತ್ತೀಚಿನ ಸಂಶೋಧನೆ ಪ್ರಕಾರ ಭಾರತದಲ್ಲಿ 19 ವರ್ಷ ಮೇಲ್ಪಟ್ಟವರು ಪ್ರತಿದಿನ 10.98 ಗ್ರಾಂ ಉಪ್ಪು ಸೇವಿಸುತ್ತಿರುವುದಾಗಿ ಹೇಳಲಾಗಿದೆ. ಉಪ್ಪನ್ನು ಹೆಚ್ಚಾಗಿ ಸೇವಿಸುವುದರಿಂದ ಅಧಿಕ ರಕ್ತದೊತ್ತಡಕ್ಕೆ ಕಾರಣವಾಗಲಿದೆ. ತ್ರಿಪುರದಲ್ಲಿ ಪ್ರತಿ ದಿನ 14 ಗ್ರಾಂ ಉಪ್ಪನ್ನು ಸೇವಿಸುತ್ತಿದ್ದು, ರಾಜ್ಯಗಳ ಪೈಕಿ ಮೊದಲ ಸ್ಥಾನದಲ್ಲಿದೆ.

259. ಹಕ್ಕಿ ಜ್ವರ ನಿಯಂತ್ರಣಕ್ಕಾಗಿ ಕೇಂದ್ರ ಸರ್ಕಾರ ಈ ಕೆಳಗಿನ ಯಾವ ಸಮಿತಿಯನ್ನು ಇತ್ತೀಚೆಗೆ ರಚಿಸಿದೆ?

ಅ) ಮುನಿಯಲ್ಲಪ್ಪ ಸಮಿತಿ

ಆ) ಕೆ.ವಿ.ಕಾಮತ್ ಸಮಿತಿ

ಇ) ರಾಜೇಂದ್ರ ಬಕ್ಷಿ ಸಮಿತಿ

ಈ) ಮಂಜುಳಾ ಶಂಕರ್ ಸಮಿತಿ

ಮುನಿಯಲ್ಲಪ್ಪ ಸಮಿತಿ

ನವದೆಹಲಿ, ಮಧ್ಯಪ್ರದೇಶದ ಗ್ವಾಲಿಯರ್ ಮತ್ತು ಕೇರಳದ ಆಲಪ್ಪುಳ ಸೇರಿ ಹಲವೆಡೆ ಹಕ್ಕಿ ಜ್ವರ ಪತ್ತೆಯಾಗಿರುವುದರಿಂದ ಪರಿಸ್ಥಿತಿ ನಿಭಾಯಿಸಲು ಕೇಂದ್ರ ಕೃಷಿ ಸಚಿವಾಲಯ ಉನ್ನತಮಟ್ಟದ ಸಮಿತಿ ರಚಿಸಿದೆ. ಪಶುಸಂಗೋಪನೆ, ಡೈರಿ ಮತ್ತು

ಮೀನಿಗಾರಿಕೆ ಇಲಾಖೆಯ ಜಂಟಿ ಕಮೀಷನರ್ ಮುನಿಯಲ್ಲಪ್ಪ ರವರು ಸಮಿತಿಯ ನೇತೃತ್ವವಹಿಸಿದ್ದಾರೆ. ಪರಿಸರ ಸಚಿವಾಲಯ, ಆರೋಗ್ಯ ಸಚಿವಾಲಯ ಮತ್ತು ದೆಹಲಿ ಸರ್ಕಾರದ ಪ್ರತಿನಿಧಿಗಳ ಸಮಿತಿಯ ಸದಸ್ಯರಾಗಿದ್ದಾರೆ. ಹಕ್ಕಿ ಜ್ವರ ನಿಯಂತ್ರಣಾ ಕೊಠಡಿ ಮತ್ತು ಸಹಾಯವಾಣಿಯನ್ನೂ ಆರಂಭಿಸಲಾಗಿದೆ. ಹಕ್ಕಿ ಜ್ವರ ಕಂಡುಬಂದಿರುವ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ವಹಿಸುವಂತೆ ಕೇಂದ್ರ ಸರ್ಕಾರವು ಈಗಾಗಲೇ ರಾಜ್ಯಗಳಿಗೆ ಸೂಚಿಸಿದೆ.

260. ಇತ್ತೀಚೆಗೆ ಯಾವ ಸಮಿತಿ "ಒಂದು ಶ್ರೇಣಿ ಒಂದು ಪಿಂಚಣಿ (One Rank One Pensio)" ವರದಿಯನ್ನು ರಕ್ಷಣಾ ಸಚಿವಾಲಯಕ್ಕೆ ಸಲ್ಲಿಸಿತು?

ಅ) ಜಿ.ಕೆ.ಮಾಧವನ್ ಸಮಿತಿ

ಆ) ಎಲ್ ನರಸಿಂಹರೆಡ್ಡಿ ಸಮಿತಿ

ಇ) ಕೇಶವ್ ಯಾದವ್ ಸಮಿತಿ

ಈ) ವಿ.ಕೆ. ಸಿಂಗ್ ಸಮಿತಿ

ಎಲ್ ನರಸಿಂಹರೆಡ್ಡಿ ಸಮಿತಿ

ಒಂದು ಶ್ರೇಣಿ ಒಂದು ಪಿಂಚಣಿ ಮೇಲಿನ ಎಲ್ ನರಸಿಂಹರೆಡ್ಡಿ ಸಮಿತಿ ತನ್ನ ವರದಿಯನ್ನು ರಕ್ಷಣಾ ಸಚಿವ ಮನೋಹರ್ ಪಣಿಕ್ಕರ್ ಅವರಿಗೆ ಸಲ್ಲಿಸಿದೆ. ಒಂದು ಶ್ರೇಣಿ ಒಂದು ಪಿಂಚಣಿ ಅನುಷ್ಠಾನದ ಸಾಧಕ ಬಾಧಕಗಳನ್ನು ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ಕೇಂದ್ರ ಸರ್ಕಾರ ಈ ಸಮಿತಿಯನ್ನು ರಚಿಸಿತ್ತು. ಪಾಟ್ನಾ ಹೈಕೋರ್ಟ್ ನಿವೃತ್ತ ಮುಖ್ಯನ್ಯಾಯಾಧೀಶ ಎಲ್ ನರಸಿಂಹರೆಡ್ಡಿ ಅವರು ಸಮಿತಿಯ ಅಧ್ಯಕ್ಷರಾಗಿದ್ದರು.

261. ಈ ಕೆಳಗಿನ ಏಷ್ಯಾ ರಾಷ್ಟ್ರ ಮತ್ತು ಅದರ ರಾಜಧಾನಿ ತಪ್ಪಾಗಿ ಹೊಂದಾಣಿಕೆ ಆಗಿರುವುದನ್ನು ಗುರುತಿಸಿ:

ಅ) ಕಝುಕಸ್ತಾನ - ಅಸ್ತಾನಾ

ಆ) ಮ್ಯಾನ್ಮಾರ್ - ಯಾಂಗೂನ್

ಇ) ಲಾವೋಸ್ - ವಿಯೆಂಟಿಯಾನ್

ಈ) ಜಾರ್ಜಿಯಾ - ತ್ಬಿಲಿಸಿ

ಮ್ಯಾನ್ಮಾರ್ - ಯಾಂಗೂನ್

ಮ್ಯಾನ್ಮಾರ್ ರಾಜಧಾನಿ ನಾಯ್`ಪಿಯದಾವ್ (Naypyidaw).

262. "2016 ಜಾಗತಿಕ ಯುವಜನತೆ ಅಭಿವೃದ್ದಿ ಸೂಚ್ಯಂಕ (Global Youth Development Index)"ದಲ್ಲಿ ಪ್ರಥಮ ಸ್ಥಾನ ಪಡೆದುಕೊಂಡ ದೇಶ ಯಾವುದು?

ಅ) ಜರ್ಮನಿ

ಆ) ಸ್ವಿಟ್ಜರ್ಲ್ಯಾಂಡ್



www.karunaduexams.com

ಇ) ಡೆನ್ಮಾರ್ಕ್

ಈ) ಸ್ವೀಡನ್

ಜರ್ಮನಿ

ಕಾಮನ್ವೆಲ್ತ್ ಸೆಕ್ರಟೆರಿಯೆಟ್ ಹೊರತಂದಿರುವ 2016 ಜಾಗತಿಕ ಯುವಜನತೆ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತ 133ನೇ ಸ್ಥಾನದಲ್ಲಿದೆ. 183 ದೇಶಗಳ ಪೈಕಿ ಭಾರತ 133 ಸ್ಥಾನಗಳಿಸಿದೆ. ಯುವಜನತೆಗೆ ಶಿಕ್ಷಣ, ಉದ್ಯೋಗ, ಆರೋಗ್ಯ, ನಾಗರಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ಭವಿಷ್ಯದ ಆಧಾರದ ಮೇಲೆ ಸೂಚ್ಯಂಕವನ್ನು ತಯಾರಿಸಲಾಗಿದೆ. ಸೂಚ್ಯಂಕದಲ್ಲಿ ಜರ್ಮನಿ ಮೊದಲ ಸ್ಥಾನದಲ್ಲಿದೆ. ಡೆನ್ಮಾರ್ಕ್, ಸ್ವಿಟ್ಜರ್ಲ್ಯಾಂಡ್, ಯುಕೆ ಮತ್ತು ನೆದರ್ಲ್ಯಾಂಡ್ ಮೊದಲ ಐದು ಸ್ಥಾನದಲ್ಲಿವೆ. ವಿಶೇಷವೆಂದರೆ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿರುವ ಆರು ರಾಷ್ಟ್ರಗಳು ಯುರೋಪ್ ಖಂಡದವೆ ಆಗಿವೆ.

263. ಐರೋಪ್ಯ ಸಂಸತ್ತು ನೀಡುವ ಪ್ರತಿಷ್ಠಿತ ಸಖರೋವ್ ಮಾನವ ಹಕ್ಕು ಪ್ರಶಸ್ತಿಯನ್ನು ಯಾರಿಗೆ ನೀಡಲಾಗುತ್ತಿದೆ?

ಅ) ಕ್ಯಾನ್ ದುಂಡರ್ ಮತ್ತು ಕ್ರೆಮಿಯನ್ ತತರ್

ಆ) ನಾಡಿಯ ಮುರದ್ ಮತ್ತು ಲಾಮಿಯ ಹಾಜಿ ಬಶರ್

ಇ) ರೈಫ್ ಬದಾಯಿ ಮತ್ತು ಮಲಾಲ್ ಯೂಸಫ್ ಝೈ

ಈ) ಹೂ ಜಿಯಾ ಮತ್ತು ಸಲೀಂ ಮಹಮ್ಮದ್ ಬಿನ್

ನಾಡಿಯ ಮುರದ್ ಮತ್ತು ಲಾಮಿಯ ಹಾಜಿ ಬಶರ್

ನಾಡಿಯ ಮುರದ್ ಮತ್ತು ಲಾಮಿಯ ಹಾಜಿ ಬಶರ್ ಅವರನ್ನು ಐರೋಪ್ಯ ಸಂಸತ್ತು ನೀಡುವ ಪ್ರತಿಷ್ಠಿತ ಸಖರೋವ್ ಮಾನವ ಹಕ್ಕು ಪ್ರಶಸ್ತಿಗೆ (ಸಖರೋವ್ ಫ್ರೀಡಂ ಆಫ್ ಥಾಟ್) ಆಯ್ಕೆಮಾಡಲಾಗಿದೆ. ಯಜಿದಿ ಮಹಿಳಾ ಕಾರ್ಯಕರ್ತರಾದ ಈ ಇಬ್ಬರು ಇಸ್ಲಾಮಿಕ್ ಸ್ಟೇಟ್ಸ್ನ ಲೈಂಗಿಕ ಗುಲಾಮತನದಿಂದ ತಪ್ಪಿಸಿಕೊಂಡು ನಂತರ ಮಹಿಳೆಯರನ್ನು ಲೈಂಗಿಕ ಗುಲಾಮಗಿರಿಗೆ ಬಳಸಿಕೊಳ್ಳುವುದರ ವಿರುದ್ದ ಹೋರಾಟ ನಡೆಸುತ್ತಿದ್ದಾರೆ. ಡಿಸೆಂಬರ್ 14, 2016ರಂದು ಫ್ರಾನ್ಸ್ ನ ಸ್ಟ್ರಾಸ್ಬೋರ್ಗ್ ನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರಶಸ್ತಿಯನ್ನು ವಿತರಿಸಲಾಗುವುದು.

264. ಸಿಕ್ಕಿಂ ನಂತರ ಬಯಲು ಮಲ ವಿಸರ್ಜನೆ ಮುಕ್ತ ರಾಜ್ಯ ಖ್ಯಾತಿಗೆ ಪಾತ್ರವಾದ ದೇಶದ ಎರಡನೇ ರಾಜ್ಯ ಯಾವುದು?

www.karunadu

ಅ) ಕೇರಳ

ಆ) ಹಿಮಾಚಲ ಪ್ರದೇಶ

ಇ) ಅಸ್ಸಾಂ

ಈ) ಗೋವಾ

ಹಿಮಾಚಲ ಪ್ರದೇಶ

ಹಿಮಾಚಲ ಪ್ರದೇಶವನ್ನು ಇತ್ತೀಚೆಗೆ ಬಯಲು ಮಲ ಮುಕ್ತ ರಾಜ್ಯವೆಂದು ಘೋಷಿಸಲಾಗಿದೆ. ಸಿಕ್ಕಿಂ ನಂತರ ಈ ಗೌರವಕ್ಕೆ ಪಾತ್ರವಾದ ಎರಡನೇ ರಾಜ್ಯ ಹಿಮಾಚಲ ಪ್ರದೇಶ. ಹಿಮಾಚಲ ಪ್ರದೇಶದ 12 ಜಿಲ್ಲೆಗಳು ಬಯಲು ಬಹಿರ್ದೆಸೆ ಮುಕ್ತವಾಗಿದ್ದು, ಶೇ 100% ಶೌಚಾಲಯಗಳನ್ನು ರಾಜ್ಯ ಹೊಂದಿದೆ.

265. ವಿಶ್ವ ಆರ್ಥಿಕ ವೇದಿಕೆ ಇತ್ತೀಚೆಗೆ ಬಿಡುಗಡೆಗೊಳಿಸಿದ ಲಿಂಗ ಸಮಾನತೆ ಪಟ್ಟಿಯಲ್ಲಿ ಭಾರತದ ಸ್ಥಾನ _____?

ಅ) 87

ಆ) 110

ಇ) 96

ಈ) 101

87

ವಿಶ್ವ ಆರ್ಥಿಕ ವೇದಿಕೆ  ಬಿಡುಗಡೆಗೊಳಿಸಿದ ಲಿಂಗ ಸಮಾನತೆಯ ಪಟ್ಟಿಯಲ್ಲಿ ಭಾರತಕ್ಕೆ ಈ ವರ್ಷ 87ನೆಯ ಸ್ಥಾನ ಲಭಿಸಿದೆ. ಐಸ್ಲ್ಯಾಂಡ್ ಮೊದಲ ಸ್ಥಾನದಲ್ಲಿದೆ. ಕಳೆದ ವರ್ಷ ಭಾರತವು ಲಿಂಗ ಸಮಾನತೆಯ ಪಟ್ಟಿಯಲ್ಲಿ 108ನೇ ಸ್ಥಾನ ಪಡೆದಿತ್ತು. ಅರ್ಥ ವ್ಯವಸ್ಥೆ, ಶಿಕ್ಷಣ, ಆರೋಗ್ಯ ಹಾಗೂ ರಾಜಕೀಯ ಪ್ರಾತಿನಿಧ್ಯ ಕ್ಷೇತ್ರಗಳನ್ನು ಪರಿಶೀಲಿಸಿ ಲಿಂಗ ಸಮಾನತೆಯ ಪ್ರಮಾಣ ಎಷ್ಟಿದೆ ಎಂಬುದನ್ನು ವರದಿ ಹೇಳುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಭಾರತ ಬಹುದೊಡ್ಡ ಪ್ರಮಾಣದಲ್ಲಿ ಸುಧಾರಣೆ ಕಂಡುಕೊಂಡಿದೆ. 'ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಿಕ್ಷಣದಲ್ಲಿ ಭಾರತ ಲಿಂಗ ಸಮಾನತೆಯ ಅಂತರವನ್ನು ಸಂಪೂರ್ಣವಾಗಿ ನಿವಾರಿಸಿದೆ' ಎಂದು ವರದಿಯಲ್ಲಿ ಮೆಚ್ಚುಗೆ ವ್ಯಕ್ತಪಡಿಸಲಾಗಿದೆ.

266. 2016 ಮ್ಯಾನ್ ಬುಕರ್ ಪ್ರಶಸ್ತಿಯನ್ನು ಅಮೆರಿಕದ ಸಾಹಿತಿ  "ಪಾಲ್ ಬೇಟ್ಟಿ" ಅವರ ಯಾವ ಕಾದಂಬರಿಗೆ ನೀಡಲಾಗಿದೆ?

ಅ) ದಿ ವೈಟ್ ಬಾಯ್ ಶಫಲ್

ಆ) ದಿ ಸೆಲ್ ಔಟ್

ಇ) ಟಫ್

ಈ) ಸ್ಲಂಬರ್ಲ್ಯಾಂಡ್

ದಿ ಸೆಲ್ ಔಟ್

www.karunaduexams.com

ಅಮೆರಿಕದ ಖ್ಯಾತ ಸಾಹಿತಿ ಪಾಲ್ ಬೇಟ್ಟಿ ಅವರು ಮ್ಯಾನ್ ಬೂಕರ್ ಪ್ರಶಸ್ತಿ ಪಡೆದ ಮೊಟ್ಟಮೊದಲ ಅಮೆರಿಕನ್ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ಬೇಟ್ಟಿ ಅವರ "ದ ಸೆಲ್ ಔಟ್" ಕಾದಂಬರಿಗೆ ಈ ಪ್ರಶಸ್ತಿ ಲಭಿಸಿದೆ. "ಈ ಕಾದಂಬರಿಯು ಆಘಾತಕಾರಿ ಹಾಗೂ ಅನಿರೀಕ್ಷಿತವಾಗಿ ಹಾಸ್ಯಮಯ" ಎಂದು ತೀರ್ಪುಗಾರರು ಬಣ್ಣಿಸಿದ್ದಾರೆ. ಹುಟ್ಟೂರು ಲಾಸ್ ಏಂಜಲೀಸ್ನ ಚಿತ್ರಣವನ್ನು ಕಾದಂಬರಿಗಾರ ಇದರಲ್ಲಿ ಕಟ್ಟಿಕೊಟ್ಟಿದ್ದು, ಜನಾಂಗೀಯ ಸಮಾನತೆಯ ವಿಡಂಬನೆಗೆ ಕಾದಂಬರಿಯ ರೂಪ ನೀಡಿದ್ದಾರೆ ಎಂದು ತೀರ್ಪುಗಾರರು ಹೇಳಿದ್ದಾರೆ.

267.ಮೊಟ್ಟ ಮೊದಲ ರಾಷ್ಟ್ರೀಯ ಆಯುರ್ವೇದ ದಿನವನ್ನು ಯಾವ ದಿನದಂದ ಆಚರಿಸಲಾಗುತ್ತದೆ?

ಅ) ಅಕ್ಟೋಬರ್ 25

ಆ) ಅಕ್ಟೋಬರ್ 26

ಇ) ಅಕ್ಟೋಬರ್ 28

ಈ) ಅಕ್ಟೋಬರ್ 29

ಅಕ್ಟೋಬರ್ 28

ಪ್ರಪ್ರಥಮ ರಾಷ್ಟ್ರೀಯ ಆಯುರ್ವೇದ ದಿನವನ್ನು ಅಕ್ಟೋಬರ್ 28 ರಂದು ದೇಶದಾದ್ಯಂತ ಆಚರಿಸಲಾಯಿತು. ರಾಷ್ಟ್ರೀಯ ಆಯುರ್ವೇದ ದಿನವನ್ನು ಆಯುಷ್ ಇಲಾಖೆ ಧನ್ವಂತರಿ ಜಯಂತಿ ಅಥವಾ ದಂಥೆರಸ್ ಪ್ರಯುಕ್ತ ಆಚರಿಸುತ್ತಿದೆ. ಮಧುಮೇಹವನ್ನು ತಡೆಯಲು ಮತ್ತು ನಿಯಂತ್ರಿಸಲು ಆಯುರ್ವೇದ (Ayurveda for Prevention and Control of Diabetes) ಇದು ಈ ವರ್ಷದ ಧ್ಯೇಯವಾಕ್ಯ.

268. ಯಾವ ರಾಜ್ಯ ಸಮಾಜದ ದುರ್ಬಲ ವರ್ಗಗಳಿಗೆ ಕಾನೂನು ನೆರವು ಒದಗಿಸಲು ಹೊಸ ಯೋಜನೆಯನ್ನು ಜಾರಿಗೆ ತಂದಿದೆ?

ಅ) ರಾಜಸ್ತಾನ

ಆ) ಒಡಿಶಾ

ಇ) ಪಶ್ಚಿಮ ಬಂಗಾಳ

ಈ) ಜಾರ್ಖಂಡ್

ಒಡಿಶಾ

ಒಡಿಶಾ ರಾಜ್ಯ ಸಮಾಜದ ದುರ್ಬಲ ವರ್ಗಗಳಿಗೆ 6812 ಗ್ರಾಮಪಂಚಾಯತ್ ಮಟ್ಟದಲ್ಲಿ ಕಾನೂನು ನೆರವು ಒದಗಿಸಲು ಹೊಸ ಯೋಜನೆಯನ್ನು ಜಾರಿಗೆ ತಂದಿದೆ. ಈ ಹೊಸ ಯೋಜನೆಗೆ "ಮಧುಬಾಬು ಅಯ್ಯನ್ ಸಹಾಯತ ಶಿಬಿರ್" ಎಂದು ಹೆಸರಿಡಲಾಗಿದೆ. ವಾರಕ್ಕೊಮ್ಮೆ ಕಾನೂನು ನೆರವನ್ನು ಯೋಜನೆಯಡಿ ನೀಡಲಾಗುವುದು. ಜನರಿಗೆ ಉಚಿತ ಕಾನೂನು ನೆರವು ನೀಡುವ ವಕೀಲರಿಗೆ ಪ್ರತಿ ವಿಚಾರಣಗೆ ರೂ 500 ನೀಡಲಾಗುವುದು. ಇದರಿಂದ ನ್ಯಾಯಾಲಯದಲ್ಲಿ ಹೂಡಲಾಗಿರುವ ದಾವೆಗಳ ಸಂಖ್ಯೆ ಕಡಿಮೆಯಾಗಲಿದೆ ಎಂದು ನಂಬಲಾಗಿದೆ.

269. ಯಾವ ದೇಶ ಇತ್ತೀಚೆಗೆ “ಹಿಲ್ಸ ಮೀನು (Hilsa Fish)” ಹಿಡಿಯುವುದರ ಮೇಲೆ ತಾತ್ಕಲಿಕ ನಿಷೇಧ ಹೇರಿದೆ?

ಅ) ಚೀನಾ

ಆ) ಬಾಂಗ್ಲದೇಶ

ಇ) ಶ್ರೀಲಂಕಾ

ಈ) ಭಾರತ

ಬಾಂಗ್ಲದೇಶ

ಬಾಂಗ್ಲದೇಶ “ಹಿಲ್ಸ ಮೀನು” ಹಿಡಿಯುವುದರ ಮೇಲೆ ತಾತ್ಕಲಿಕ ನಿಷೇಧ ಹೇರಿದೆ. ಪ್ರಪಂಚದ ಒಟ್ಟು ಹಿಲ್ಸ ಮೀನು ಉತ್ಪಾದನೆಯಲ್ಲಿ ಬಾಂಗ್ಲದೇಶದ ಪಾಲು ಶೇ60ರಷ್ಟಿದೆ. ಅತಿಯಾದ ಮೀನುಗಾರಿಕೆಯಿಂದ ಹಿಲ್ಸ ಮೀನುಗಳು ಗಣನೀಯವಾಗಿ ಕಡಿಮೆಯಾಗಿರುವುದರಿಂದ ಈ ಕ್ರಮಕೈಗೊಳ್ಳಲಾಗಿದೆ.

270. ಭಾರತ ಸಂವಿಧಾನದ ಯಾವ ವಿಧಿಯು ರಾಷ್ಟ್ರಪತಿಯವರ ಪದಚ್ಯುತಿಗೆ ಸಂಬಂಧಿಸಿದೆ?

ಅ) 58

ಆ) 60

ಇ) 61

ಈ) 62

61

ಸಂವಿಧಾನದ 61ನೇ ವಿಧಿಯು ರಾಷ್ಟ್ರಪತಿಯವರ ಪದಚ್ಯುತಿಗೆ ಸಂಬಂಧಿಸಿದೆ. ಈ ವಿಧಿಯಡಿ ರಾಷ್ಟ್ರಪತಿಯವರನ್ನ ಸಂವಿಧಾನದ ಉಲ್ಲಂಘನೆಯ ಆರೋಪದ ಮೇಲೆ ಮಹಾಭಿಯೋಗ ಪ್ರಕ್ರಿಯೆಯ ಮೂಲಕ ಅಧಿಕಾರಾವಧಿಗಿಂತ ಮುಂಚಿತವಾಗಿ ಪದಚ್ಯುತಿಗೊಳಿಸಬಹುದು. ಸಂವಿಧಾನವು ಸಂಸತ್ತಿಗೆ ಈ ಅಧಿಕಾರ ನೀಡಿದೆ.

271. ಇದು ಭಾರತದ ಅತಿ ಚಿಕ್ಕ ಜಿಲ್ಲೆಯಾಗಿದೆ ____?

ಅ) ಮಾಹೆ

ಆ) ಅಲಪುಝ

ಇ) ತಿರಪ್

ಈ) ದೌಸ

ಮಾಹೆ

ಪುದುಚೇರಿಯ ಮಾಹೆ ದೇಶದ ಅತಿ ಚಿಕ್ಕ ಜಿಲ್ಲೆಯಾಗಿದೆ. ಇತರ ವಿಸ್ತೀರ್ಣ ೨ ಚದರ ಕಿ.ಮೀ. ಗುಜರಾತ್ನ ಕಚ್ ಜಿಲ್ಲೆ ದೇಶದ ಅತಿದೊಡ್ಡ ಜಿಲ್ಲೆಯಾಗಿದೆ. ಇದರ ವಿಸ್ತೀರ್ಣ 45,652 ಚದರ ಕಿ.ಮೀ.

272. ನೀತಿ ಆಯೋಗದ "ಸುಲಭವಾಗಿ ಕೃಷಿ ವಹಿವಾಟು ನಡೆಸುವ ಸೂಚ್ಯಂಕ (Easy of doing agri business index)" ದಲ್ಲಿ ಮೊದಲ ಸ್ಥಾನದಲ್ಲಿರುವ ರಾಜ್ಯ ಯಾವುದು?

ಅ) ಕರ್ನಾಟಕ

ಆ) ಗುಜರಾತ್

ಇ) ಮಹಾರಾಷ್ಟ್ರ

ಈ) ಕೇರಳ

ಮಹಾರಾಷ್ಟ್ರ

ನೀತಿ ಆಯೋಗ ಇತ್ತೀಚೆಗೆ ಬಿಡುಗಡೆಗೊಳಿಸಿದ ಸುಲಭವಾಗಿ ಕೃಷಿ ವಹಿವಾಟು ನಡೆಸುವ ಸೂಚ್ಯಂಕದಲ್ಲಿ ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದೆ. ಗುಜರಾತ್ ಮತ್ತು ರಾಜಸ್ತಾನ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ. ಕೃಷಿ ವಲಯ ಸುಧಾರಣೆಗೆ ರಾಜ್ಯಗಳು ಕೈಗೊಂಡಿರುವ ಕ್ರಮಗಳನ್ನು ಆಧರಿಸಿ ಸೂಚ್ಯಂಕವನ್ನು ಸಿದ್ದಪಡಿಸಲಾಗಿದೆ. ಕೃಷಿವಲಯ ಸುಧಾರಣೆಗೆ ಮಹಾರಾಷ್ಟ್ರ ಸರ್ಕಾರ ಹಲವಾರು ರೈತಪರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿರುವುದಾಗಿ ವರದಿಯಲ್ಲಿ ಹೇಳಿದೆ.

273. "ಮಿಟ್ರಾಲ್ ವಾಲ್ವ್ ಡಿಸೀಸ್ (Mitral Valve Disease)" ಯಾವ ಪ್ರಾಣಿಯಲ್ಲಿ ಸಾಮಾನ್ಯವಾಗಿ ಕಂಡುಬರುವ ಹೃದಯ ಸಂಬಂಧಿ ಕಾಯಿಲೆಯಾಗಿದೆ?

ಅ) ನಾಯಿ

ಆ) ಬೆಕ್ಕು

ಇ) ಹಸು

ಈ) ಒಂಟೆ

ನಾಯಿ

ಮಿಟ್ರಾಲ್ ವಾಲ್ವ್ ಡಿಸೀಸ್ ನಾಯಿಗಳಲ್ಲಿ ಕಂಡುಬರುವ ಹೃದಯ ಸಂಬಂಧಿ ಕಾಯಿಲೆ. ಹೃದಯ ಸಂಬಂಧಿ ಕಾಯಿಲೆಯಿಂದ ಸಾವನ್ನಪ್ಪುವ ನಾಯಿಗಳ ಪೈಕಿ ಶೇ 75% ಸಾವು ಈ ಕಾಯಿಲೆಯಿಂದ ಸಂಭವಿಸುತ್ತದೆ. ಇತ್ತೀಚೆಗೆ ಯುಕೆ ಮೂಲದ ವಿಜ್ಞಾನಿಗಳು ಈ ಕಾಯಿಲೆಗೆ ಲಸಿಕೆಯನ್ನು ಕಂಡುಹಿಡಿದಿರುವುದಾಗಿ ಹೇಳಿದ್ದಾರೆ.

www.karunaduexams.com

274. ಮಾದರಿ ನೋಂದಾಣಿ ವ್ಯವಸ್ಥೆ ಸಮೀಕ್ಷೆಯ ವರದಿ ಪ್ರಕಾರ ಭಾರತದಲ್ಲಿ 2010-14 ಅವಧಿಯಲ್ಲಿ ಜನರ ಜೀವಿತ ಸರಾಸರಿ ಅವಧಿ ಎಷ್ಟಿದೆ?

ಅ) 66 ವರ್ಷ 10 ತಿಂಗಳು

ಆ) 65 ವರ್ಷ 11 ತಿಂಗಳು

ಇ) 67 ವರ್ಷ 11 ತಿಂಗಳು

ಈ) 69 ವರ್ಷ 8 ತಿಂಗಳು

67 ವರ್ಷ 11 ತಿಂಗಳು

ಭಾರತದಲ್ಲಿ 2010-14ರ ಅವಧಿಯಲ್ಲಿ ಜನರ ಸರಾಸರಿ ಜೀವಿತಾವಧಿ 67 ವರ್ಷ 11 ತಿಂಗಳಿಗೆ ಏರಿಕೆಯಾಗಿದೆ. ಮಾದರಿ ನೋಂದಣಿ ವ್ಯವಸ್ಥೆಯು (ಎಸ್‌ಆರ್‌ಎಸ್) ಈ ಸಮೀಕ್ಷೆ ನಡೆಸಿ ವರದಿ ಬಿಡುಗಡೆ ಮಾಡಿದೆ. ಮೊದಲ ಸಮೀಕ್ಷೆ ಸಂದರ್ಭದಲ್ಲಿ ಮಹಿಳೆಯರ ಸರಾಸರಿ ಜೀವಿತಾವಧಿ (49.0) ಪುರುಷರಿಗಿಂತ (50.5) ಕಡಿಮೆ ಇತ್ತು. 1981-85ರ ಅವಧಿಯ ನಂತರ ಇದು ಬದಲಾಗಿದೆ. 2010-14ರ ಅವಧಿಯಲ್ಲಿ ಮಹಿಳೆಯರ ಸರಾಸರಿ ಜೀವಿತಾವಧಿ 69.6 ವರ್ಷವಾಗಿದ್ದರೆ ಪುರುಷರ ಜೀವಿತಾವಧಿ 66.4 ವರ್ಷ. ಆರಂಭದಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದ ಜನರ ಸರಾಸರಿ ಜೀವಿತಾವಧಿಯ ನಡುವೆ ಗಣನೀಯ ಅಂತರ ಇತ್ತು. ಆದರೆ ಇದು ಈಗ ಬಹಳ ತಗ್ಗಿದೆ.

275. ಮೇರಿಯಾನೊ ರಜೊಯ್ (Mariano Rajoy) ಅವರು ಯಾವ ದೇಶದ ಪ್ರಧಾನಿಯಾಗಿ ಆಯ್ಕೆಯಾಗಿದ್ದಾರೆ?

ಅ) ಸ್ಪೇನ್

ಆ) ಫ್ರಾನ್ಸ್

ಇ) ಬ್ರೆಜಿಲ್

ಈ) ಕೀನ್ಯಾ

ಸ್ಪೇನ್ ನ ಹಂಗಾಮಿ ಪ್ರಧಾನಿ ಹಾಗೂ ಪಾಪುಲರ್ ಪಾರ್ಟಿ ನಾಯಕ ಮೇರಿಯಾನೊ ರಜೊಯ್ ಅವರು ಪ್ರಧಾನಿಯಾಗಿ ಪುನರ್ ಆಯ್ಕೆಯಾಗಿದ್ದಾರೆ. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ರಜೊಯ್ ಅವರ ಪರವಾಗಿ 170 ಮತಗಳನ್ನು ಗಳಿಸಿದರೆ, 111 ಮತಗಳು ವಿರುದ್ದವಾಗಿ ಚಲಾಯಿಸಲಾಗಿತ್ತು.

276. ಇಂಡಿಯಾ ಟುಡೇ ನಿಯತಕಾಲಿಕೆ ನಡೆದ ಸಮೀಕ್ಷೆ ಪ್ರಕಾರ ದೇಶದ ದೊಡ್ಡ ರಾಜ್ಯಗಳ ಪೈಕಿ ಆರ್ಥಿಕ ವಿಭಾಗದಲ್ಲಿ ಮೊದಲ ಸ್ಥಾನ ಪಡೆದ ರಾಜ್ಯ ಯಾವುದು?

ಅ) ತೆಲಂಗಣ

ಆ) ಆಂಧ್ರ ಪ್ರದೇಶ

ಇ) ಕರ್ನಾಟಕ



www.karunaduexams.com

ಈ) ತಮಿಳುನಾಡು

ಕರ್ನಾಟಕ

ಇಂಡಿಯಾ ಟುಡೆ ಮ್ಯಾಗಜಿನ್ ನಡೆಸಿದ ಸಮೀಕ್ಷೆಯಲ್ಲಿ ದೇಶದ ದೊಡ್ಡ ರಾಜ್ಯಗಳ ಪೈಕಿ ಆರ್ಥಿಕ ವಿಭಾಗದಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಇದರಲ್ಲಿ ಹೂಡಿಕೆಗೆ ಅಗತ್ಯವಾದ ವಾತಾವರಣ, ಕೃಷಿ, ಶಿಕ್ಷಣ, ಮೂಲಭೂತ ಸೌಕರ್ಯ ಮತ್ತು ಕಾನೂನು ಮತ್ತು ಸುವ್ಯವಸ್ಥೆ, ಪರಿಸರ ಸಂರಕ್ಷಣೆ ಹಾಗೂ ಇ-ಆಡಳಿತವನ್ನು ಪರಿಗಣನೆಗೆ ತೆಗೆದುಕೊಂಡು ಇಂಡಿಯಾ ಟುಡೆ ಮ್ಯಾಗಜಿನ್ ಈ ಸಮೀಕ್ಷೆ ನಡೆಸಿದೆ.ಈ ಸಮೀಕ್ಷೆ ಪ್ರಕಾರ, ದೇಶದಲ್ಲಿ ಆರ್ಥಿಕವಾಗಿ ಪ್ರಗತಿ ಸಾಧಿಸಿರುವ ದೊಡ್ಡ ರಾಜ್ಯಗಳಲ್ಲಿ ಕರ್ನಾಟಕವೇ ಮೊದಲ ಸ್ಥಾನ ಪಡೆದುಕೊಂಡಿದೆ. ಕಳೆದ ಒಂದು ವರ್ಷದ ಪ್ರಗತಿದಾಯಕ ಕಾರ್ಯಕ್ರಮಗಳನ್ನ ಅವಲೋಕಿಸಿ, ಜನಮತದೊಂದಿಗೆ ಈ ಆಯ್ಕೆ ಮಾಡಲಾಗಿದೆ.

277. ವಿಶ್ವಸಂಸ್ಥೆಯ ಮಾನವ ಹಕ್ಕು ಮಂಡಳಿಯ (UNHRC) ಕೇಂದ್ರ ಕಚೇರಿ ಎಲ್ಲಿದೆ?

ಅ) ಜಿನಿವಾ

ಆ) ನ್ಯೂಯಾರ್ಕ್

ಇ) ಬರ್ಲಿನ್

ಈ) ರೋಮ್

ಜಿನಿವಾ

ವಿಶ್ವಸಂಸ್ಥೆಯ ಮಾನವ ಹಕ್ಕು ಮಂಡಳಿಯ ಕೇಂದ್ರ ಕಚೇರಿ ಜಿನಿವಾದಲ್ಲಿ. ವಿಶ್ವಸಂಸ್ಥೆಯ ಮಾನವ ಹಕ್ಕು ಮಂಡಳಿಯಲ್ಲಿ 47 ರಾಷ್ಟ್ರಗಳನ್ನು ಸದಸ್ಯ ರಾಷ್ಟ್ರಗಳಾಗಿವೆ. ಸದಸ್ಯ ರಾಷ್ಟ್ರಗಳು ಮೂರು ವರ್ಷ ಅವಧಿ ನೇಮಕಗೊಳ್ಳುತ್ತವೆ.

278. ಇತ್ತೀಚೆಗೆ ನಿಧನರಾದ ಶಶಿಕಲಾ ಕಾಕೋಡ್ಕರ್ ಯಾವ ರಾಜ್ಯದ ಮೊದಲ ಹಾಗೂ ಏಕೈಕ ಮಹಿಳಾ ಮುಖ್ಯಮಂತ್ರಿ ಎನಿಸಿದ್ದರು?

ಅ) ಕೇರಳ

ಆ) ಗೋವಾ

ಇ) ಮಹಾರಾಷ್ಟ್ರ

ಈ) ಗುಜರಾತ್

ಗೋವಾ

ಗೋವಾದ ಮೊದಲ ಮತ್ತು ಏಕೈಕ ಮಹಿಳಾ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದ ಶಶಿಕಲಾ ಕಾಕೋಡ್ಕರ್(81) ನಿಧನರಾದರು. ಮಹಾರಾಷ್ಟ್ರವಾದಿ ಗೋಮಾಂತಕ ಪಾರ್ಟಿ(ಎಂಜಿಪಿ)ಯ ಹಿರಿಯ ನಾಯಕಿಯಾಗಿದ್ದ ಅವರು ಗೋವಾದ ಮೊದಲ ಮುಖ್ಯಮಂತ್ರಿಯಾಗಿದ್ದ ತನ್ನ ತಂದೆ ದಯಾನಂದ ಬಾಂದೋಡ್ಕರ್ ಅವರು 1973ರಲ್ಲಿ

www.karunaduexams.com

ನಿಧನರಾದ ಬಳಿಕ ಮುಖ್ಯಮಂತ್ರಿಯಾಗಿ ನೇಮಕಗೊಂಡಿದ್ದರು. ಎಪ್ರಿಲ್ 1979ರಲ್ಲಿ ಪಕ್ಷವು ವಿಭಜನೆಗೊಳ್ಳುವವರೆಗೂ ಅವರು ಅಧಿಕಾರದಲ್ಲಿದ್ದರು. ೯೦ರ ದಶಕದ ಆರಂಭದಲ್ಲಿ ಶಿಕ್ಷಣ ಸಚಿವೆಯಾಗಿದ್ದ ಅವರು ಪ್ರಾಥಮಿಕ ಶಿಕ್ಷಣದಲ್ಲಿ ಇಂಗ್ಲೀಷ್ ನ್ನು ಪಕ್ಕಕ್ಕೆ ತಳ್ಳಿ ಮರಾಠಿಯನ್ನು ಪ್ರಾದೇಶಿಕ ಭಾಷೆಯನ್ನಾಗಿ ಜಾರಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

279.ಮಾಜಿ ಹಣಕಾಸು ಕಾರ್ಯದರ್ಶಿ ಅಶೋಕ್ ಚಾವ್ಲ ಅವರು ಯಾವ ಬ್ಯಾಂಕ್ ನ ಕಾರ್ಯನಿರ್ವಾಹಕೇತರ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ?

ಅ) ಯೆಸ್ ಬ್ಯಾಂಕ್

ಆ) ಐಸಿಐಸಿಐ ಬ್ಯಾಂಕ್

ಇ) ಆಕ್ಸಿಸ್ ಬ್ಯಾಂಕ್

ಈ) ಕಾರ್ಪೋರೇಷನ್ ಬ್ಯಾಂಕ್

ಯೆಸ್ ಬ್ಯಾಂಕ್

ಮಾಜಿ ಕೇಂದ್ರ ಹಣಕಾಸು ಕಾರ್ಯದರ್ಶಿ ಮತ್ತು ಭಾರತೀಯ ಸ್ಪರ್ಧಾತ್ಮಕ ಆಯೋಗದ ಅಧ್ಯಕ್ಷರಾದ ಅಶೋಕ್ ಚಾವ್ಲ ಅವರು ಯೆಸ್ ಬ್ಯಾಂಕ್ನ ಕಾರ್ಯನಿರ್ವಾಹಕೇತರ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಈ ಹಿಂದೆ ಅಧ್ಯಕ್ಷರಾಗಿದ್ದ ರಾಧ ಸಿಂಗ್ ಅವರ ಅವಧಿ ಪೂರ್ಣಗೊಂಡ ಹಿನ್ನಲೆಯಲ್ಲಿ ಈ ಹುದ್ದೆ ತೆರವಾಗಿತ್ತು. ಅಶೋಕ್ ಚಾವ್ಲ ಅವರು ಮೂರು ವರ್ಷಗಳ ಕಾಲ ಹುದ್ದೆಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ.

280. ಮಹಿಳೆಯರ ಕುರಿತು ಸಾಮಾಜಿಕ ಅಭಿಪ್ರಾಯವನ್ನು ಬದಲಿಸಲು ಮತ್ತು ಗೌರವ ಮೂಡಿಸಲು 'ನಯೀ ಸೋಚ್' ಅಭಿಯಾನವನ್ನು ಆರಂಭಿಸಿರುವ ಮಾಧ್ಯಮ ಸಂಸ್ಥೆ ಯಾವುದು?

ಅ) ಸ್ಟಾರ್ ಪ್ಲಸ್

ಆ) ಟೆನ್ ಸ್ಪೋರ್ಟ್ಸ್

ಇ) ಜೀ ಗ್ರೂಫ್

ಈ) ಸನ್ ನೆಟವರ್ಕ್

ಸ್ಟಾರ್ ಪ್ಲಸ್

ಮಹಿಳೆಯರ ಕುರಿತು ಸಾಮಾಜಿಕ ಅಭಿಪ್ರಾಯವನ್ನು ಬದಲಿಸಲು, ಮಹಿಳೆಯರ ಕುರಿತು ಗೌರವ ಮೂಡಿಸಲು 'ನಯೀ ಸೋಚ್' ಎಂಬ ಅಭಿಯಾನವನ್ನು ಸ್ಟಾರ್ ಪ್ಲಸ್ ಚಾನೆಲ್ ಆರಂಭಿಸದೆ. ಈ ಅಭಿಯಾನಕ್ಕೆ ಬಿಸಿಸಿಐ ಕೈಜೋಡಿಸಿದೆ. ಈ ಅಭಿಯಾನದ ಅಂಗವಾಗಿ ಇತ್ತೀಚೆಗೆ ನಡೆದ ಭಾರತ-ನ್ಯೂಜಿಲ್ಯಾಂಡ್ ನಡುವಿನ ಕ್ರಿಕೆಟ್ ಪಂದ್ಯದಲ್ಲಿ ಭಾರತದ ಆಟಗಾರರು ತಮ್ಮ ಅಮ್ಮನ ಹೆಸರು ಇರುವ ಜೆರ್ಸಿಯನ್ನು ಧರಿಸಿ ಕ್ರೀಡಾಕಣಕ್ಕಿಳಿದಿದ್ದಾರೆ.

www.karunaduexams.com

281. ಇತ್ತೀಚೆಗೆ ಬಿಡುಗಡೆಗೊಂಡ ಅಂತಾರಾಷ್ಟ್ರೀಯ ಕ್ರಿಕೆಟ್ ಕೌನಿಲ್ಸ್ (ಐಸಿಸಿ) ಮಹಿಳಾ ಬೌಲರ್ ಗಳ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದುಕೊಂಡವರು ಯಾರು?

ಅ) ಸ್ಟೆಫಿನ್ ಟೇಲರ್

ಆ) ಜೂಲನ್ ಗೋಸ್ವಾಮಿ

ಇ) ಥಿಶುರ್ ಕಾಮಿನಿ

ಈ) ಪೂನಮ್ ರಾವತ್

ಜೂಲನ್ ಗೋಸ್ವಾಮಿ

ಭಾರತ ವನಿತೆಯರ ಕ್ರಿಕೆಟ್ ತಂಡದ ಮಾಜಿ ನಾಯಕಿ ಜೂಲನ್ ಗೋಸ್ವಾಮಿ ಅವರು ಅಂತಾರಾಷ್ಟ್ರೀಯ ಕ್ರಿಕೆಟ್ ಕೌನಿಲ್ಸ್ (ಐಸಿಸಿ) ಬೌಲರ್ ಗಳ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದುಕೊಂಡಿದ್ದಾರೆ. ಜೂಲನ್ ಗೋಸ್ವಾಮಿ ರವರು ವೆಸ್ಟ್ ಇಂಡೀಸ್ ನ ವೇಗದ ಬೌಲರ್ ಸ್ಟೆಫಿನ್ ಟೇಲರ್ ಅವರನ್ನು ಹಿಂದಿಕ್ಕಿ ಅಗ್ರಸ್ಥಾನ ಪಡೆದುಕೊಂಡಿದ್ದಾರೆ. 730 ಅಂಕಗಳೊಂದಿಗೆ ಎರಡು ವರ್ಷದ ಬಳಿಕ ನಂ.1 ಐಸಿಸಿ ವೇಗದ ಬೌಲರ್ ಎನಿಸಿಕೊಂಡರು.

282. ಯಾವ ರಾಜ್ಯ ಪ್ರವಾಸೋದ್ಯಮ ಉತ್ತೇಜಿಸುವ ಸಲುವಾಗಿ ದೇಶದಲ್ಲೆ ಮೊದಲ ಬಾರಿಗೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಜೊತೆಗೆ ಒಪ್ಪಂದಕ್ಕೆ ಮುಂದಾಗಿದೆ?

ಅ) ಕರ್ನಾಟಕ

ಆ) ಕೇರಳ

ಇ) ಮಹಾರಾಷ್ಟ್ರ

ಈ) ಮಧ್ಯ ಪ್ರದೇಶ

ಕರ್ನಾಟಕ

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಉತ್ತೇಜಿಸುವ ಸಲುವಾಗಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಜೊತೆ ಒಪ್ಪಂದಕ್ಕೆ ಸಹಿ ಹಾಕಲು ಮುಂದಾಗಿದೆ. ಇಂತಹ ವಿಶಿಷ್ಟ ಪ್ರಯತ್ನ ದೇಶದಲ್ಲೆ ಮೊದಲು ಎನಿಸಿದೆ. ಈ ಸಂಬಂಧ ಕೆಲವೇ ದಿನಗಳಲ್ಲಿ ಒಪ್ಪಂದಕ್ಕೆ ಸಹಿಹಾಕುವುದಾಗಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ.

283. ಯಾವ ರಾಜ್ಯ ನವೆಂಬರ್ 1 ರಂದು"ತಂಬಾಕು ರಹಿತ ದಿನ (No Tobacco Day)"ವನ್ನಾಗಿ ಆಚರಿಸಲು ನಿರ್ಧರಿಸಿದೆ?

ಅ) ಕೇರಳ

www.karunaduexams.com

ಆ) ಪಂಜಾಬ್

ಇ) ಆಂಧ್ರ ಪ್ರದೇಶ

ಈ) ಹರಿಯಾಣ

ಪಂಜಾಬ್

ಪಂಜಾಬ್ ರಾಜ್ಯ ಸರ್ಕಾರ ನವೆಂಬರ್ 1 ರಂದು ತಂಬಾಕು ರಹಿತ ದಿನವನ್ನಾಗಿ ಆಚರಿಸಲು ತೀರ್ಮಾನಿಸಿದೆ. ರಾಜ್ಯದಲ್ಲಿ ವ್ಯಾಪಕವಾಗಿ ಬೆಳೆದಿರುವ ತಂಬಾಕು ಬಳಕೆಯನ್ನು ಪ್ರೋತ್ಸಾಹಿಸದಿರುಲು ಈ ಕ್ರಮಕ್ಕೆ ಮುಂದಾಗಿದೆ. ಮುಖ್ಯಮಂತ್ರಿ ಪ್ರಕಾಶ್ ಸಿಂಗ್ ಬಾದಲ್ ಈ ನಿಟ್ಟಿನಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

284. 2016 ಮೆಕ್ಸಿಕನ್ ಗ್ರಾನ್ ಪ್ರಿಕ್ಸ್ ರೇಸ್ ಗೆದ್ದವರು ಯಾರು?

ಅ) ಲೇವಿಸ್ ಹ್ಯಾಮಿಲ್ಟನ್

ಆ) ನಿಕೊ ರೋಸ್ಬರ್ಗ್

ಇ) ಮ್ಯಾಕ್ಸ್ ವರ್ಸಟಪನ್

ಈ) ಸೆಬಾಸ್ಟಿಯನ್ ವೆಟಲ್

ಲೇವಿಸ್ ಹ್ಯಾಮಿಲ್ಟನ್

ಮರ್ಸಿಡೆಸ್ ಚಾಲಕ ಲೇವಿಸ್ ಹ್ಯಾಮಿಲ್ಟನ್ ರವರು 2016 ಮೆಕ್ಸಿಕನ್ ಗ್ರಾನ್ ಪ್ರಿಕ್ಸ್ ರೇಸ್ ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು. ನಿಕೊ ರೊಸ್ಬರ್ಗ್ ಎರಡನೇ ಸ್ಥಾನ ಹಾಗೂ ಫೆರಾರಿ ಚಾಲಕ ಸೆಬಾಸ್ಟಿಯನ್ ವೆಟಲ್ ಮೂರನೇ ಸ್ಥಾನ ಪಡೆದುಕೊಂಡರು.

285.ಯಾವ ದೇಶವನ್ನು ಮಣಿಸಿ ಭಾರತ 2016 ವಿಶ್ವಕಪ್ ಕಬಡ್ಡಿಯನ್ನು ಗೆದ್ದುಕೊಂಡಿತು?

ಅ) ಪಾಕಿಸ್ತಾನ

ಆ) ಇರಾನ್

ಇ) ಬಾಂಗ್ಲದೇಶ

ಈ) ಆಸ್ಟ್ರೇಲಿಯಾ

ಇರಾನ್

www.karunaduexams.com

286. ಯಾವ ನಗರದಲ್ಲಿ "ಪ್ಯಾಲೆಸ್ತಾನ-ಭಾರತ ಟೆಕ್ನೋ ಪಾರ್ಕ್"ಸ್ಥಾಪಿಸುವ ಸಲುವಾಗಿ ಭಾರತ ಮತ್ತು ಪ್ಯಾಲೆಸ್ತಾನ ಇತ್ತೀಚೆಗೆ ಒಡಂಬಡಿಕೆಗೆ ಸಹಿ ಹಾಕಿದೆ?

ಅ) ನವ ದೆಹಲಿ

ಆ) ರಮಲ್ಲಹ್

ಇ) ಹೆಬ್ರಾನ್

ಈ) ಮುಂಬೈ

ರಮಲ್ಲಹ್

ಪ್ಯಾಲೆಸ್ತಾನದ ರಮಲ್ಲಹ್ ನಗರದಲ್ಲಿ "ಪ್ಯಾಲೆಸ್ತಾನ-ಭಾರತ ಟೆಕ್ನೋ ಪಾರ್ಕ್"ಸ್ಥಾಪಿಸುವ ಸಲುವಾಗಿ ಭಾರತ-ಪ್ಯಾಲೆಸ್ತಾನ ನಡುವೆ ಒಡಂಬಡಿಕೆ ಒಪ್ಪಂದಕ್ಕೆ ಸಹಿಹಾಕಲಾಯಿತು. ಕಳೆದ ವರ್ಷ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು ಪ್ಯಾಲೆಸ್ತಾನಕ್ಕೆ ಭೇಟಿ ನೀಡಿದ ವೇಳೆ ಟೆಕ್ನೋ ಪಾರ್ಕ್ ಸ್ಥಾಪಿಸುವ ವಿಷಯವನ್ನು ಪ್ರಕಟಿಸಿದ್ದರು. ಒಪ್ಪಂದದ ಪ್ರಕಾರ ಟೆಕ್ನೋ ಪಾರ್ಕ್ ಸ್ಥಾಪನೆಗೆ ಬೇಕಾಗುವ ಸ್ಥಳವನ್ನು ಪ್ಯಾಲೆಸ್ತಾನ ಒದಗಿಸಲಿದೆ. ಭಾರತ 12 ಮಿಲಿಯನ್ ಡಾಲರ್ ಅನುದಾನವನ್ನು ಇದರ ಸ್ಥಾಪನೆಗೆ ನೀಡಲಿದೆ.

287. ಭಾರತ-ನೇಪಾಳ ನಡುವಿನ "ಸೂರ್ಯ ಕಿರಣ್-10" ಸಮರಾಭ್ಯಾಸ ಯಾವ ನಗರದಲ್ಲಿ ಆರಂಭಗೊಂಡಿದೆ?

ಅ) ಕಚ್, ಗುಜರಾತ್

ಆ) ಸಲ್ ಝೂಂಡಿಯ, ನೇಪಾಳ

ಇ) ಜೈಸಲ್ಮೇರ್, ರಾಜಸ್ತಾನ

ಈ) ಕಠ್ಮಂಡು, ನೇಪಾಳ

ಸಲ್ ಝೂಂಡಿಯ, ನೇಪಾಳ

ಭಾರತ-ನೇಪಾಳ ನಡುವಿನ ಸೂರ್ಯ ಕಿರಣ್-10 ಸಮರಾಭ್ಯಾಸ ನೇಪಾಳದ ಸಲ್‌ಝೂಂಡಿಯ ಸೇನಾ ಸಮರ ಶಾಲೆಯಲ್ಲಿ (ಎನ್‌ಎಬಿಎಸ್) ಆರಂಭಗೊಂಡಿದೆ. ದ್ವೈವಾರ್ಷಿಕವಾಗಿ ನಡೆಯುವ ಈ ಯುದ್ಧಭ್ಯಾಸದಲ್ಲಿ ಎರಡು ದೇಶಗಳ ಸೇನಾಪಡೆಗಳು ಕಸರತ್ತು ಆರಂಭಿಸಿವೆ. ಆರಂಭವಾಗಿರುವ ಜಂಟಿ ಸಮರಾಭ್ಯಾಸವು ನವೆಂಬರ್ 13ರವರೆಗೆ ನಡೆಯಲಿದೆ. ಸೂರ್ಯ ಕಿರಣ ಸರಣಿಯನ್ನು ವಿಶ್ವದ ಬೃಹತ್ ಭೂಸೇನಾ ಸಮರಾಭ್ಯಾಸ ಎಂದು ಬಣ್ಣಿಸಲಾಗಿದೆ. ಕುಮಾವ್ ರೆಜಿಮೆಂಟ್‌ನ ತುಕಡಿಯು ಭಾರತ ಸೇನೆಯನ್ನು ಪ್ರತಿನಿಧಿಸಿದ್ದರೆ, ನೇಪಾಳ ಜಬರ್ ಜಂಗ್ ಬೆಟಾಲಿಯನ್ ಕಳುಹಿಸಿದೆ.

www.karunaduexams.com

288. ಯಾವ ರಾಜ್ಯ ಪ್ರವಾಸೋದ್ಯಮ ಉತ್ತೇಜಿಸುವ ಸಲುವಾಗಿ ದೇಶದಲ್ಲೆ ಮೊದಲ ಬಾರಿಗೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಜೊತೆಗೆ ಒಪ್ಪಂದಕ್ಕೆ ಮುಂದಾಗಿದೆ?

ಅ) ಕರ್ನಾಟಕ

ಆ) ಕೇರಳ

ಇ) ಮಹಾರಾಷ್ಟ್ರ

ಈ) ಮಧ್ಯ ಪ್ರದೇಶ

ಕರ್ನಾಟಕ

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಉತ್ತೇಜಿಸುವ ಸಲುವಾಗಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಜೊತೆ ಒಪ್ಪಂದಕ್ಕೆ ಸಹಿ ಹಾಕಲು ಮುಂದಾಗಿದೆ. ಇಂತಹ ವಿಶಿಷ್ಟ ಪ್ರಯತ್ನ ದೇಶದಲ್ಲೆ ಮೊದಲು ಎನಿಸಿದೆ. ಈ ಸಂಬಂಧ ಕೆಲವೇ ದಿನಗಳಲ್ಲಿ ಒಪ್ಪಂದಕ್ಕೆ ಸಹಿಹಾಕುವುದಾಗಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ.

289. 2016 ಏಷ್ಯಾ ಕಪ್ ಪುರುಷರ ಹಾಕಿ ಪ್ರಶಸ್ತಿ ಗೆದ್ದ ರಾಷ್ಟ್ರ ತಂಡ ಯಾವುದು?

ಅ) ಪಾಕಿಸ್ತಾನ

ಆ) ಭಾರತ

ಇ) ಮಲೇಷಿಯಾ

ಈ) ಜಪಾನ್

ಭಾರತ

ಭಾರತ ಹಾಕಿ ತಂಡವು ಮಲೇಷಿಯಾದಲ್ಲಿ ನಡೆದ 2016 ಏಷ್ಯಾ ಕಪ್ ಹಾಕಿಯಲ್ಲಿ ಪಾಕಿಸ್ತಾನವನ್ನು ಸೋಲಿಸಿ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಟೂರ್ನಿಯ ಫೈನಲ್‌ನಲ್ಲಿ ಭಾರತ ತಂಡ 3–2 ಗೋಲುಗಳಿಂದ ಪಾಕಿಸ್ತಾನ ವಿರುದ್ದ ಗೆದ್ದಿತು.2014ರಲ್ಲಿ ಇಂಚನ್‌ನಲ್ಲಿ ನಡೆದಿದ್ದ ಟೂರ್ನಿಯ ಫೈನಲ್‌ನಲ್ಲಿಯೂ ಭಾರತ ತಂಡವು ಪಾಕ್ ವಿರುದ್ದ ಗೆದ್ದಿತ್ತು. 2011ರಲ್ಲಿ ಮೊದಲ ಬಾರಿಗೆ ನಡೆದಿದ್ದ ಏಷ್ಯಾ ಕಪ್ ಟೂರ್ನಿಯ ಫೈನಲ್‌ನಲ್ಲಿಯೂ ಭಾರತ ತಂಡವು ಪಾಕ್ ವಿರುದ್ದ ಗೆದ್ದಿತ್ತು.

www.karunaduexams.com

290. ಯಾವ ರಾಜ್ಯ ನವೆಂಬರ್ 1 ರಂದು"ತಂಬಾಕು ರಹಿತ ದಿನ (No Tobacco Day)"ವನ್ನಾಗಿ ಆಚರಿಸಲು ನಿರ್ಧರಿಸಿದೆ?

ಅ) ಕೇರಳ

ಆ) ಪಂಜಾಬ್

ಇ) ಆಂಧ್ರ ಪ್ರದೇಶ

ಈ) ಹರಿಯಾಣ

ಪಂಜಾಬ್

ಪಂಜಾಬ್ ರಾಜ್ಯ ಸರ್ಕಾರ ನವೆಂಬರ್ 1 ರಂದು ತಂಬಾಕು ರಹಿತ ದಿನವನ್ನಾಗಿ ಆಚರಿಸಲು ತೀರ್ಮಾನಿಸಿದೆ. ರಾಜ್ಯದಲ್ಲಿ ವ್ಯಾಪಕವಾಗಿ ಬೆಳೆದಿರುವ ತಂಬಾಕು ಬಳಕೆಯನ್ನು ಪ್ರೋತ್ಸಾಹಿಸದಿರುಲು ಈ ಕ್ರಮಕ್ಕೆ ಮುಂದಾಗಿದೆ. ಮುಖ್ಯಮಂತ್ರಿ ಪ್ರಕಾಶ್ ಸಿಂಗ್ ಬಾದಲ್ ಈ ನಿಟ್ಟಿನಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

291. 2016 ಮೆಕ್ಸಿಕನ್ ಗ್ರಾನ್ ಪ್ರಿಕ್ಸ್ ರೇಸ್ ಗೆದ್ದವರು ಯಾರು?

ಅ) ಲೇವಿಸ್ ಹ್ಯಾಮಿಲ್ಟನ್

ಆ) ನಿಕೊ ರೋಸ್ಬರ್ಗ್

ಇ) ಮ್ಯಾಕ್ಸ್ ವರ್ಸಟಪನ್

ಈ) ಸೆಬಾಸ್ಟಿಯನ್ ವೆಟಲ್

ಲೇವಿಸ್ ಹ್ಯಾಮಿಲ್ಟನ್

ಮರ್ಸಿಡೆಸ್ ಚಾಲಕ ಲೇವಿಸ್ ಹ್ಯಾಮಿಲ್ಟನ್ ರವರು 2016 ಮೆಕ್ಸಿಕನ್ ಗ್ರಾನ್ ಪ್ರಿಕ್ಸ್ ರೇಸ್ ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು. ನಿಕೊ ರೊಸ್ಬರ್ಗ್ ಎರಡನೇ ಸ್ಥಾನ ಹಾಗೂ ಫೆರಾರಿ ಚಾಲಕ ಸೆಬಾಸ್ಟಿಯನ್ ವೆಟಲ್ ಮೂರನೇ ಸ್ಥಾನ ಪಡೆದುಕೊಂಡರು.

292. ಯಾವ ನಗರದಲ್ಲಿ "ಪ್ಯಾಲೆಸ್ತಾನ-ಭಾರತ ಟೆಕ್ನೋ ಪಾರ್ಕ್"ಸ್ಥಾಪಿಸುವ ಸಲುವಾಗಿ ಭಾರತ ಮತ್ತು ಪ್ಯಾಲೆಸ್ತಾನ ಇತ್ತೀಚೆಗೆ ಒಡಂಬಡಿಕೆಗೆ ಸಹಿ ಹಾಕಿವೆ?

ಅ) ನವ ದೆಹಲಿ

ಆ) ರಮಲ್ಲಹ್

ಇ) ಹೆಬ್ರಾನ್

ಈ) ಮುಂಬೈ

ರಮಲ್ಲಹ್

www.karunaduexams.com

ಪ್ಯಾಲೆಸ್ತಾನದ ರಮಲ್ಲಹ್ ನಗರದಲ್ಲಿ "ಪ್ಯಾಲೆಸ್ತಾನ-ಭಾರತ ಟೆಕ್ನೋ ಪಾರ್ಕ್"ಸ್ಥಾಪಿಸುವ ಸಲುವಾಗಿ ಭಾರತ-ಪ್ಯಾಲೆಸ್ತಾನ ನಡುವೆ ಒಡಂಬಡಿಕೆ ಒಪ್ಪಂದಕ್ಕೆ ಸಹಿಹಾಕಲಾಯಿತು. ಕಳೆದ ವರ್ಷ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು ಪ್ಯಾಲೆಸ್ತಾನಕ್ಕೆ ಭೇಟಿ ನೀಡಿದ ವೇಳೆ ಟೆಕ್ನೋ ಪಾರ್ಕ್ ಸ್ಥಾಪಿಸುವ ವಿಷಯವನ್ನು ಪ್ರಕಟಿಸಿದ್ದರು. ಒಪ್ಪಂದದ ಪ್ರಕಾರ ಟೆಕ್ನೋ ಪಾರ್ಕ್ ಸ್ಥಾಪನೆಗೆ ಬೇಕಾಗುವ ಸ್ಥಳವನ್ನು ಪ್ಯಾಲೆಸ್ತಾನ ಒದಗಿಸಲಿದೆ. ಭಾರತ 12 ಮಿಲಿಯನ್ ಡಾಲರ್ ಅನುದಾನವನ್ನು ಇದರ ಸ್ಥಾಪನೆಗೆ ನೀಡಲಿದೆ.

293. ಕೂಚ್ ಬಿಹಾರ್ ಟ್ರೋಫಿ ಯಾವ ಕ್ರೀಡೆಗೆ ಸಂಬಂಧಿಸಿದೆ?

ಅ) ಫುಟ್ಬಾಲ್

ಆ) ಕ್ರಿಕೆಟ್

ಇ) ಹಾಕಿ

ಈ) ಗಾಲ್ಫ್

ಕ್ರಿಕೆಟ್

ಕೂಚ್ ಬಿಹಾರ್ 17 ವರ್ಷದೊಳಗಿನವರ ಕ್ರಿಕೆಟ್ ಟೂರ್ನಮೆಂಟ್.

294. ಕೇಂದ್ರ ಸರ್ಕಾರ ಬಿಡುಗಡೆಗೊಳಿಸಿದ ವ್ಯವಹಾರ ನಡೆಸಲು ಉತ್ತಮ ರಾಜ್ಯಗಳ ಪೈಕಿ ಮೊದಲ ಸ್ಥಾನ ಹಂಚಿಕೊಂಡ ರಾಜ್ಯಗಳು ಯಾವುವು?

ಅ) ಗುಜರಾತ್, ಕೇರಳ

ಆ) ಆಂಧ್ರಪ್ರದೇಶ, ತೆಲಂಗಣ

ಇ) ತೆಲಂಗಣ, ಮಹಾರಾಷ್ಟ್ರ

ಈ) ಒಡಿಶಾ, ಮಹಾರಾಷ್ಟ್ರ

ಆಂಧ್ರಪ್ರದೇಶ, ತೆಲಂಗಣ

ಕೇಂದ್ರ ಸರ್ಕಾರ ಬಿಡುಗಡೆಗೊಳಿಸಿದ ವ್ಯವಹಾರ ನಡೆಸಲು(ಉದ್ಯಮ ಸ್ನೇಹಿ) ರಾಜ್ಯಗಳ ಪಟ್ಟಿಯಲ್ಲಿ ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳು ಮೊದಲ ಸ್ಥಾನವನ್ನು ಪಡೆದುಕೊಂಡಿವೆ. 2015ರಲ್ಲಿ 9ನೇ ಸ್ಥಾನದಲ್ಲಿದ್ದ ಕರ್ನಾಟಕ 13ನೇ ಸ್ಥಾನಕ್ಕೆ ಕುಸಿದಿದೆ. ಗುಜರಾತ್ ಮೂರು, ಛತ್ತೀಸ್ ಗಢ್ ನಾಲ್ಕನೇ ಸ್ಥಾನ ಉಳಿಸಿಕೊಂಡಿದ್ದರೆ, ನಂತರದಲ್ಲಿ ಮಧ್ಯಪ್ರದೇಶ, ಹರ್ಯಾಣ, ಜಾರ್ಖಂಡ್, ರಾಜಸ್ಥಾನ್, ಉತ್ತರಾಖಂಡ್ ಮತ್ತು ಮಹಾರಾಷ್ಟ್ರ ರಾಜ್ಯಗಳು ಸ್ಥಾನ ಪಡೆದಿದೆ.

295. ವಿಶ್ವಬ್ಯಾಂಕ್ನ ಮುಖ್ಯಕಾರ್ಯನಿರ್ವಾಹಕರಾಗಿ ನೇಮಕಗೊಂಡ “ಕ್ರಿಸ್ಟಾಲಿನಾ ಜಾರ್ಜಿಯೆವಾ” ಯಾವ ದೇಶದವರು?

ಅ) ಬಲ್ಗೇರಿಯಾ

ಆ) ಇಸ್ರೇಲ್

ಇ) ಜಾರ್ಜಿಯಾ

ಈ) ಇಥೋಪಿಯಾ

ಬಲ್ಗೇರಿಯಾ

ಐರೋಪ್ಯ ಒಕ್ಕೂಟದ ಮಾನವೀಯ ವ್ಯವಹಾರಗಳ ಮಾಜಿ ಅಧ್ಯಕ್ಷೆ, ಬಲ್ಗೇರಿಯಾದ ಕ್ರಿಸ್ಟಾಲಿನ್ ಜಾರ್ಜಿಯೆವಾ ಅವರು ವಿಶ್ವಬ್ಯಾಂಕ್ನ ಮುಖ್ಯಕಾರ್ಯನಿರ್ವಾಹಕರಾಗಿ ನೇಮಕಗೊಂಡಿದ್ದಾರೆ. ಮುಲ್ಯಾನಿ ಇಂದ್ರಾವತಿ ಅವರ ಉತ್ತಾರಧಿಕಾರಿಯಾಗಿ ಜನವರಿ 2017 ರಿಂದ ಕಾರ್ಯನಿರ್ವಹಿಸಲಿದ್ದಾರೆ. ಜಾರ್ಜಿಯೆವಾ ಅವರು ಬಲ್ಗೇರಿಯಾದ ಅರ್ಥಶಾಸ್ತ್ರಜ್ಞೆ. ಪ್ರಸ್ತುತ ಇವರು ಐರೋಪ್ಯ ಕಮೀಷನ್ ಬಜೆಟ್ ಮತ್ತು ಮಾನವ ಸಂಪನ್ಮೂಲ ವಿಭಾಗದ ಉಪಾಧ್ಯಕ್ಷೆ.

296. ಬಯಲು ಮಲ ಮುಕ್ತ ರಾಜ್ಯವೆಂಬ ಗೌರವಕ್ಕೆ ಪಾತ್ರವಾದ ದಕ್ಷಿಣ ಭಾರತದ ಮೊದಲ ರಾಜ್ಯ ಯಾವುದು?

ಅ) ತಮಿಳುನಾಡು

ಆ) ಕೇರಳ

ಇ) ಮಹಾರಾಷ್ಟ್ರ

ಈ) ತೆಲಂಗಣ

ಕೇರಳ

ಕೇರಳವನ್ನು ಬಯಲುಶೌಚ ಮುಕ್ತ ರಾಜ್ಯ ಎಂದು ಕೇಂದ್ರ ಸರ್ಕಾರ ಮಂಗಳವಾರ ಘೋಷಿಸಿದೆ. ರಾಜ್ಯ ಸಂಸ್ಥಾಪನಾ ದಿನದಂದೇ ಈ ಘೋಷಣೆ ಮಾಡಲಾಗಿದೆ. ಹಿಮಾಚಲ ಪ್ರದೇಶ ಮತ್ತು ಸಿಕ್ಕಿಂ ಗಳನ್ನು ಈಗಾಗಲೇ ಬಯಲು ಶೌಚಮುಕ್ತ ರಾಜ್ಯಗಳು ಎಂದು ಘೋಷಿಸಲಾಗಿದೆ. ಅತಿ ಹೆಚ್ಚು ಜನಸಾಂದ್ರತೆ ಹೊಂದಿರುವ ರಾಜ್ಯಗಳ ಪೈಕಿ ಈ ಸಾಧನೆ ಮಾಡಿದ ಮೊದಲ ರಾಜ್ಯ ಕೇರಳ.

www.karunaduexams.com